
ಸಂಪುಟ 23 ಸಂಚಿಕೆ 6
ಫೆಬ್ರವರಿ 11, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಕ್ಯಾರಂಗ

ಭೂಕಂಪದ ರುದ್ರ ತಾಂಡವ ಮುಂದೇನು?





ಕೇಬಲ್ ಟಿ.ವಿ.ಯ ದುಷ್ಟಜಾಲ

ಕೃಷಿ ಉಳಿಸಲು ಜಾಗತಿಕ ಒಪ್ಪಂದಗಳ ಮರು ಮಾತುಕತೆ ಅಗತ್ಯ

ಖ್ಯಾತ ಕೃಷಿ ವಿಜ್ಞಾನಿ ಡಾ॥ ಸ್ವಾಮಿನಾಥನ್



ಟಿ.ಜಾನ್ ರಾಜೀನಾಮೆ ಮತ್ತು ಬಿಜೆಪಿ ಅನೈತಿಕ ಬೊಬ್ಬೆ

ಎರಡನೇ ಸಂಯುಕ್ತ ರಂಗ ಸರ್ಕಾರ ಪಥನ

ಕಳೆದ ಸಂಚಿಕೆಯಲ್ಲಿ ಸಂಯುಕ್ತ ರಂಗದ ಜಯಭೇರಿ ಹಾಗೂ ರಾಜ್ಯದ ಕಲ್ಯಾಣ ಹಿತಾಸಕ್ತಿಯಿಂದ ಸಿಪಿಐ(ಎಂ) ಮುಖ್ಯಮಂತ್ರಿ ಸ್ಥಾನದ ತ್ಯಾಗ ಈ ಬಗ್ಗೆ ಓದಿದ್ದೀರಿ. ಈ ಸಂಚಿಕೆಯಲ್ಲಿ ಪೋಲೀಸರ ಒಂದು ಗುಂಪು ವಿಧಾನಸಭೆಯ ಲಾಬಿಗೆ ನುಗ್ಗಿ ದಾಂಧಲೆ ನಡೆಸಿ, ಕುರ್ಚಿ ಮೇಜುಗಳನ್ನು ಮುರಿದು ಅನೇಕ ಮಹಾ ನಾಯಕ ಭಾವಚಿತ್ರಗಳನ್ನು ಕಿತ್ತೆಸೆದು ರಂಗ ಸರ್ಕಾರವನ್ನು ವಜಾ ಮಾಡಿ ಬಸುವರವನ್ನು ನೇಣಿಗೆ ಹಾಕಿ ಎಂಬ ಘೋಷಣೆಗಳನ್ನು ಕೂಗಿ, ವಿಶ್ವಾಸ ದ್ರೋಹ ಹಾಗೂ ಪಿತೂರಿಯಿಂದ ಎರಡನೇ ಸಂಯುಕ್ತ ರಂಗ ಸರ್ಕಾರದ ಪತನ.. ಈ ಬಗ್ಗೆ ಓದಿ

ಪಶ್ಚಿಮ ಬಂಗಾಳ ಭೂ ಸುಧಾರಣೆ (ಎರಡನೇ ತಿದ್ದುಪಡಿ) ಮಸೂದೆ 1969ನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಈ ರೀತಿಯ ಒಂದು ಮಸೂದೆ ಮಂಡನೆಯಾದ ದೇಶದ ಪ್ರಥಮ ರಾಜ್ಯ ಪಶ್ಚಿಮ ಬಂಗಾಳ.

ಪ್ರತಿ ಕುಟುಂಬ ಹೊಂದಿರುವ ಮೂರು ಎಕರೆ ಪ್ರದೇಶ ಜಮೀನಿನವರಿಗೆ ತೆರಿಗೆ ಹೇರುವುದಿಲ್ಲ ಎಂದು ಈ ಮಸೂದೆಯಲ್ಲಿ ತಿಳಿಸಲಾಯಿತು. ಒಟ್ಟು 60 ಲಕ್ಷ ರೈತ ಕುಟುಂಬಗಳು ಇದರ ಪ್ರಯೋಜನ ಪಡೆದವು. ಇಂತ ತೆರಿಗೆ ಮನ್ನಾದಿಂದ ಉಂಟಾಗುವ ನಷ್ಟವನ್ನು ಮೂರು ಎಕರೆಗಿಂತ ಹೆಚ್ಚು ಜಮೀನು ಹೊಂದಿರುವ ಭೂಮಾಲಿಕರ ಮೇಲೆ ಹೇರುವ ತೆರಿಗೆಯಿಂದ ಸರಿದೂಗಿಸಿಕೊಳ್ಳಲು ಸೂಚಿಸಲಾಯಿತು.

ಮಾಲಿಕರ ತಪ್ಪು ನೀತಿಗಳು ಮತ್ತು ವಂಚನೆ ತಂತ್ರಗಳ ವಿರುದ್ಧ ಲಕ್ಷಾಂತರ ಕಾರ್ಮಿಕರು ಆಂದೋಲನ ಹಾಗೂ ಚಳುವಳಿಗಳನ್ನು ಹಮ್ಮಿಕೊಂಡರು. ಕಾರ್ಮಿಕರ ಮುಷ್ಕರಗಳನ್ನು ಮುರಿಯಲು ಸಂಯುಕ್ತರಂಗ ಸರಕಾರ ಒಮ್ಮೆಯೂ ಪೊಲೀಸ್ ಪಡೆಯನ್ನು ಕಳುಹಿಸಲಿಲ್ಲ.

ಬೋನಸ್, ರಿಟ್ರೆಂಚ್‌ಮೆಂಟ್ ಮತ್ತು ವೇತನಕ್ಕೆ ಸಂಬಂಧಿಸಿದಂತೆ ಕಾರ್ಮಿಕರು ಆಗಲೇ ಅನೇಕ ಹೋರಾಟಗಳಲ್ಲಿ ಜಯಗಳಿಸಿದ್ದರು. ಪ್ರಥಮ ಸಂಯುಕ್ತರಂಗ ಸರಕಾರದ ಅವಧಿಯಲ್ಲಿ ಕಂಡುಬಂದ ತತ್‌ಕ್ಷಣದ ಹೋರಾಟಗಳು ಈ ಹೊತ್ತಿಗೆ ಒಂದು ಸಂಘಟಿತ ರೂಪವನ್ನು ಪಡೆದಿತ್ತು.

ಸೆಣಬು ಕಾರ್ಖಾನೆಗಳ ಒಟ್ಟು 2.5 ಲಕ್ಷ ಕಾರ್ಮಿಕರು ನಡೆಸಿದ ಒಂದು ವ್ಯವಸ್ಥಿತ ಹೋರಾಟದಿಂದಾಗಿ ಅವರ ವೇತನದಲ್ಲಿ ಮಾಸಿಕ 30 ರೂಪಾಯಿ ಏರಿಕೆ ಆಯಿತು. ಚಹಾ ತೋಟಗಳ ಎರಡು ಲಕ್ಷಕ್ಕೂ ಹೆಚ್ಚಿನ ಕಾರ್ಮಿಕರು, ನೂಲಿನ ಮಿಲ್‌ಗಳ 50 ಸಾವಿರಕ್ಕೂ ಹೆಚ್ಚಿನ ಸಿಬ್ಬಂದಿ ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಸಾವಿರಾರು ಕಾರ್ಮಿಕರೂ ತಮ್ಮ ಹೋರಾಟಗಳಲ್ಲಿ ಸಾಕಷ್ಟು ಯಶಸ್ಸನ್ನು ಗಳಿಸಿದರು. ದುಡಿಮೆಗಾರರ ಹೋರಾಟವನ್ನು ದಮನಿಸುವ ಬದಲು ಸಂಯುಕ್ತರಂಗ ಸರಕಾರ ಅವರಿಗೆ ಸದಾ ಸಹಾಯ ಹಸ್ತವನ್ನು ಚಾಚಿತು.

ಕಾರ್ಮಿಕ ಸಂಘದ ಹಕ್ಕು

ಕಾರ್ಮಿಕ ಸಂಘ (ಪಶ್ಚಿಮ ಬಂಗಾಳ ತಿದ್ದುಪಡಿ) ಮಸೂದೆಯನ್ನು ಮಂಡಿಸಿ ಅಂಗೀಕರಿಸಿದ್ದು ಈ ಅವಧಿಯ ಒಂದು ಮಹತ್ವದ ಕ್ರಮವಾಗಿದೆ. ಕಾರ್ಮಿಕರು ರಹಸ್ಯ ಮತದಾನದ ಮೂಲಕ ತಮ್ಮ ಕಾರ್ಮಿಕ ಸಂಘವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಈ ಕಾನೂನು ನೀಡಿತು. ಅಲ್ಲದೆ ಮಾಲಿಕರು ಅದನ್ನು ಕಾನೂನುಬದ್ಧ ಕಾರ್ಮಿಕ ಸಂಘವೆಂದು ಮಾನ್ಯ ಮಾಡುವಂತೆ ಕ್ರಮ ಕೈಗೊಂಡಿತು. ದುರದೃಷ್ಟವಶಾತ್, ಈ ಮಸೂದೆ ಈಗಲೂ ರಾಷ್ಟ್ರಪತಿಯವರ ಅಂಕಿತಕ್ಕಾಗಿ ಕಾಯುತ್ತಿದೆ.

ಎಂಟನೇ ತರಗತಿವರೆಗೆ ಉಚಿತ ಶಿಕ್ಷಣ ಒದಗಿಸಲು ಹಾಗೂ 6000 ಪ್ರಾಥಮಿಕ ಶಾಲೆಗಳನ್ನು ತೆರೆಯಲು ರಾಜ್ಯ ಸರಕಾರ ನಿರ್ಧರಿಸಿತು. ಮಾಧ್ಯಮಿಕ ಹಂತದ ಶಿಕ್ಷಕರಿಗೆ ಹೊಸ ಪಿಂಚಣಿ ನಿಯಮಗಳು ಮತ್ತು ಪ್ರಾಥಮಿಕ ಶಿಕ್ಷಕರಿಗೆ ಹೊಸ ಪಿಂಚಣಿ ನಿಯಮಗಳು ಮತ್ತು ಪ್ರಾಥಮಿಕ ಶಿಕ್ಷಕರಿಗೆ ಉದ್ಯೋಗ ಭದ್ರತೆ ಒದಗಿಸುವ ಮೂಲಕ ಶಿಕ್ಷಕ ಸಮುದಾಯಕ್ಕೆ ನೆರವಾಗುವ ಅನೇಕ ಕ್ರಮಗಳನ್ನು ಸರಕಾರ ಕೈಗೊಂಡಿತು.

ಸರಕಾರ ಪತನಕ್ಕೆ ಪಿತೂರಿ

ಇಷ್ಟೆಲ್ಲ ಅನುಕೂಲಕರ ಹಾಗೂ ಜನಪರ ಕ್ರಮಗಳನ್ನು ಸರಕಾರ ಕೈಗೊಳ್ಳುತ್ತಿರುವಾಗ ಸಚಿವ ಸಂಪುಟವನ್ನು ಉರುಳಿಸಲು ಪಿತೂರಿಯೊಂದು ರೂಪಿತವಾಗುತ್ತಿತ್ತು.

ಮೊದಲ ಸಂಯುಕ್ತರಂಗ ಸರಕಾರವನ್ನು ಯಾವುದೇ ನ್ಯಾಯಸಮ್ಮತ ಕಾರಣವಿಲ್ಲದೆ ವಜಾ ಮಾಡಲಾಗಿತ್ತು. ಅದರ ಬೆನ್ನಲ್ಲೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಜನರು ಇದಕ್ಕೆ ತಕ್ಕ ಉತ್ತರ ನೀಡಿದ್ದರು. ಕಾಂಗ್ರೆಸ್ ಈಗ ಬೇರೆಯೇ ಒಂದು ತಂತ್ರಕ್ಕೆ ಮೊರೆಹೊಕ್ಕಿತ್ತು. ತೆರೆಮರೆಯಲ್ಲಿ ನಾಟಕವಾಡಿ ಸಂಯುಕ್ತರಂಗ ಸರಕಾರದ ಸ್ಥಾನದಲ್ಲಿ ಒಂದು ಕೈಗೊಂಬೆ ಸರಕಾರವನ್ನು ಸ್ಥಾಪಿಸುವುದು ಕಾಂಗ್ರೆಸ್‌ನ ಏಕೈಕ ಉದ್ದೇಶವಾಗಿತ್ತು.

ಪಿತೂರಿಯ ಸ್ವರೂಪ ತುಂಬಾ ಸರಳವಾಗಿತ್ತು. ಸಿಪಿಐ(ಎಂ) ಮುಂದಿನ ಯಾವುದೇ ಸರಕಾರದಲ್ಲಿ ಇರದಂತೆ ಮಾಡುವುದು ಹಾಗೂ ತಾನು ಸರಕಾರ ರಚನೆಯಲ್ಲಿ ಪ್ರಮುಖ ಪಾತ್ರ- ಕಿಂಗ್ ಮೇಕರ್ ನಿರ್ವಹಿಸುವುದು ಕಾಂಗ್ರೆಸ್‌ನ ಪಿತೂರಿಯ ಸಾರವಾಗಿತ್ತು. ಕಾಂಗ್ರೆಸ್ ಮತ್ತು ಕೇಂದ್ರ ಸರಕಾರ ಅಲ್ಲದೆ ಎಡ 'ಸಮಯಸಾಧಕರು' ಮತ್ತು ಸಂಯುಕ್ತರಂಗದ ಕೆಲವು ಅಂಗಪಕ್ಷಗಳು ಕೂಡ ಈ ಹುನ್ನಾರದ ಪಾತ್ರಧಾರಿಗಳಾಗಿರಬೇಕೆಂದು ನಿರ್ಧಾರವಾಗಿತ್ತು. ಇಂಥ ಒಂದು ಪಿತೂರಿ ಹಿಂದೆ ಕೇರಳದಲ್ಲಿ ರೂಪಗೊಂಡಿದ್ದನ್ನು ನಾವು ಕಂಡಿದ್ದೇವೆ. ಬಂಗಾಳದಲ್ಲಿ ಕೂಡ ಅದೇ ರೀತಿಯ ಘೋಷಣೆ ಮತ್ತು ಅಪಪ್ರಚಾರವನ್ನು ಬಳಸಿಕೊಳ್ಳಲಾಯಿತು. ಸಿಪಿಐ(ಎಂ) ದೊಡ್ಡಣ್ಣನಂತೆ ವರ್ತಿಸುತ್ತಿದೆ. ಹಾಗೂ 'ಪಕ್ಷದ ಲಾಭಕ್ಕಾಗಿ ಆಡಳಿತ ಯಂತ್ರವನ್ನು ಬಳಸಿಕೊಳ್ಳುತ್ತಿದೆ. ಎಂಬುದರ ಸುತ್ತ ಈ ಅಪಪ್ರಚಾರ ಗಿರಕಿ ಹೊಡೆಯುತ್ತಿತ್ತು. ಯುದ್ಧಪೂರ್ವ ಜರ್ಮನಿಯಲ್ಲಿ ಗೋಬೆಲ್ಸ್ ಮಾಡಿದ್ದನ್ನೇ ಇಲ್ಲಿ ಪುನರಾವರ್ತಿಸಲಾಯಿತು. ಬಾಂಗ್ಲಾ ಕಾಂಗ್ರೆಸ್ ಇದರಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸಿತು.

1969ರ ಏಪ್ರಿಲ್‌ನಲ್ಲಿ ರವೀಂದ್ರ ಸರೋವರ ಸ್ಟೇಡಿಯಂನಲ್ಲಿ ನಡೆದ ಒಂದು ಪ್ರಕರಣವನ್ನು ಪಿತೂರಿಗಾರರು ತಮ್ಮ ಕೀಳುಮಟ್ಟದ ರಾಜಕೀಯ ಆಟಕ್ಕೆ ಬಳಸಿಕೊಂಡರು. ಗೃಹಖಾತೆ ಸಿಪಿಐ(ಎಂ) ಕೈಯಲ್ಲಿತ್ತು ಎಂಬ ಒಂದೇ ಕಾರಣಕ್ಕೆ ಸತತ ದಾಳಿ ಆರಂಭವಾಯಿತು. ಘಟನೆಯ ಮರುದಿನ ಪತ್ರಿಕಾ ವರದಿಗಳಲ್ಲಿ ಮಹಿಳೆಯರ ಮೇಲೆ ಯಾವುದೇ ದಬ್ಬಾಳಿಕೆ ನಡೆಯಿತು ಎಂಬ ಚಕಾರವೇ ಇರಲಿಲ್ಲ. ಆದರೆ ಅದಾದ ಒಂದೆರಡು ದಿನಗಳಲ್ಲೇ ಪತ್ರಿಕೆಗಳ ಮುಖ್ಯಪುಟಗಳಲ್ಲಿ ಪುಂಖಾನುಪುಂಖವಾಗಿ ಇಂಥ ವರದಿಗಳು ಕಾಲ್ಪನಿಕ ಕತೆಗಳು ಮುದ್ರಿತವಾದವು. ಜನರನ್ನು ಹೇಗೆ ಕೊಲ್ಲಲಾಯಿತು, ಮಹಿಳೆಯರ ಶವಗಳು ಹೇಗೆ ಸರೋವರದಲ್ಲಿ ತೇಲುತ್ತಿದ್ದವು ಎಂಬ ಬಗ್ಗೆ ಕಾಲ್ಪನಿಕ ವರದಿಗಳು ಪ್ರಕಟಗೊಂಡವು.

ಸರಕಾರದ ವಿರೋಧಿಗಳಿಂದ 'ಬೇಟೆ' ಆರಂಭಗೊಂಡಿತ್ತು. ಕಾನೂನು ಮತ್ತು ಸುವ್ಯವಸ್ಥೆ 'ಕುಸಿದು ಬಿದ್ದ' ವರದಿಗಳು ಕಾಡಿನ ಬೆಂಕಿಯಂತೆ ಹಬ್ಬಿದವು.

ಗೃಹ ಸಚಿವನಾಗಿ ನಾನು ಆ ಘಟನೆಯ ನ್ಯಾಯಾಂಗ ತನಿಖೆಗೆ ಆದೇಶ ನೀಡಿದೆ. ತನಿಖೆಗಾಗಿ ನೇಮಕಗೊಂಡ ಘೋಷ್ ಆಯೋಗ ಅದೇ ವರ್ಷ ಡಿಸೆಂಬರ್ 16 ರಂದು ವರದಿಯನ್ನು ಸಲ್ಲಿಸಿತು. ರವೀಂದ್ರ ಸರೋವರ ಸ್ಟೇಡಿಯಂ ಪ್ರಕರಣದಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆದಿಲ್ಲ ಎಂದು ಆಯೋಗ ಸ್ಪಷ್ಟ ಮಾತುಗಳಲ್ಲಿ ಹೇಳಿತು.

ಸಾಕ್ಷಿ ಹೇಳಲು ಪತ್ರಕರ್ತರನ್ನು ಕೂಡ ಆಯೋಗ ಆಹ್ವಾನಿಸಿತ್ತು. ಆದರೆ ಸ್ಟೇಟ್ಸ್‌ಮ್ಯಾನ್ 'ಮತ್ತು 'ಹಿಂದೂಸ್ತಾನ್ ಸ್ಟಾಂಡರ್ಡ್' ಪ್ರತಿನಿಧಿಗಳು ಮಾತ್ರ ಬಂದಿದ್ದರು. ಮಹಿಳೆಯರಿಗೆ ಅವಮಾನವಾಗುವಂಥ ಒಂದೇ ಒಂದು ಪ್ರಕರಣವನ್ನು ಉದಾಹರಿಸಲು ಅವರಿಗೆ ಆಗಲಿಲ್ಲ.

ಸರಕಾರಕ್ಕೆ ಕಳಂಕ ಹಚ್ಚಲು ವಿರೋಧಿಗಳು ಯಾವ ಮಟ್ಟಕ್ಕೂ ಇಳಿಯಲು ಹೇಸುತ್ತಿರಲಿಲ್ಲ ಎನ್ನುವುದಕ್ಕೆ ಇನ್ನೂ ಒಂದು ಉದಾಹರಣೆ ಕೊಡಬಹುದು. 1969 ಜುಲೈ 29 ರಂದು ಬಸಂತಿಯಲ್ಲಿ ಎಸ್‌ಯುಸಿಐ ಬೆಂಬಲಿಗರ ಜತೆ ನಡೆದ ಘರ್ಷಣೆಯಲ್ಲಿ ಒಬ್ಬ ಪೊಲೀಸ್ ಮೃತಪಟ್ಟ. ಎರಡು ದಿನಗಳ ನಂತರ ಆತನ ಶವವನ್ನು ಮೆರವಣಿಗೆಯಲ್ಲಿ ಒಯ್ಯಲಾಯಿತು. ಈ ಪ್ರಕರಣವನ್ನು ನೆವವನ್ನಾಗಿ ಇಟ್ಟುಕೊಂಡು, ಕೆಲವು ಮೇಲಧಿಕಾರಿಗಳ ಸೂಚನೆ ಮೇರೆಗೆ ಪೊಲೀಸರ ಒಂದು ಗುಂಪು ವಿಧಾನಸಭೆಯ ಲಾಬಿಗೆ ನುಗ್ಗಿ ದಾಂಧಲೆ ನಡೆಸಿತು. ಕುರ್ಚಿಗಳನ್ನು ಮುರಿದರು, ಮೇಜುಗಳನ್ನು ಉರುಳಿಸಿದರು. ಅನೇಕ ಮಹಾನ್ ನಾಯಕರ ಭಾವಚಿತ್ರಗಳನ್ನು ಕಿತ್ತೆಸೆದರು.

'ರಂಗ ಸರಕಾರವನ್ನು ವಜಾಮಾಡಿ,' ಬಸುರನ್ನು ನೇಣಿಗೆ ಹಾಕಿ' ಮೊದಲಾದ ಘೋಷಣೆಗಳನ್ನು ಅವರು ಕೂಗಿದರು. ಕೇವಲ ಐದು ನಿಮಿಷಗಳಲ್ಲಿ ಇಷ್ಟೆಲ್ಲ ದೊಂಬಿ ನಡೆಸಿದ ಪೊಲೀಸರು ಅಷ್ಟಕ್ಕೇ ನಿಲ್ಲದೆ ಅಸೆಂಬ್ಲಿ ಕೊಠಡಿಗೂ ನುಗ್ಗಿ ಮೈಕ್ರೋಫೋನ್‌ಗಳನ್ನು ಕಿತ್ತೆಸೆದರು. ಕೆಲವು ಶಾಸಕರ ಮೇಲೆ ಕೈ ಮಾಡಿದರು. ಸ್ಪೀಕರ್ ಕೊಠಡಿಯಲ್ಲೂ ದಾಂಧಲೆ ನಡೆಸಿದರು.

ಕಾಂಗ್ರೆಸ್ ಶಾಸಕಿಯ ಚಿತಾವಣೆ

ನನ್ನ (ಜ್ಯೋತಿ ಬಸು) ಚೇಂಬರ್‌ಗೆ ಹೋಗಿ 'ಅನ್ಯಾಯಕ್ಕೆ' ಸೇಡು ತೀರಿಸಿಕೊಳ್ಳುವಂತೆ ಕಾಂಗ್ರೆಸ್‌ನ ಒಬ್ಬ ಶಾಸಕಿ ದಾಂಧಲೆಯಲ್ಲಿ ತೊಡಗಿದ್ದ ಪೊಲೀಸರಿಗೆ ಕುಮ್ಮಕ್ಕು ನೀಡಿದರು. ಆಕೆಯ ಇಬ್ಬರು ಸಹೋದ್ಯೋಗಿಗಳು ನನ್ನ ಕೋಣೆಯನ್ನು ತೋರಿಸಿದರು. ನಾನಾಗ ಕೊಠಡಿಯಲ್ಲಿ ಇದ್ದೆ. ಉದ್ರಿಕ್ತರಾಗಿದ್ದ ಪೊಲೀಸರು ಭದ್ರತಾ ಸಿಬ್ಬಂದಿಯ ಸಲಹೆಯನ್ನು ಲೆಕ್ಕಿಸದೆ ಒಳನುಗ್ಗಲು ಯತ್ನಿಸಿದರು. ಅವರನ್ನು ಒಳಗೆ ಬಿಡುವಂತೆ ನಾನೇ ಹೇಳಿದೆ. ಒಳನುಗ್ಗಿದವರ ಪೈಕಿ ಒಬ್ಬ ತಕ್ಷಣವೇ ಹೂಕುಂಡವನ್ನು ಎತ್ತಿ ಗೋಡೆಯತ್ತ ಎಸೆದನು. ಅದು ಚೂರು ಚೂರಾಗಿ ಬಿತ್ತು.

ಅಷ್ಟಾದರೂ ನಾನು ಕುರ್ಚಿಯಲ್ಲಿ ಕುಳಿತೇ ಇದ್ದೆ. ನನ್ನ ನಿಲುವಿನಿಂದಾಗಿ ಬಹುಶಃ ಅವರೆಲ್ಲ ಅಪ್ರತಿಭರಾಗಿರಬೇಕು. "ಸತ್ತವರಿಗೆ ಗೌರವ ತೋರುವ ರೀತಿಯೇ ಇದು? ಈ ರೀತಿಯ ದೊಂಬಿಯ ಅರ್ಥವೇನು? ನೀವು ಒಳಗೆ ನುಗ್ಗಿದ್ದೇಕೆ? ನಿಮ್ಮ ಶಸ್ತ್ರಗಳನ್ನು ವಶಪಡಿಸಿಕೊಂಡರೆ ನೀವೇನು ಮಾಡುತ್ತೀರಿ? ನನ್ನ ಕೋಣೆಯಿಂದ ಹೊರನಡೆಯಿರಿ" ಎಂದು ನಾನು ಹೇಳಿದೆ. ಅವರೆಲ್ಲ ಹೊರ ಹೋದರು. ಲಾಬಿಯಲ್ಲಿ ಜಮಾಯಿಸಿದರು.

ಈ ಸಂದರ್ಭದಲ್ಲಿ ಎಸ್ಪ್‌ಲನೇಡ್‌ನಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ರ್‍ಯಾಲಿಯೊಂದು ನಡೆಯುತ್ತಿತ್ತು. ಪೊಲೀಸರ ದಾಂಧಲೆಯ ಸುದ್ದಿ ಅಲ್ಲಿಗೆ ತಲುಪುತ್ತಲೇ ಸಾವಿರಾರು ಜನರು ವಿಧಾನಸಭೆಯತ್ತ ಧಾವಿಸತೊಡಗಿದರು. ಇದರಿಂದ ಅಪಾಯದ ಸುಳಿವರಿತ ಪೊಲೀಸರು ತಕ್ಷಣವೇ ಕಾಲಿಗೆ ಬುದ್ಧಿ ಹೇಳಿದರು.

ಸಂಯುಕ್ತ ರಂಗದ ಅಂಗಪಕ್ಷಗಳಾದ ಸಿಪಿಐ(ಎಂ) ಮತ್ತು ಬಾಂಗ್ಲಾ ಕಾಂಗ್ರೆಸ್ ನಿಲುವುಗಳು ತದ್ವಿರುದ್ಧವಾಗಿರುತ್ತವಾದ್ದರಿಂದ ಪರಿಸ್ಥಿತಿ ಸಹಿಸಲಸಾಧ್ಯ ಮಟ್ಟ ತಲುಪಿತು. ಒಂದು ಸಣ್ಣ ಪ್ರಕರಣ ಅಜಯ್ ಮುಖರ್ಜಿ ಮತ್ತು ನನ್ನ ನಡುವೆ ವಿವಾದ ಹುಟ್ಟುಹಾಕಿತು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ನಡುವೆ ವೈಯಕ್ತಿಕ ವೈಮನಸ್ಯ ಇರಲಿಲ್ಲವೇನೋ ನಿಜ. ಆದರೆ ಒಬ್ಬ ಪೊಲೀಸ್ ಅಧಿಕಾರಿಯನ್ನು ವರ್ಗಾಯಿಸಿದ ನನ್ನ ಆದೇಶವನ್ನು ಮುಖ್ಯಮಂತ್ರಿ ಮುಖರ್ಜಿ ನನ್ನೊಂದಿಗೆ ಚರ್ಚಿಸದೇ ರದ್ದುಪಡಿಸಿದ್ದು ವಿಚಿತ್ರವಾಗಿತ್ತು. ಮುಖ್ಯಮಂತ್ರಿ ತನ್ನ ಅಧಿಕಾರವನ್ನು ಬಳಸಬೇಕಾದಂಥ ಮಹತ್ವದ ವಿಚಾರವೇನೂ ಅದು ಆಗಿರಲಿಲ್ಲ.

ಇನ್ನು ಒಂದು ಅಸಂಗತ ಪ್ರಕರಣ ಇನ್ನೂ ನೆನಪಿದೆ. ದೇಶದ ಯಾವುದೇ ಒಬ್ಬ ಮುಖ್ಯಮಂತ್ರಿ ಮಾಡದಂಥ ಘನಕಾರ್ಯವನ್ನು ಅಜಯ್ ಮುಖರ್ಜಿ ಮಾಡಿದರು. ಕಾನೂನು ಮತ್ತು ಸುವ್ಯವಸ್ಥೆ 'ಕುಸಿದುಬಿದ್ದಿರುವುದರ' ವಿರುದ್ಧ ಸ್ವತಃ ಮುಖರ್ಜಿ ಉಪವಾಸ ಸತ್ಯಾಗ್ರಹ ಮಾಡಿದರು. ಅಲ್ಲದೇ ಸ್ವತಃ ತನ್ನದೇ ಸರಕಾರವನ್ನು 'ಬರ್ಬರ' ಎಂದು ವರ್ಣಿಸಿದರು.

1969 ಡಿಸೆಂಬರ್ 1 ರಂದು ಮುಖರ್ಜಿ ಸತ್ಯಾಗ್ರಹ ಆರಂಭಿಸಿದರು. ಅದು ನಮ್ಮ ವಿರುದ್ಧವಿದ್ದ ಆಡಳಿತಶಾಹಿ ವರ್ಗದ ಒಂದು ವಿಭಾಗದವರ ವಿಜಯವಾಗಿತ್ತು. ಆದೇಶಗಳನ್ನು ಉಲ್ಲಂಘಿಸುವುದು, ಕೆಲಸದ ಸಂಸ್ಕೃತಿಗೆ ನಿರ್ಲಕ್ಷ ತೋರುವುದು ದಿನನಿತ್ಯದ ನೋಟವಾಯಿತು. ಅಜಯ್ ಮುಖರ್ಜಿ ಪಕ್ಷದವರೇ ಆದ ಇನ್ನೊಬ್ಬ ಮಂತ್ರಿ ಸುಶೀಲ್ ದಾರಾ ಇದರ ಮುಂಚೂಣಿಯಲ್ಲಿದ್ದರು. ಗೋಬೆಲ್ಸ್‌ನನ್ನು ಮೀರುವ ಸಾಹಸಕ್ಕೆ ಆತ ಕೈ ಹಾಕಿದ.

ಸರಕಾರವನ್ನು ಉರುಳಿಸುವ ಕಾಯಕದಲ್ಲಿ ಬಲಪಂಥೀಯ ಕಮ್ಯುನಿಸ್ಟರು ಕೂಡ ಕೈ ಜೋಡಿಸಿದರು. ಸಿಪಿಐ(ಎಂ) ಬೆಂಬಲವಿಲ್ಲದೆ ಸರಕಾರ ರಚಿಸಲು ಸಾಧ್ಯ ಎಂದು ಬಹಿರಂಗ ಹೇಳಿಕೆಗಳನ್ನು ನೀಡಲು ಆರಂಭಿಸಿದರು. ತೆರೆಮರೆಯ ಕುಕೃತ್ಯಗಳು ಆರಂಭವಾದವು. ಸರಕಾರವನ್ನು ಉಳಿಸಿ ಜನಪರ ನೀತಿಗಳನ್ನು ಜಾರಿಗೊಳಿಸಲು ನಾವು ಗರಿಷ್ಠ ಪ್ರಯತ್ನ ಮಾಡಿದೆವು. ಆದರೆ, 1970 ಡಿಸೆಂಬರ್ 16ರ ವೇಳೆಗೆ ಅಜಯ್ ಬಾಬು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡುತ್ತಾರೆ ಎಂದು ಬಾಂಗ್ಲಾ ಕಾಂಗ್ರೆಸ್ ಕಾರ್ಯಸಮಿತಿ ನಿರ್ಧರಿಸಿತು.

ಈ ರೀತಿ ಆದಲ್ಲಿ ಉದ್ಭವಿಸುವ ಪರಿಸ್ಥಿತಿ ಬಗ್ಗೆ ನಮ್ಮ ಪಕ್ಷದ ರಾಜ್ಯ ಕಾರ್ಯದರ್ಶಿ ಪ್ರಮೋದ್ ದಾಸ್‌ಗುಪ್ತ ರಂಗದ ಎಲ್ಲ ಅಂಗಪಕ್ಷಗಳಿಗೆ ಒಂದು ಪತ್ರ ಬರೆದರು. ಕಾಂಗ್ರೆಸ್‌ನ ಬೆಂಬಲದೊಂದಿಗೆ ಮಿನಿ-ರಂಗ ಸರಕಾರವನ್ನು ರಾಜ್ಯದ ಮೇಲೆ ಹೇರುವುದು ಜನತೆಗೆ ಎಸಗುವ ವಂಚನೆಯಾಗುತ್ತದೆ ಎಂದು ಪ್ರಮೋದ್ ದಾಸ್‌ಗುಪ್ತಾ ವಿವರಿಸಿದರು.

ಬಾಂಗ್ಲಾ ಕಾಂಗ್ರೆಸ್‌ನ ಬೆಂಬಲ ಇಲ್ಲದೆಯೂ ರಂಗಸರಕಾರ ಉಳಿಯುತ್ತದೆ ಎಂಬುದು ಲೆಕ್ಕಾಚಾರದಿಂದ ಸ್ಪಷ್ಟವಾಗಿತ್ತು. ಅಜಯ್ ಬಾಬು ಮತ್ತು ಧಾರಾ ಅವರ ಕೃತ್ಯಗಳನ್ನು ಬಾಂಗ್ಲಾ ಕಾಂಗ್ರೆಸ್ ಮುಖಂಡ ಸುಕುಮಾರ್ ರಾಯ್ ಖಂಡಿಸಿದರು. ತಮ್ಮ ಪಕ್ಷದ ಅನೇಕ ನಾಯಕರೂ ಕಾರ್ಯಕರ್ತರೂ ಇನ್ನೂ ರಂಗದ ಜತೆ ಇದ್ದಾರೆ ಎಂದು ರಾಯ್ ಸ್ಪಷ್ಟಪಡಿಸಿದರು. ರಂಗ ಸರಕಾರ ಉಳಿಯಬೇಕು ಎಂದು ಹೇಳಿದರು. ಆದರೆ ಸಿಪಿಐ, ಫಾರ್ವರ್ಡ್ ಬ್ಲಾಕ್ ಮತ್ತು ಎಸ್‌ಯುಸಿಐನ ಯೋಚನೆಯೇ ಬೇರೆಯಿತ್ತು. ಅವರು ಸಿಪಿಐ(ಎಂ)ಗೆ ಬದ್ಧ ವಿರೋಧಿಯಾಗಿದ್ದರು.

ಅಜಯ್‌ಬಾಬು ಮಾರ್ಚ್ 16 ರಂದು ರಾಜಿನಾಮೆ ನೀಡಿದರು. ಅದನ್ನು ಪ್ರತಿಭಟಿಸಿ ಬಿಪಿಟಿಯುಸಿ ಮತ್ತು ಜುಲೈ 12 ಸಮಿತಿಯ ನೇತೃತ್ವದಲ್ಲಿ ಮರುದಿನವೇ ಯಶಸ್ವಿ ಸಾರ್ವತ್ರಿಕ ಮುಷ್ಕರ ನಡೆಯಿತು. ನಾನು ರಾಜ್ಯ ಪಾಲರನ್ನು ಭೇಟಿಯಾಗಿ ಏಕೈಕ ದೊಡ್ಡಪಕ್ಷವಾದ ಸಿಪಿಐ(ಎಂ)ಗೆ ಸರಕಾರ ರಚಿಸಲು ಅವಕಾಶ ನೀಡಬೇಕೆಂದು ಕೋರಿದೆ. ವಿಧಾನಸಭೆಯಲ್ಲಿ ನಮ್ಮ ಬಲವನ್ನು ಸಾಬೀತುಪಡಿಸುವುದಾಗಿಯೂ ಹೇಳಿದೆ. ಕಾಂಗ್ರೆಸ್, ಬಾಂಗ್ಲಾ ಕಾಂಗ್ರೆಸ್, ಸಿಪಿಐ, ಫಾರ್ವರ್ಡ್ ಬ್ಲಾಕ್ ಮತ್ತು ಎಸ್‌ಯುಸಿಐ ರಾಜ್ಯಪಾಲರನ್ನು ಭೇಟಿ ಮಾಡಿ ಸಿಪಿಐ(ಎಂ)ಗೆ ಸರಕಾರ ರಚಿಸಲು ಅವಕಾಶ ಕೊಡಬಾರದು ಎಂದು ಹೇಳಿದವು.

ಅಂದಿನ ರಾಜ್ಯಪಾಲ ಶಾಂತಿ ಸ್ವರೂಪ ಅದನ್ನೇ ಮಾಡಿದರು. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಹಸಿರು ನಿಶಾನೆ ತೋರಿದರು. ಮಾರ್ಚ್ 29ರಂದು ರಾಷ್ಟ್ರಪತಿ ಆಡಳಿತ ಜಾರಿಯಾಯಿತು. ಆದರೆ ರಾಜ್ಯಪಾಲರು ವಿಧಾನಸಭೆ ವಿಸರ್ಜನೆ ಅಥವಾ ಮಧ್ಯಾಂತರ ಚುನಾವಣೆ ಬಗ್ಗೆ ಏನನ್ನು ಹೇಳಲಿಲ್ಲ.

ಈ ರೀತಿಯಾಗಿ, 13 ತಿಂಗಳು ಅಧಿಕಾರದಲ್ಲಿದ್ದ ಎರಡನೇ ಸಂಯುಕ್ತರಂಗ ಸರಕಾರ ವಿಶ್ವಾಸದ್ರೋಹ ಹಾಗೂ ಪಿತೂರಿಯಿಂದಾಗಿ ನಿರ್ಗಮಿಸಿತು. ಒಂದು ಜನಪರ ಸರಕಾರ ಜನವಿರೋಧಿಗಳ ಕುತಂತ್ರದಿಂದಾಗಿ ಅಂತ್ಯ ಕಂಡಿತು.

(ಬಸು ಕೊಲೆಗೆ ಯತ್ನ........... ಮುಂದಿನ ಸಂಚಿಕೆಯಲ್ಲಿ).

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವ ಕುಂದಾಪುರ

ಧಾರವಾಹಿ: 56

ಕರ್ನಾಟಕದ ಪ್ರಗತಿ ಎಷ್ಟು ನಿಜ? ಏನು ಸ್ಥಿತಿಗತಿ? - ಜೈರಾಂ ರಮೇಶ್

ಕರ್ನಾಟಕದ ಆರ್ಥಿಕ ಬೆಳವಣಿಗೆ ಮಧ್ಯಮ ಗತಿಯದು. ಮೂವರಲ್ಲಿ ಒಬ್ಬ ಕಡು ಬಡವ ಇದ್ದಾನೆ. ಅಲ್ಲಿನ ಹೆಣ್ಣು ಮಕ್ಕಳ ಶಿಕ್ಷಣ ಪ್ರಮಾಣ ಅತಿ ಹಿಂದುಳಿದ ಆಫ್ರಿಕಾ ದೇಶಕ್ಕಿಂತ ಕಡಿಮೆ.

ಕರ್ನಾಟಕ ಆರ್ಥಿಕ ಪ್ರಗತಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಎಂಬ ಚಿತ್ರಣ ಬಿಂಬಿತವಾಗುತ್ತಿರುವ ಸಂದರ್ಭದಲ್ಲೇ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಜೈರಾಂ ರಮೇಶ್ ಅವರು ರಾಜ್ಯದ ಆರ್ಥಿಕ ಬೆಳವಣಿಗೆಯ ಮತ್ತೊಂದು ಮಗ್ಗುಲನ್ನು ತೆರೆದಿದ್ದಾರೆ.

ಭಾರತೀಯ ವಿದ್ಯಾಭವನದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ದಿ| ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಸ್ಮಾರಕ ದತ್ತಿ ಉಪನ್ಯಾಸದಲ್ಲಿ 'ಕರ್ನಾಟಕ ಆರ್ಥಿಕ ಮುನ್ನೋಟ ಹೊಸ ಸವಾಲುಗಳು' ಎಂಬ ವಿಷಯದ ಕುರಿತು ಅವರು ಮಾತನಾಡುತ್ತಿದ್ದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ನಾಯಕರಾಗುವ ಜೊತೆಯಲ್ಲಿ ಸ್ಥಳೀಯ ಅಭಿವೃದ್ಧಿಗೂ ಈ ತಂತ್ರಜ್ಞಾನದ ಬಳಕೆ ಆಗಬೇಕು. ಬೆಂಗಳೂರು ಮಾಹಿತಿ ತಂತ್ರಜ್ಞಾನ 'ಅಗ್ರಹಾರ'ವಾಗಿ ಬೆಳೆಯುತ್ತಿದೆ. ಕೆಲವೇ ವರ್ಗದ ಜನ ಮಾತ್ರ ಅದರ ಲಾಭ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಎಲ್ಲಾ ಸಮಸ್ಯೆಗಳಿಗೂ ಮಾಹಿತಿ ತಂತ್ರಜ್ಞಾನ ಮದ್ದಲ್ಲ ಮತ್ತು ಮೂಲಭೂತ ಸಮಸ್ಯೆಗಳನ್ನು ಅದರಿಂದ ಪರಿಹರಿಸಲೂ ಸಾಧ್ಯವಿಲ್ಲ ಎಂದೂ ಅವರು ಅಭಿಪ್ರಾಯಪಟ್ಟರು.

ಆರ್ಥಿಕ ಪ್ರಗತಿಯಲ್ಲಿ (ಎಕನಾಮಿಕ್ ಗ್ರೋಥ್) ಕರ್ನಾಟಕ 6ನೇ ಸ್ಥಾನದಲ್ಲಿದೆ. ಮೊದಲ ಸ್ಥಾನ ಗುಜರಾತ್‌ನದು. 1980-81 ರಿಂದ 90-91 ರ ಅವಧಿಯಲ್ಲಿ ಪ್ರತಿಶತ 5.08 ಇದ್ದ ಪ್ರಗತಿ 91-92 ರಿಂದ 98-99ರ ಅವಧಿಗೆ ಪ್ರತಿ ಶತ 8.15 ಕ್ಕೆ ಹೆಚ್ಚಿತು. 6ನೇ ಸ್ಥಾನದಲ್ಲಿರುವ ಕರ್ನಾಟಕ ಈ ಅವಧಿಯಲ್ಲಿ ಪ್ರತಿಶತ 4.56 ರಿಂದ 5.89ರಷ್ಟು ಮಾತ್ರ ಹೆಚ್ಚಿದೆ. ರಾಜ್ಯದಲ್ಲಿ 1990-91 ರಿಂದ ಹೇಳಿಕೊಳ್ಳುವ ಪ್ರಗತಿ ಆಗಿಲ್ಲ.

ಬಡತನ ನಿವಾರಣೆಯಲ್ಲಿ ನಾವು ಹೇಳಿಕೊಳ್ಳುವ ಸಾಧನೆ ಮಾಡಿಲ್ಲ. ರಾಜ್ಯದಲ್ಲಿ ಈಗಲೂ ಮೂವರಲ್ಲಿ ಒಬ್ಬ ಕಡುಬಡವ ಇದ್ದಾನೆ. ಮೂರನೇ ಒಂದು ಭಾಗದಷ್ಟು ಜನ ಕಡು ಬಡವರಿದ್ದಾರೆ ಎಂದು ಜೈರಾಂ ರಮೇಶ್ ಹೇಳಿದರು.

ಶಿಕ್ಷಣದಲ್ಲಿ ಅದರಲ್ಲೂ ಉನ್ನತ ಶಿಕ್ಷಣದಲ್ಲಿ ಕರ್ನಾಟಕಕ್ಕೆ ಹೆಸರಿದೆ. 75 ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳಿವೆ. ಆದರೆ, ರಾಜ್ಯದಲ್ಲಿನ ಹೆಣ್ಣು ಮಕ್ಕಳ ಸಾಕ್ಷರತೆ ಪ್ರಮಾಣ ನೋಡಿದರೆ ಗಾಬರಿ ಆಗುವಂತಹದ್ದು. ಆಫ್ರಿಕಾದ ಅತಿ ಹಿಂದುಳಿದ ಸಹಾರ ರಾಷ್ಟ್ರಗಳಿಗಿಂತ ಕರ್ನಾಟಕ ಹಿಂದುಳಿದಿದೆ. ರಾಯಚೂರಿನಲ್ಲಿ 22, ಕೊಪ್ಪಳದಲ್ಲಿ 23, ಬೀದರ್ 31, ಕೋಲಾರ 38 ಪ್ರತಿಶತ ಇದೆ. ಆದರೆ, ಆಫ್ರಿಕಾದ ಅತಿ ಹಿಂದುಳಿದ ದೇಶಗಳಲ್ಲಿ ಹೆಣ್ಣು ಮಕ್ಕಳ ಸಾಕ್ಷರತೆ ಪ್ರಮಾಣ ಶೇ. 40ಕ್ಕೂ ಹೆಚ್ಚು ಎಂದರು.

ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರವೂ ಕರ್ನಾಟಕ 7ನೇ ಸ್ಥಾನದಲ್ಲಿದೆ. ಒಟ್ಟಾರೆ ರಾಜ್ಯದ ಆರ್ಥಿಕ ಪ್ರಗತಿ ಮಧ್ಯಮಗತಿಯದ್ದಾಗಿದೆ. ನಾವು ನಮಗಿಂತ ಕೆಳಗಿನವರನ್ನು ಕಂಡು ಬೀಗುವುದಕ್ಕಿಂತ, ನಮಗಿಂತ ಮುಂದುವರೆದಿರುವವರ ಜೊತೆ ಹೋಲಿಸಿಕೊಂಡು ನೋಡಬೇಕು.

ಕರ್ನಾಟಕದ ಈ ಸ್ಥಿತಿಗೆ ಮೂಲಭೂತ ಸೌಕರ್ಯಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಆಗದಿರುವುದೇ ಕಾರಣ. ಕೈಗಾರಿಕೆ, ಕೃಷಿ, ಶಿಕ್ಷಣ, ನೀರು ಪೂರೈಕೆ ಯಂತಹ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚಬೇಕು.

ರಾಜ್ಯ ಸರ್ಕಾರದ ಒಟ್ಟು ಆದಾಯದಲ್ಲಿ ಶೇ. 75ರಷ್ಟು ತಪ್ಪಿಸಲಾಗದ ವೆಚ್ಚಕ್ಕಾಗಿಯೇ (ಕಮಿಟೆಡ್ ಎಕ್ಸ್‌ಪೆಂಡಿಚರ್) ಹೋಗುತ್ತದೆ. ಶೇ. 53ಕ್ಕಿಂತ ಹೆಚ್ಚು ಆದಾಯ ನೌಕರರ ಸಂಬಳ, ಪಿಂಚಣಿಗಾಗಿಯೇ ಹೋಗುತ್ತದೆ. 7 ಲಕ್ಷ ನೌಕರರು ಮತ್ತು 4 ಲಕ್ಷ ಪಿಂಚಣಿದಾರರಿದ್ದಾರೆ. ಹೀಗಾದರೆ ಶಿಕ್ಷಣ, ಆರೋಗ್ಯ, ರಸ್ತೆ ಅಭಿವೃದ್ಧಿಗೆ ಎಲ್ಲಿಂದ ಹಣ ತರಬೇಕು ಎಂದು ಜೈರಾಂ ರಮೇಶ್ ಪ್ರಶ್ನಿಸಿದರು.

ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಗೆ ಖಾಸಗಿ ಸಂಸ್ಥೆಗಳು ಕಾರಣವಲ್ಲ. ಇದಕ್ಕೆ ಸಾರ್ವಜನಿಕ ಉದ್ಯಮ ಕ್ಷೇತ್ರದಲ್ಲಿ ಬಹಳ ಹಿಂದಿನಿಂದಲೂ ಅಪಾರ ಪ್ರಮಾಣದ ಹೂಡಿಕೆ ಕಾರಣ. ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಬೇಕಾದ ಮೂಲಭೂತ ಸೌಕರ್ಯ ಮೊದಲೇ ಇಲ್ಲಿ ಸೃಷ್ಟಿಯಾಗಿತ್ತು. ಆ ಸೌಲಭ್ಯವನ್ನು ಖಾಸಗಿ ಸಂಸ್ಥೆಗಳು ಸಮರ್ಪಕವಾಗಿ ಬಳಸಿಕೊಂಡಿವೆ ಎಂದರು.

ಮಾಹಿತಿ ತಂತ್ರಜ್ಞಾನದ ಪ್ರಯೋಜನಗಳನ್ನು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ಮತ್ತು ಸ್ಥಳೀಯ ಮಟ್ಟದಲ್ಲಿಯೂ ಈ ಬೆಳವಣಿಗೆ ಆಗಬೇಕು. ಮಾಹಿತಿ ತಂತ್ರಜ್ಞಾನ ಕ್ಷೇತ್ರ ಮಾತ್ರ ಆಕರ್ಷಣೀಯ ಕ್ಷೇತ್ರವಾಗಿದೆ. ಕೃಷಿ, ಉದ್ಯಮ, ಶಿಕ್ಷಣ ಆರೋಗ್ಯವೂ ಅದೇ ಪ್ರಮಾಣದಲ್ಲಿ ಬೆಳೆಯಬೇಕು ಎಂದು ಜೈರಾಂ ರಮೇಶ್ ಹೇಳಿದರು.

ರಾಜ್ಯದ ಆರ್ಥಿಕ ಬೆಳವಣಿಗೆ ರಾಜಕೀಯ ಇಚ್ಛಾ ಶಕ್ತಿ ಮತ್ತು ಆಡಳಿತಶಾಹಿಯ ದಕ್ಷತೆ ಅತ್ಯಗತ್ಯ ಎಂದೂ ಹೇಳಿದರು.

ಪ. ಬಂಗಾಳದ ಪ್ರಗತಿಗೆ ಶ್ಲಾಘನೆ

ಏನೂ ಪ್ರಗತಿ ಇಲ್ಲ ಎಂದು ಹೇಳಲಾಗುವ ಪಶ್ಚಿಮ ಬಂಗಾಳ ವಾಸ್ತವವಾಗಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ಅವರು ವಿಶೇಷವಾಗಿ ಉಲ್ಲೇಖಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಾರ್ತಾ ಸಚಿವ ಪ್ರೊ| ಬಿ.ಕೆ. ಚಂದ್ರಶೇಖರ್ ಮಾತನಾಡಿ, ಕೇರಳದಲ್ಲಿ ಜಾರಿಯಾಗಿರುವ ತಳಮಟ್ಟದ ಜನತಾ ಯೋಜನೆಯನ್ನು ರಾಜ್ಯದಲ್ಲಿಯೂ ಅನುಷ್ಠಾನಕ್ಕೆ ತರುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಆರ್ಥಿಕ ತಜ್ಞ ಮತ್ತು ಕರ್ನಾಟಕದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕರ್ನಾಟಕ ಸರ್ಕಾರದ ನೀತಿ ನಿರೂಪಣೆಯ ಮೇಲೆ ಅಪಾರ ಪ್ರಭಾವ ಬೀರುತ್ತಿರುವ ರಮೇಶ್‌ರವರ ಅಭಿಪ್ರಾಯದಲ್ಲಿಯೇ ಕರ್ನಾಟಕದ ವಾಸ್ತವತೆಯ ಕೆಲ ಅಂಶಗಳು ಮಂಡಿಸಲ್ಪಟ್ಟಿವೆ.

ಅಂತೂ ಕೊನೆಗೆ ಕರ್ನಾಟಕ ರಾಜ್ಯ ಸರ್ಕಾರ ವಿದ್ಯುತ್ 'ದರಏರಿಕೆ ಬಗ್ಗೆ ತನ್ನ ನಿರ್ಧಾರವನ್ನು ಪ್ರಕಟಿಸಿಯೇಬಿಟ್ಟಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಮಾಡಿದ ವಿದ್ಯುತ್ ದರ ಏರಿಕೆಯನ್ನು ನೀರಾವರಿ ಪಂಪ್‌ಸೆಟ್‌ಗಳ ಹೊರತು ಸಾರಾಸಗಟಾಗಿ ಒಪ್ಪಿದೆ. ಹೀಗಾಗಿ 'ಐಕ್ಯರಂಗ'ದಲ್ಲಿ ಈಗಾಗಲೇ ವಿದ್ಯುತ್ ನಿಯಂತ್ರಣ ಆಯೋಗದ ಆಜ್ಞೆಯ ಬಗ್ಗೆ ಮಾಡಿದ್ದ ವಿಮರ್ಶೆಯನ್ನು ಸರ್ಕಾರದ ತೀರ್ಮಾನಕ್ಕೂ ಸಾರಾಸಗಟಾಗಿ ಅನ್ವಯಿಸಬಹುದು. ಶ್ರೀಮಂತರಿಗೆ ಅಗ್ಗ ಬಡವರಿಗೆ ದುಬಾರಿ.

ಹೋರಾಟದ ಫಲ

ನೀರಾವರಿ ಪಂಪ್‌ಸೆಟ್ ಬಳಕೆದಾರ ರೈತರಿಗೆ ಮಾತ್ರ ಕೆಲವು ವಿನಾಯತಿಗಳನ್ನು ನೀಡಿದ್ದಾರೆ. 10 ಮತ್ತು ಅದಕ್ಕಿಂತ ಕಡಿಮೆ ಪಂಪ್‌ಸೆಟ್‌ಗಳ ಬಳಕೆದಾರರಲ್ಲಿ ಎರಡು ಗುಂಪನ್ನು ವಿದ್ಯುತ್ ನಿಯಂತ್ರಣ ಆಯೋಗ ಮಾಡಿತ್ತು. ಅದನ್ನು ಸರ್ಕಾರ ಅಂಗೀಕರಿಸಿದೆ. ಆದರೆ ಇದರಲ್ಲಿ ಮೊದಲ ವರ್ಗಕ್ಕೆ ಒಂದು ಎಚ್.ಪಿ.ಗೆ 300ರೂ ನಿಂದ 540 ರೂಗಳನ್ನು ಏರಿಸಬೇಕೆಂದು ವಿದ್ಯುತ್ ನಿಯಂತ್ರಣ ಆಯೋಗ ಮಾಡಿದ ಆಜ್ಞೆಯನ್ನು ಸರ್ಕಾರ ಒಂದು ವರ್ಷಕಾಲ ಮುಂದಕ್ಕೆ ಹಾಕಿದೆ. ಆ ಜೊತೆಗೆ 10 ಹೆಚ್.ಪಿ. ವರೆಗಿನ ಒಂದು ಪಂಪ್‌ಸೆಟ್ ರೈತರಿಗಾಗಿಯೇ ಸೃಷ್ಟಿಸಿದ್ದ ಈ ಎಲ್ ಟಿ4 (ಎ) ಎಂಬ ಗುಂಪನ್ನು ಕರ್ನಾಟಕ ಸರ್ಕಾರ ವಿಸ್ತರಿಸಿದೆ. ಈಗ ಈ ಗುಂಪಿನಲ್ಲಿ 10 ವರ್ಗದವರೆಗಿನ ಮೂರು ಪಂಪ್‌ಸೆಟ್‌ಗಳನ್ನು ಹೊಂದಿರುವ ರೈತ ಕೂಡ ಸೇರುತ್ತಾರೆ. ವಿದ್ಯುತ್ ಆಯೋಗ ಟ್ರಾಕ್ಟರ್ ಹಾಗೂ ಟೆಲಿಫೋನ್ ಹೊಂದಿರುವವರನ್ನು ಈ ಗುಂಪಿನಿಂದ ಹೊರಗಿಟ್ಟಿದ್ದರೆ ಸರ್ಕಾರ ಟ್ರಾಕ್ಟರ್‌ಗಳನ್ನು ಹೊರತುಪಡಿಸಿ ನಾಲ್ಕು ಚಕ್ರಗಳ ವಾಹನ ಹೊಂದಿರುವವರನ್ನು (ಜೀಪು, ಕಾರು, ವ್ಯಾನ್, ಬಸ್ ಇತ್ಯಾದಿ) ಹಾಗೂ ಮೊಬೈಲ್ ಫೋನ್ ಹೊಂದಿರುವವರನ್ನು ಈ ಗುಂಪಿನಿಂದ ಹೊರಗಿಟ್ಟಿದೆ.

ಈ ಎರಡನೇಯ ಗುಂಪು ಎಲ್.ಟಿ. 4(ಬಿ) ಒಂದು ಎಚ್.ಪಿ.ಗೆ 900ರೂ ನಂತೆ ಅಥವಾ ಒಂದು ಯೂನಿಟ್‌ಗೆ ರೂ.1.35 ನಂತೆ ವಿದ್ಯುತ್ ದರ ತೆರಬೇಕಾಗುತ್ತದೆ.

ಹೀಗಾಗಿ ಪಂಪ್‌ಸೆಟ್ ಬಳಕೆದಾರರಲ್ಲಿ ಸಣ್ಣ ಮಧ್ಯಮ ರೈತರ ಒಂದು ದೊಡ್ಡ ವಿಭಾಗಕ್ಕೆ ಈ ವರ್ಷ ವಿದ್ಯುತ್ ದರದ ಏರಿಕೆಯಿಲ್ಲ.

ಮುಂದುವರಿಯುವುದು

ಕರ್ನಾಟಕ ಈ ವಾರ ಒಂದು ನೋಟ

ಟಿ.ಜಾನ್‌ರ ಅಸಂಬದ್ಧ ವಿಶ್ಲೇಷಣೆ ಮತ್ತು ಬಿಜೆಪಿ ಅನೈತಿಕತೆ

ಎಸ್.ವೈ.ಗುರುಶಾಂತ್

ಸಚಿವ ಜಾನ್ ಈಗ ಮಾಜಿ. ಈ ಸರಾಯಿ ಸರದಾರ ಸ್ಥಾನಕ್ಕೆ ಕೇರಳದ ಕೊಲ್ಲಂ ಸಾರಾಯಿ ದುರಂತದ ಆರೋಪಿಯಾಗಿರುವುದು ಬಯಲಾದಗಲೇ ರಾಜೀನಾಮೆ ನೀಡಬೇಕಾಗಿತ್ತು. ಹಾಗೆ ಮಾಡಲಿಲ್ಲ. ಕೃಷ್ಣರೂ ಕೇಳಲಿಲ್ಲ. ಆದರೀಗ ಒಂದು ನಾಟಕೀಯ ಬೆಳವಣಿಗೆಯಲ್ಲಿ ರಾಜೀನಾಮೆ ಕೊಟ್ಟುಸಂಪುಟದಿಂದ ಹೊರ ನಡೆದಿದ್ದಾರೆ.

ಖಾಸಗಿ ಸಮಾರಂಭವೊಂದರಲ್ಲಿ ಗುಜರಾತ್‌ನ್ನು ಅಲ್ಲಿ ಕ್ರಿಶ್ಚಿಯನ್ನರ ಮೇಲೆ ಆಕ್ರಮಣ ನಡೆದಿದ್ದರಿಂದ ಅಲ್ಲಿ ಭೂಕಂಪ ಸಂಭವಿಸಿತು ಎಂದು ವ್ಯಾಖ್ಯಾನ ಮಾಡಿದ್ದಾರೆ. ಇದು ಅವರ ಧಾರ್ಮಿಕ ನಂಬಿಕೆಯಾಧರಿಸಿರಬಹುದು. ಇಂತಹ ನಂಬಿಕೆ ಇರಿಸಿಕೊಂಡವರು ಇತರ ಧರ್ಮಗಳಲ್ಲಿಯೂ ಕಾಣಸಿಗುತ್ತಾರೆ. ಆದರೆ ಈ ಹೇಳಿಕೆಯೇ ಅತ್ಯಂತ ಅಸಂಬದ್ಧ, ವಿವೇಚನಾ ರಹಿತವಾದದ್ದು.



ಕೊಸ್ನ. ಸಾರ್ವಜನಿಕ ವ್ಯಕ್ತಿಗೆ ತಕ್ಕುದಲ್ಲ. ಇದು ಕೇಬಲ್ ಟಿ.ವಿಯಲ್ಲಿ ಪ್ರಸಾರವೂ ಆಯಿತು.

ಈ ಹೇಳಿಕೆ ಸಂಪುಟದಲ್ಲಿಯೂ, ಹೊರಗೂ [illegible] ಜಾನ್ ತಮ್ಮ ಹೇಳಿಕೆಯ ಬಗ್ಗೆ ವಿಷಾದ ವ್ಯಕ್ತಪಡಿಸಿ ತಪ್ಪೊಪ್ಪಿಕೊಂಡರು. ಆದರೆ ಜಾನ್ ಮಾತಿನಿಂದ ಕಿವಿ ನಿಮಿರಿ, ಹುರಿಗಟ್ಟಿಸಿಕೊಂಡು ನಿಂತಿದ್ದ ಬಿಜೆಪಿ-ಸಂಘಪರಿವಾರ ಅವರನ್ನು ಸಂಪುಟದಿಂದಲೇ ವಜಾ ಮಾಡಬೇಕೆಂದಿತ್ತು. ನಂತರ ರಾಜಿನಾಮೆ ಕೇಳಿತು. ಗಾಂಧಿ ಪ್ರತಿಮೆಯ ಮುಂದೆ ನಾಯಕರ ದಂಡು ಧರಣಿಯನ್ನು ನಡೆಸಿತು. ಅಷ್ಟರಲ್ಲಿ ಮುಖ್ಯಮಂತ್ರಿ ಮತ್ತಿತರ ಸಲಹೆಯಂತೆ ಜಾನ್ ರಾಜೀನಾಮೆ ಸಲ್ಲಿಸಿದರು. ಇದರಿಂದ ಮತ್ತೂ ಖುಷಿಗೊಂಡ ಬಿಜೆಪಿ - ಕೋಮುಸೌಹಾರ್ದತೆ ಕದಡಿರುವದರಿಂದ ಅವರ ಮೇಲೆ ಭಾರತದ ಸಂವಿಧಾನದ ಪ್ರಕಾರ ಕ್ರಿಮಿನಲ್ ಮೊಕದ್ದಮೆ ಹೂಡಿ, ಬಂಧಿಸಬೇಕೆಂದೂ, ಅವರ ಆಸ್ತಿಪಾಸ್ತಿ ಮುಟ್ಟುಗೋಲು ಹಾಕಬೇಕೆಂದೂ ರಾಜ್ಯದ ವಿವಿಧ ಕಡೆಗಳಲ್ಲಿ ಪ್ರತಿಭಟನೆ ನಡೆಸಿ ಆಗ್ರಹಿಸತೊಡಗಿದರು. ಆರ್.ಎಸ್.ಎಸ್. ಸಹ ಬಹಿರಂಗವಾಗಿ ಇದಕ್ಕೆಲ್ಲಾ ತಿದಿಯೊತ್ತಿದೆ. ಕೊಡಗಿನಲ್ಲಿಯೂ ಇದರ ಬಿಸಿ ಕಾಣಿಸಿಕೊಂಡಿತು.

ದೆವ್ವದ ಬಾಯಲ್ಲಿ ಭಗವದ್ಗೀತೆ

ಬಿಜೆಪಿ ಎಬ್ಬಿಸಿದ ಈ ಬೊಬ್ಬೆ ಅತ್ಯಂತ ಅನೈತಿಕ, ಖಂಡನಾರ್ಹ. ಈ ಆಗ್ರಹಗಳಲ್ಲಿ ಪ್ರತಿಭಟಿಸುತ್ತಿರುವುದು ಅದರ ಕಡು ಅಲ್ಪಸಂಖ್ಯಾತ ವಿರೋಧಿ ಮನೋಭಾವ. ಈ ಚಡ್ಡಿಗಳಿಗೆ ಭಾರತದ ಸಂವಿಧಾನ, ದೇಶದ ಧರ್ಮನಿರಪೇಕ್ಷ(ಸೆಕ್ಯುಲರ್) ಪರಂಪರೆ ಮೌಲ್ಯಗಳ ಬಗ್ಗೆ ಕಿಂಚಿತ್ತಾದರೂ ಗೌರವಿದೆಯೋ? ಕೋಮು ಸೌಹಾರ್ದತೆಯನ್ನು ಕಲಕಿ, ಕಲಹ ಎಬ್ಬಿಸಿ, ಇಲ್ಲದ ವಿವಾದಗಳನ್ನು ಸೃಷ್ಟಿಸಿ, ಕೋಮುಸಾಮರಸ್ಯ ಹಾಳುಗೆಡಹಿದ್ದು ಅದರ ಜಾಯಮಾನವೇ ಆಗಿದೆ. ದೇಶದ ತುಂಬೆಲ್ಲಾ ಕೋಮುವಾದದ ವಿಷಕಾರಿ ಪ್ರಚೋದನಕಾರಿ ಹೇಳಿಕೆ ರಾಜಾರೋಷವಾಗಿ ಬಿತ್ತರಿಸುತ್ತಿರುವಾಗ ಕೋಮುಸೌಹಾರ್ದತೆಗೆ ಧಕ್ಕೆಯಾಯಿತು ಎಂದು ಹೇಳುವುದಕ್ಕೆ ಯಾವ ನೈತಿಕ ಹಕ್ಕಿದೆ.?

ಹಿಂದೆ ಶಿವಸೇನೆಯ ಬಾಳಾಸಾಹೇಬ್ ಠಾಕ್ರೆ ಮುಸ್ಲಿಂರಿಗೆ ಮತದಾನ ಹಕ್ಕನ್ನೇ ರದ್ದು ಪಡಿಸಬೇಕೆಂದು ಆಗ್ರಹಿಸುತ್ತಿದ್ದಾಗ, ಚರ್ಚುಗಳು ಸ್ವದೇಶೀಕರಣ, ಭಾರತೀಕರಣ ಆಗಬೇಕೆಂದು ಆರ್.ಎಸ್.ಎಸ್. ಸರಸಂಚಾಲಕ ಸುದರ್ಶನ ಹೇಳಿಕೆ ನೀಡಿ, ದೇಶದ ನಾಗರೀಕರ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಧಾಳಿ ಮಾಡಿದಾಗ (ಚರ್ಚ್‌ಗಳ ಮೇಲೆ, ಕ್ರಿಶ್ಚಿಯನ್ನರ ಮೇಲೆ ಧಾಳಿ ಆದಾಗಲೂ) ಇವರು ಚಕಾರ ಎತ್ತಲಿಲ್ಲ. ಕರ್ನಾಟಕದ ರಾಮದುರ್ಗದ ಮಾಲೂರು, ದ.ಕನ್ನಡ ಮುಂತಾದೆಡೆ ಚರ್ಚ್‌ಗಳ ಮೇಲೆ ಈ ಚೆಡ್ಡಿ ಪರಿವಾರವೇ ಆಕ್ರಮಣಗೈದಾಗ, ಸಿಕ್ಕಿಬಿದ್ದಾಗಲೂ ತುಟಿಪಿಟಿಕ್ಕೆನ್ನಲಿಲ್ಲ. ಬದಲಾಗಿ ದೂಷಣೆಯ ವಿಷವೇ ಹರಿಯಿತು. ಇಂತಹವರು ಈಗ ಬೊಬ್ಬೆ ಹೊಡೆಯುತ್ತಿರುವುದರ ಅರ್ಥವೇನು? ಇದು ದುರುದ್ದೇಶವಿಲ್ಲದೇ ಬೇರೇನು? ಹೋಗಲಿ ಈಗಲಾದರೂ ಒರಿಸ್ಸಾ, ಗುಜರಾತ್‌ನಲ್ಲಿ ಕ್ರಿಶ್ಚಿಯನ್ನರ ಮೇಲಿನ ಧಾಳಿಯನ್ನು ಈಗಲಾದರೂ ಈ ಪರಿವಾರ ಖಂಡಿಸುತ್ತದೆಯೇ? ಈ ಭೂಕಂಪವ ಕುಂಭಮೇಳದ ಜಾಗದಲ್ಲಿ ಸಂಭವಿಸಲಿತ್ತು. 'ತನ್ನ ತಪಸ್ ಶಕ್ತಿಯಿಂದ ಭುಜ್‌ಗೆ ವರ್ಗಾಯಿಸಿದೆ ಎಂದು ಕೊಚ್ಚಿಕೊಂಡ ಬೂದಿಬಡುಕ ಸನ್ಯಾಸಿಯ ಮೇಲೆ ಇವರೇಕೆ ಕ್ರಮಕ್ಕಾಗಿ ಕಿರುಚಲಿಲ್ಲ. ಆತನಲ್ಲಿ ಅದಾವ ಮುತ್ಸದ್ದಿತನವನ್ನು ಚಡ್ಡಿಗಳು ಕಂಡರು?

ನಮ್ಮ ನಾಡಿನ ಜನ ಇಂತಹ ಮುಖವಾಡಗಳನ್ನು ಇಂತಹ ಶಕ್ತಿಗಳ ಆಟಾಟೋಪಕ್ಕೆ ಕಡಿವಾಣ ಹಾಕಿ, ತಿರಸ್ಕರಿಸುವವರೆಗೂ ಇವುಗಳು ಘಟಿಸುತ್ತಲೇ ಇರುತ್ತವೆ.

ಸರ್ಕಾರಿ ನೌಕರರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕತ್ತರಿ:

ಕರ್ನಾಟಕ ಸರ್ಕಾರದ ನೌಕರರು ಈ ದೇಶದ ನಾಗರೀಕರಲ್ಲವೇ? ನಾಗರಿಕರಿಗೆ ಇರುವ ಕನಿಷ್ಠ ಅಭಿವ್ಯಕ್ತಿ ಸ್ವಾತಂತ್ರ್ಯದಂತಹ ಮೂಲಭೂತ ಹಕ್ಕು ಅವರಿಗೆ ಇರಬೇಡವೇ? ಇರಬಾರದು ಎನ್ನುತ್ತದೆ ಎಸ್.ಎಂ.ಕೃಷ್ಣರ ಸರ್ಕಾರ. ಈಗಾಗಲೇ ನೌಕರರ ಬಗ್ಗೆ ಕಂತೆ ಕಂತೆಗಳ ಆಚಾರ ಸಂಹಿತೆ ಇದೆ. ಆದರೆ ಹೊಸ ಹೊಸ ಫರ್ಮಾನುಗಳೂ ಬರುತ್ತಲೇ ಇವೆ. ತನ್ನ ಸರ್ಕಾರದ ನೌಕರರು ಸಿನಿಮಾ, ಧಾರವಾಹಿಗಳು ನಟನೆ ಮಾಡಬಾರದು, ನಟಿಸಬೇಕೆಂದರೂ ಸರ್ಕಾರದ ಪರವಾನಗಿ ಪಡೆದಿರಬೇಕು, ಆದರೆ ಈ ಪರವಾನಗಿ ಕಳುವುದು ಯಾವಾಗಲೋ ಒಮ್ಮೆ ಮಾತ್ರ. ಪತ್ರಿಕೆ, ಆಕಾಶವಾಣಿ, ನಿಯತಕಾಲಿಕಗಳಿಗೆ ಲೇಖನ ಬರೆಯುವುದಾಗಲೀ, ಭಾಷಣ ಮಾಡುವುದಾಗಲೀ ಮಾಡುವುದಿದ್ದರೆ ತನ್ನ ಮೇಲಧಿಕಾರಿಗಳಿಗೆ ತೋರಿಸಿ ಪರವಾನಗಿ ಪಡೆಯಬೇಕು.

ನಾನು ಪ್ರಜಾಪ್ರಭುತ್ವ ಭಾರತದಲ್ಲಿದ್ದೇವೆಯೇ? ಅಥವಾ ಸರ್ವಾದಿಕಾರತ್ವದ ಕೃಪೆಯಲ್ಲೋ ಎಂಬ ಅನುಮಾನ ಬರುತ್ತದೆ. ಐಎಎಸ್ ಅಧಿಕಾರಿ ಶಿವರಾಮು, ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಸಿ.ಪಾಟೀಲರಂತವರು ಚಲನಚಿತ್ರದ ನಟನೆ ಹಾಗೂ ಉದ್ದಿಮೆಯಲ್ಲಿ ತೊಡಗಿ, ಕಛೇರಿಗೆ ಬರುವುದು ಕಡಿಮೆಯೆಂದು, ಕಚೇರಿಯನ್ನೇ ಅಭಿಮಾನಿಸಂಘದ ಹಾಗೂ ಉದ್ಯಮದ ಮುಖ್ಯ ಕಛೇರಿಯನ್ನಾಗಿ ಪರಿವರ್ತಿಸಿದ್ದಾರೆಂಬ ದೂರುಗಳ ಹಿನ್ನೆಲೆಯಲ್ಲಿ, ಅದಕ್ಕೆ ಕಡಿವಾಣ ಹಾಕಲು ಕ್ರಮವಹಿಸಬಹುದಿತ್ತು. ಆದರೆ ಅದನ್ನೇ ನೆಪ ಮಾಡಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕುವುದು ಖಂಡನೀಯ. ಕಾಂಗ್ರೆಸ್ ತನ್ನ ಮೂಲಭೂತ ಸರ್ವಾಧಿಕಾರಿತನವನ್ನು ಬಿಟ್ಟಿಲ್ಲವೆಂಬುದನ್ನು ಮತ್ತೆ ಸಾಬೀತುಪಡಿಸಿದೆ. ತನ್ನ ಯಜಮಾನರ ತಾಳಕ್ಕೇ ಕುಣಿಯಬೇಕೆಂಬ, ಭಿನ್ನ ಅಭಿಪ್ರಾಯ ಸಹಿಸದ ಪ್ರಜಾಪ್ರಭುತ್ವ ವಿರೋಧಿ ಆದೇಶವನ್ನು

ಇ.ಎಸ್.ಐ. ಆಸ್ಪತ್ರೆ: ಭ್ರಷ್ಟರು ಸೃಷ್ಟಿಸಿದ ನರಕ

ESI ಆಸ್ಪತ್ರೆಗಳು ಇರುವುದೇ ಕಾರ್ಮಿಗರಿಗಾಗಿ ಇದಕ್ಕೆ ವಿನಿಯೋಗ ಅವರ ದುಡಿತದ ಹಣದಿಂದಲೇ. ಆದರೆ ಕಾರ್ಮಿಕರೆಂದರೆ ಇಲ್ಲಿಯ ವೈದ್ಯರಿಗೆ ಸಿಬ್ಬಂದಿಗೆ ಇನ್ನಿಲ್ಲದ ತಾತ್ಸಾರ, ಅಸಡ್ಡೆ.. ಪ್ರತಿಯೊಂದಕ್ಕೂ ಹಣ ಕೀಳುವ, ಔಷಧಿಗಳನ್ನು ಮಂಗಮಾಯ ಮಾಡುವ ಭ್ರಷ್ಟತನ. ರೋಗಿಗಳ ಪಾಲಿಗೆ ಈ ಈ ಆಸ್ಪತ್ರೆಗಳೆಂದರೆ ರೌರವ ನರಕ. ಬೆಂಗಳೂರು ಮಹಾನಗರದಲ್ಲೇ ಇಂತಹಪಾಡು. ಉಳಿದೆಡೆಯಂತೂ ಹೇಳತೀರದ ಸ್ಥಿತಿ. ಈ ಆಸ್ಪತ್ರೆಗಳ ಒಳಹೊರಗು ಬಿಡಿಸಿಟ್ಟ ಲೇಖನವಿದು. ಹಾಗೆ ದುಃಸ್ಥಿತಿ ವಿರುದ್ಧದ ಹೋರಾಟ ಸಹ.

ಹಲವು ವರ್ಷಗಳ ಹೋರಾಟಗಳಿಂದ ಕಾರ್ಮಿಕರು ಕೆಲವು ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಅವುಗಳಲ್ಲಿ ಕಾರ್ಮಿಕರ ರಾಜ್ಯ ವಿಮಾ (ಇ.ಎಸ್.ಐ) ಸೌಲಭ್ಯವೂ ಒಂದು. ಕಾರ್ಮಿಕನಿಂದ ಮಾಸಿಕ ವೇತನದ ಶೇ 1.75 ರಷ್ಟು ಹಣವನ್ನು ಕಾರ್ಮಿಕನ ವೇತನದಲ್ಲಿ ಕಡಿತ ಈ ವಿಮೆಗೆ ತುಂಬುತ್ತಾರೆ. ಇದಲ್ಲದೆ ಮಾಲೀಕರು ನಿಗದಿತ ಹಣವನ್ನು ತನ್ನ ಕಾರ್ಮಿಕನ ಈ ಖಾತೆಗೆ ಜಮಾ ಮಾಡುತ್ತಾರೆ. ಈ ಹಣದಿಂದಲೇ ನಡೆಯುವ ಇ.ಎಸ್.ಐ. ಆಸ್ಪತ್ರೆ ಕಾರ್ಮಿಕರ ಮತ್ತು ಆತನ ಕುಟುಂಬದ ಸದಸ್ಯರ ಆರೋಗ್ಯ ರಕ್ಷಣೆಯ ಹೊಣೆ ಹೊತ್ತಿದೆ. ಕಾರ್ಮಿಕ ಅನಾರೋಗ್ಯದಿಂದ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲದಾಗ ಆ ದಿನದ ಅರ್ಧ ವೇತನ ಈ ಇಲಾಖೆಯಿಂದ ಸಿಗುತ್ತದೆ. ಮಹಿಳಾ ಕಾರ್ಮಿಕರಿಗೆ ಹೆರಿಗೆಗಾಗಿ 3 ತಿಂಗಳ ವೇತನ ಸಹಿತ ರಜೆ ಸಿಗುತ್ತದೆ.

ಕಾರ್ಮಿಕರ ಕ್ಷೇಮಕ್ಕಾಗಿ ಸ್ಥಾಪನೆಯಾದ ಇ.ಎಸ್.ಐ. ಆಸ್ಪತ್ರೆಗಳು ಅವರ ಪಾಲಿಗೆ ನರಕಸದೃಶ್ಯವಾಗತೊಡಗಿವೆ. ಆಸ್ಪತ್ರೆಗೆ ಚಿಕಿತ್ಸೆಗೆಂದು ಹೋದಾಗ ಇದು ನಿಜವಾಗಿಯೂ ನಮ್ಮ ಆಸ್ಪತ್ರೆಯೆ? ನಮ್ಮ ಹಣದಿಂದ ನಡೆಯುತ್ತಿದೆಯೇ? ಎಂಬ ಅನುಮಾನ ಬಾರದಿರದು. ಇಲ್ಲಿ ಭ್ರಷ್ಟಾಚಾರ, ಅಶಿಸ್ತು, ಅಕ್ರಮ, ಶೋಷಣೆ ವ್ಯಾಪಕವಾಗಿ ಹರಡಿದೆ. ಇವರನ್ನು ಪ್ರಶ್ನಿಸುವ ಧೈರ್ಯವನ್ನು ಯಾವ ರೋಗಿಯೂ ಪ್ರದರ್ಶಿಸಲಾಗದು. ಪ್ರಶ್ನಿಸಿದರೆ ನಮ್ಮ ಆರೋಗ್ಯಕ್ಕೆ ತೊಂದರೆಯುಂಟು ಮಾಡಿಯಾರೆಂಬ ಭಯ!

ಕಾರ್ಮಿಕರ ಪ್ರತಿಭಟನೆ

ಇ.ಎಸ್.ಐ. ಆಸ್ಪತ್ರೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಲಂಚಗುಳಿತನ, ನಿರ್ಲಕ್ಷ್ಯತನಗಳನ್ನು ಪ್ರತಿಭಟಿಸಿ ಕಾರ್ಮಿಕರು ಕಳೆದ ಡಿಸೆಂಬರ್ 18 ರಂದು ಪ್ರದರ್ಶನ ನಡೆಸಿದರು. ಅಂದು ಬೆಳಿಗ್ಗೆ 10 ಗಂಟೆಗೆ ಇಂದಿರಾನಗರದ ಆರ್.ಟಿ.ಓ. ಕಛೇರಿಯಿಂದ ಮೆರವಣಿಗೆ ಹೊರಟು ಒಂದು ಸಾವಿರ ಕಾರ್ಮಿಕರು ಇಂದಿರಾ ನಗರದ ಇ.ಎಸ್.ಐ. ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

ಸಿಐಟಿಯು ವರ್ತೂರು ಪ್ರದೇಶ ಸಮಿತಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಪ್ರದೇಶದಲ್ಲಿ ಸಿಐಟಿಯುಗೆ ಸೇರಿದ ಕಾರ್ಮಿಕರು ತಮ್ಮ ಕೆಲಸಕ್ಕೆ ಅಂದು ರಜೆ ಹಾಕಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಘಟನೆಗೆ ಸೇರದ ಕಾರ್ಮಿಕರೂ ಇದರಲ್ಲಿ ಭಾಗವಹಿಸಿದ್ದರು. ಕಾರ್ಮಿಕರು ತಮಗಾಗುತ್ತಿರುವ ತೊಂದರೆ, ವಂಚನೆಗಳ ಬಗ್ಗೆ ರೋಷ ವ್ಯಕ್ತಪಡಿಸಿ ಘೋಷಣೆ ಕೂಗುತ್ತಿದ್ದರು. ನಂತರ 10 ಬೇಡಿಕೆಗಳ ಮನವಿ ಪತ್ರ ನೀಡಲಾಯ್ತು. ಇಂದಿರಾನಗರದ ಇ.ಎಸ್.ಐ. ಆಸ್ಪತ್ರೆಯ ಸೂಪರಿಂಟೆಂಡೆಂಟ್ ಮನವಿ ಸ್ವೀಕರಿಸಿ, ಇನ್ನು ಮುಂದೆ ರೋಗಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಔಷಧಿಗಳ ಕೊರತೆ ಇದ್ದು, ಇದನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಅವರು ಹೇಳಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ಮುಖಂಡರಾದ ಕಾಂ. ಹೆಚ್.ಎನ್.ಗೋಪಾಲಗೌಡ, ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ಅಧ್ಯಕ್ಷರಾದ ಪ್ರಕಾಶ್, ಖಜಾಂಚಿ ಗೌರಮ್ಮ, ಡಿವೈಎಫ್ಐ ನ ರಮೇಶ್, ಸಿಐಟಿಯು ಪ್ರದೇಶಸಮಿತಿ ಅಧ್ಯಕ್ಷ ಪಿ.ಜಯರಾಂ, ಕಾರ್ಯದರ್ಶಿ ರಾಮಚಂದ್ರ ಮುಂತಾದವರು ಮಾತನಾಡಿದರು.

ಸರ್ವಂ ಲಂಚಮಯ!

ಪ್ರತಿ ತಿಂಗಳ ವೇತನದಲ್ಲಿ ಇ.ಎಸ್.ಐ.ಗೆ ಹಣ ತೊಡಗಿಸಿದರೂ ಆಸ್ಪತ್ರೆಗೆ ಬಂದ ಮೇಲೂ ಹಣ ನೀಡಬೇಕಾಗಿದೆ. ಕಸಗುಡಿಸುವವರಿಂದ ಹಿಡಿದು ಮೇಲಧಿಕಾರಿಗಳ ವರೆಗೆ ಲಂಚದ ಹಾವಳಿ ಹೆಚ್ಚಾಗಿದೆ. ಕಾಂಚಾಣದ ಝಣ ಝಣಕ್ಕೆ ಇಲ್ಲಿ ಹೆಚ್ಚು ಅರ್ಥವುಂಟು. ಕೆಲಸಗಳು ಹೂವೆತ್ತಿದಂತೆ ಸುಲಭವಾಗಿ ನಡೆದುಹೋಗುತ್ತವೆ.

ರೋಗಿಗಳನ್ನು ಪರೀಕ್ಷಿಸಲು ವೈದ್ಯರು ಸದಾ ಲಭ್ಯವಿರುವುದಿಲ್ಲ

ವೈದ್ಯರ ದರ್ಶನ ಭಾಗ್ಯಕ್ಕಾಗಿ ಗಂಟೆಗಟ್ಟಲೆ ಕಾಯುವ ರೋಗಿಗಳ ಗೋಳು ಹೇಳತೀರದು. ವೈದ್ಯರು ಬಂದ ನಂತರವೂ ರೋಗಿಗಳನ್ನು ಕಾಳಜಿಯಿಂದ ನೋಡುವುದಿಲ್ಲ. ರೋಗಗಳಿಂದ ನರಳುವ ರೋಗಿಗಳ ಜೊತೆ ಸೌಜನ್ಯ ತೋರದ ನರ್ಸ್‌ಗಳು! ಅದರಲ್ಲೂ ವೈದ್ಯಾಧಿಕಾರಿಗಳು ಅವರ ಪಾಲಿಗೆ ಭಯ ಹುಟ್ಟಿಸುವ ಭೂತಗಳಾಗಿ ಕಾಣುತ್ತಾರೆ.

ಔಷಧಿಗಳ ಕಣ್ಮರೆ: ಲಕ್ಷಾಂತರ ರೂಪಾಯಿಗಳ

ವರದಿ: **ಗೌರಮ್ಮ / ಸಿದ್ದಯ್ಯ**

ಔಷಧಿ ಸರಬರಾಜಿದ್ದರೂ ಖಾಸಗಿ ಆಸ್ಪತ್ರೆಗಳಲ್ಲಿ ನೀಡುವಂತೆ ಪ್ರತಿಯೊಂದಕ್ಕೂ ಚೀಟಿಗಳನ್ನು ಬರೆದು ಹೊರಗಿನಿಂದ ತರಿಸಲಾಗುತ್ತದೆ. ಇ.ಎಸ್.ಐ.ಗೆ ಬರುವ ಔಷಧಿಗಳು ಆಸ್ಪತ್ರೆಗೆ ಬರುವ ಮುನ್ನವೇ ಅವು ಸೇರಬೇಕಾದ ಸ್ಥಳವನ್ನು ಸೇರಿರುತ್ತವೆ. ಇವುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿ ಅಕ್ರಮ ಹಣಗಳಿಸುತ್ತಿದ್ದಾರೆ. ರಾಜಾಜಿನಗರದ ಇ.ಎಸ್.ಐ. ನ ಸೂಪರಿಂಟೆಂಡೆಂಟ್ ಶ್ರೀಮತಿ ನಿಂಗಮ್ಮ ಶಾಮೀಲಾಗಿರುವ ಇಂತಹ ದೊಡ್ಡ ಗುಂಪೇ ಇದೆ. ಈಕೆಯ ಭ್ರಷ್ಟಾಚಾರದ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ಸರ್ಕಾರ ಮೂಕ ಪ್ರೇಕ್ಷಕನಾಗಿದೆ. ಅಂದರೆ ಇದರಲ್ಲಿ ಯಾರ್‍ಯಾರ ಪಾಲು ಎಷ್ಟು?

ಇಲ್ಲಿ ನೀರಿನಿಂದ ಹಿಡಿದು ಪ್ರತಿಯೊಂದಕ್ಕೂ ಸುಂಕ ತೆರಬೇಕು. ಬಿಸಿ ನೀರು ಬೇಕೆನಿಸಿದರೆ, ಬಕೆಟಿಗೆ 5 ರಿಂದ 10 ರೂ. ಹಣ ನೀಡಬೇಕು. ಮಲ-ಮೂತ್ರ ವಿಸರ್ಜನೆಗೆ ಬೆಡ್‌ಪಾನ್ ಬೇಕಾದರೂ ಆಯಾಗಳ ಕೈ ಬೆಚ್ಚಗೆ ಮಾಡಬೇಕು. ಶೌಚಾಲಯದ ಸ್ವಚ್ಛತೆ ಬಗ್ಗೆ ಹೇಳಬೇಕಾಗಿಲ್ಲ. ಮೂಗು ಮುಚ್ಚಿಕೊಂಡೆ ಹೋಗಬೇಕಾದ ಸ್ಥಿತಿ.

ಹುಟ್ಟಿದ ಮಗು ತೋರಿಸಲೂ ಹಣ

ಆಸ್ಪತ್ರೆಯ ಹೆರಿಗೆ ವಿಭಾಗ ಅಲ್ಲಿನ ಆಯಾ ಹಾಗೂ ನರ್ಸ್‌ಗಳಿಗೆ ಪ್ರತಿನಿತ್ಯ ಚಿನ್ನದ ಮೊಟ್ಟೆ ಇಡುವಕೋಳಿಯಂತೆ. ಹಣ ನೀಡದೆ ತಾನು ಹೆತ್ತ ಮಗುವನ್ನು ತಾಯಂದಿರು ನೋಡುವಂತಿಲ್ಲ. ಗಂಡಾದರೆ 600 ರೂ. ಹೆಣ್ಣಾದರೆ 300 ರೂ. ನೀಡಬೇಕೆನ್ನುವುದು ಇಲ್ಲಿನ ಅಲಿಖಿತ ನಿಯಮ.



ಇಎಸ್‌ಐ ಆಸ್ಪತ್ರೆಯಲ್ಲಿನ ರೋಗಿಗಳ ಸ್ಥಿತಿ ಇದು!

ಆದರೆ ಅತ್ಯಂತ ಕ್ರಮಬದ್ಧವಾಗಿ ಆಚರಿಸಲ್ಪಡುವ ನಿಯಮಾವಳಿ. ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುವ ಪ್ರತಿಯೊಬ್ಬರೂ ಭ್ರಷ್ಟರು ಎಂದು ಹೇಳುವುದು ಸರಿಯಲ್ಲ. ಆದರೂ ಎಲ್ಲಾ ಬಣ್ಣವನ್ನು ಮಸಿ ನುಂಗಿತು ಎನ್ನುವಂತೆ ಇವರೆಲ್ಲರ ಮಧ್ಯೆ ಪ್ರಾಮಾಣಿಕರು ಸದ್ದಿಲ್ಲದೆ ಮರೆಯಾಗುತ್ತಾರೆ.

ತುರ್ತು ಚಿಕಿತ್ಸಾ ವಿಭಾಗದಲ್ಲಿ ರೋಗಿಯನ್ನು ಪರೀಕ್ಷಿಸುವ ಮತ್ತು ಚಿಕಿತ್ಸೆ ನೀಡಲು ಬೇಕಾದ ಉಪಕರಣಗಳಿಲ್ಲದೆ, ವೈದ್ಯರು ಖಾಸಗಿ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಿಕೊಳ್ಳಲು ಸೂಚಿಸುತ್ತಾರೆ. ಕೆಲವು ಕಾಯಿಲೆಗಳಿಗೆ ಖಾಸಗಿ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆದುಕೊಳ್ಳಬೇಕಾಗಿದೆ. ಕಾರ್ಮಿಕರಿಂದ ಬರುವ ವಂತಿಗೆ ಹಣದಲ್ಲಿ ಸುಮಾರು 5 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಇದ್ದರೂ, ಈ ಬಂಡವಾಳವನ್ನು ಕಾರ್ಮಿರಿಗೆ ಮತ್ತಷ್ಟು ಹೆಚ್ಚಿನ ಸೌಲಭ್ಯ ಒದಗಿಸಲು ಯೋಜನೆಗಳಿಗೆ ಬಳಸುತ್ತಿಲ್ಲ.

ಮಹಿಳೆಯರ ಬಗ್ಗೆ ಕೀಳು ದೃಷ್ಟಿ:

ಚಿಕಿತ್ಸೆಗಾಗಿ ಇಲ್ಲಿಗೆ ಬರುವ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರನ್ನು ಕೀಳಾಗಿ ನೋಡಿಕೊಳ್ಳುತ್ತಾರೆ. ರೋಗಿಗೆ ಸಲಹೆ ಸೂಚನೆಗಳನ್ನು ಕೊಡುವ ಬದಲು ಕೌಟುಂಬಿಕ ಸಮಸ್ಯೆಗಳನ್ನು ಎತ್ತಿ ಕೀಳು ಶಬ್ದ ಬಳಸಿ ಬೈಯುತ್ತಾರೆ. ಗರ್ಭಿಣಿ ಸ್ತ್ರೀಯರಿಗೆ ಸರಿಯಾದ ಸಲಹೆ ಸೂಚನೆ ನೀಡುವುದಿಲ್ಲ. ಇವರ ಬೇಜವಾಬ್ದಾರಿತನದಿಂದ ಮಕ್ಕಳು ಹೆರಿಗೆ ಸಮಯದಲ್ಲಿ ಸತ್ತ ಉದಾಹರಣೆಗಳಿವೆ. ಮಹಿಳೆಯೊಬ್ಬಳು ಮದುವೆಯಾಗಿ ಹಲವು ವರ್ಷಗಳನಂತರ ಮೊದಲ ಬಾರಿಗೆ ಗರ್ಭ ಧರಿಸಿ ಹೆರಿಗಾಗಿ ಇಲ್ಲಿಗೆ ಬಂದಾಗ, ಹೆರಿಗೆಯ ಸಂದರ್ಭದಲ್ಲಿ ಒರಟಾಗಿ ನಡೆದುಕೊಂಡ ವೈದ್ಯರು ಮತ್ತು ನರ್ಸ್‌ಗಳ ನಿರ್ಲಕ್ಷ್ಯತನದಿಂದ ಮಗು ಸತ್ತಿತು. ಮಗು ಸತ್ತ ಸುದ್ದಿ ತಿಳಿದ ಆಕೆಯ ಗಂಡ ಆಕೆಯನ್ನು ಆಸ್ಪತ್ರೆಯಿಂದ ತನ್ನ ಮನೆಗೆ ಕರೆದೊಯ್ಯಲೇ ಇಲ್ಲ. ಆಕೆಗೆ ಈಗ ತವರು ಮನೆಯೇ ಗತಿ. ಇದು ಬಹಿರಂಗಕ್ಕೆ ಬಂದ ಒಂದು ಉದಾಹರಣೆಯಷ್ಟೇ. ಇಂತಹ ನೊಂದ ಕುಟುಂಬಗಳೆಷ್ಟೋ?

ಚಿಕಿತ್ಸಾಲಯಗಳ ದುಃಸ್ಥಿತಿ:

ಕಾರ್ಮಿಕರಿಗೆ ಅನುಕೂಲವಾಗಲೆಂದು ಆಯಾ ಕೈಗಾರಿಕಾ ಪ್ರದೇಶಗಳಲ್ಲಿ ತೆರೆದಿರುವ ಚಿಕಿತ್ಸಾಲಯ(ಡಿಸ್ಪೆನ್ಸರಿ) ಗಳ ಸ್ಥಿತಿಯಂತೂ ಹೇಳತೀರದು. ಅಲ್ಲಿವೈದ್ಯರು ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಒಂದೆರಡು ಗಂಟೆಗಳ ಸಮಯಾವಕಾಶ ಪಡೆದು ಚಿಕಿತ್ಸೆಗಾಗಿ ಕಾರ್ಮಿಕರು ಇಲ್ಲಿಗೆ ಬಂದರೆ, ವೈದ್ಯರಿಲ್ಲದೆ, ಅವರಿಗಾಗಿ ಕಾದು ಕುಳಿತಿರಬೇಕು. ವೈದ್ಯರು ಬಂದನಂತರವೂ ಚುಚ್ಚು ಮದ್ದು ನೀಡುವವನಿರುವುದಿಲ್ಲ. ಔಷಧಿ ನೀಡುವವನಿರುವುದಿಲ್ಲ. ಅಂತೂ ಕಾರ್ಮಿರಿಗೆ ಮತ್ತಷ್ಟು ತಡವಾಗಿ ಆ ದಿನದ ವೇತನ ಕಳೆದುಕೊಳ್ಳಬೇಕಾಗುತ್ತದೆ. ತೀವ್ರ ಅನಾರೋಗ್ಯದಿಂದಾಗಿ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲದೆ, ರಜೆ ಮಂಜೂರು ಮಾಡಲು ಬೇಡಿದರೆ 'ನಿನಗೇನಾಗಿದೆ, ಹೋಗು ಕೆಲಸ ಮಾಡಬಹುದು' ಎಂಬ ಉತ್ತರ ಹಣ ನೀಡಿದರೆ ರಜೆ ಮಂಜೂರು!

ಹೊರಗೆ ಖರೀದಿಸಿದ ಔಷಧಿಗಳ ಹಣ, ರಜೆ ಅವಧಿಯ ಹಣ ಪಡೆಯಬೇಕಾದರೆ, ಸ್ಥಳೀಯ ಕಛೇರಿಗೆ ಅಲೆದಾಡಬೇಕಾಗುತ್ತದೆ. ಕೆಲವೊಮ್ಮೆ ಈ ಹಣ ಪಡೆಯಲು ಕೆಲಸಕ್ಕೆ ರಜೆ ಹಾಕಬೇಕಾಗುತ್ತದೆ.

ಮಂದಿರ ನಿರ್ಮಾಣದ ಅಧ್ವರ್ಯುಗಳಿಗೆ

ದೇಶ ಕಟ್ಟಿ
ನಾಡ ಕಟ್ಟಿ
ಅಂದರಾS
ತಲೀಗೆ ಹ್ವಾಗಲೊಲ್ಲದು ನಿಮಗ
ನಾವ್ ಕಟ್ಟಾದೇ
ಮಂದಿರಾಂತೀರಿ
ಹೋಗಲಿ
ನೀವ್ ಕಟ್ಟೊದೇ ಆದರಾS
ಕಟ್ಟಿ
ವರ್ಷಕ್ಕೆ ಒಂದು ಲಕ್ಷ ಕೋಟಿ ಅದ
ವಿದೇಶಿ ಸಾಲಕ ಬಡ್ಡಿ,
ನಮಗೂ ಸಾಕಾಗ್ಯದ
ಕಟ್ಟಿ ಕಟ್ಟಿ
ಹೊಟ್ಟಿ ಬಟ್ಟಿ
ನೋಡ್ರೀ ಬೇಕಿದ್ರೆ ಖಾಲಿ ಅದಾವ
ನಮ್ಮ ಹೊಟ್ಟಿ-ತಟ್ಟೀ

- ಆರ್.ರಾಮಕೃಷ್ಣ

1960 ರ ದಶಕದಲ್ಲಿ 1 ಕೋಟಿ ಟನ್ ಗೋಧಿಯನ್ನು ಅಮೇರಿಕಾದಿಂದ ಪಿ.ಎಲ್. 480 ಕಾನೂನಿನಡಿ ಆಮದು ಮಾಡುವ ಪರಿಸ್ಥಿತಿಯಿತ್ತು. ಆದರೆ 'ಹಸಿರು ಕ್ರಾಂತಿ' ಆ ಪರಿಸ್ಥಿತಿಯನ್ನು ಬದಲಿಸಿದೆ. ಆದರೆ ಈಗ ಆಹಾರ ಧಾನ್ಯಗಳ ಹೆಚ್ಚುವರಿ ದಾಸ್ತಾನಿದ್ದರೂ 30 ಕೋಟಿ ಜನ ಅರೆ ಹೊಟ್ಟೆಯಲ್ಲೇ ಪ್ರತಿದಿನ ಮಲಗಬೇಕಾದ ಪರಿಸ್ಥಿತಿಯಿದೆ. ಈ ಸವಾಲನ್ನು ಎದುರಿಸಲು 10-25 ವರ್ಷಗಳ ಒಂದು ದೀರ್ಘಾವಧಿ ನೀತಿ ರೂಪಿಸಬೇಕಾಗಿದೆ ಎನ್ನುತ್ತಾರೆ ಆ 'ಹಸಿರು ಕ್ರಾಂತಿ'ಯಲ್ಲಿ ಪ್ರಮುಖ ಪಾತ್ರವಹಿಸಿದ ಕೃಷಿ ವಿಜ್ಞಾನಿ ಹಾಗೂ ಕೃಷಿ ನೀತಿ ತಜ್ಞ ಡಾ. ಎಂ.ಎಸ್.ಸ್ವಾಮಿನಾಥನ್. ಈ ಹಿನ್ನೆಲೆಯಲ್ಲಿ ಭಾರತ WTO ನ ಮರು-ಮಾತುಕತೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಮೈತ್ರಿಕೂಟ ರಚಿಸಿಕೊಂಡು ಭಾರತದ ರೈತರಿಗೆ ರಕ್ಷಣೆ ಪಡೆಯಬೇಕು ಎನ್ನುತ್ತಾರೆ ಅವರು. ಇಂಗ್ಲೀಷ್ ಪಾಕ್ಷಿಕ 'ಫ್ರಂಟ್‌ಲೈನ್' ನಲ್ಲಿ ಪ್ರಕಟವಾದ ಅವರ ಸಂದರ್ಶನದ ಕೆಲವು ಅಂಶಗಳನ್ನು ನಮ್ಮ ಓದುಗರ ವಿಶ್ಲೇಷಣೆಗಾಗಿ ಇಲ್ಲಿಕೊಡಲಾಗಿದೆ.

ಕೃಷಿ ಉಳಿಸಲು ಪಕ್ಷಪಾತದ ಜಾಗತಿಕ ಒಪ್ಪಂದಗಳ ಮರು ಮಾತುಕತೆ ಅಗತ್ಯ

ಡಾ. ಎಂ.ಎಸ್.ಸ್ವಾಮಿನಾಥನ್



ಭಾರತೀಯ ಕೃಷಿರಂಗದ ಪರಿಸ್ಥಿತಿಯನ್ನು ನೀವು ಹೇಗೆ ವರ್ಣಿಸುತ್ತೀರಿ?

ಒಟ್ಟಾರೆಯಾಗಿ ಆಶಾದಾಯಕವಾಗಿದೆ. ಕೆಲವು ಹೊಳೆಯುವ ಅಂಶಗಳಿವೆ.

ಭಾರತೀಯ ಕೃಷಿ ರಂಗದ ಪರಿಸ್ಥಿತಿಯನ್ನು ನೀವು ಹೇಗೆ ವರ್ಣಿಸುತ್ತೀರಿ?

ಒಟ್ಟಾರೆಯಾಗಿ ಆಶಾದಾಯಕವಾಗಿದೆ. ಕೆಲವು ಹೊಳೆಯುವ ಅಂಶಗಳಿವೆ. ಅತ್ತ ಕೆಲವು ಕಾಡುವ ಅಂಶಗಳೂ ಇವೆ. ಹೊಳಪಿನ ಸಂಗತಿಯೆಂದರೆ ಸರಿಯಾದ ಪರಿಸ್ಥಿತಿಯಿದ್ದರೆ ಉತ್ಪಾದನೆ ಜಾಸ್ತಿ ಮಾಡಬಲ್ಲೆವು ಎಂದು ನಮ್ಮ ರೈತರು ತೋರಿಸಿಕೊಟ್ಟಿದ್ದಾರೆ. ಅದರಲ್ಲೂ ಕನಿಷ್ಟ ಬೆಂಬಲ ಬೆಲೆಯ ವ್ಯವಸ್ಥೆಯ ಮೂಲಕ ಫಲದಾಯಕ ಮಾರುಕಟ್ಟೆಯ ಅವಕಾಶಗಳಿದ್ದರೆ ಉತ್ಪಾದಿಸುವಲ್ಲಿ ತಾವೇನೂ ಹಿಂದೆ ಬೀಳುವುದಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಗೋಧಿ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಎರಡನೇ ಸ್ಥಾನದಲ್ಲಿದ್ದೇವೆ. ನಮ್ಮ ಜನಗಳ ಈಗಿನ ಕೊಳ್ಳುವ ಶಕ್ತಿಗೆ ಕೊಳ್ಳಲಾರದಷ್ಟು ಉತ್ಪಾದನೆ ಮಾಡುತ್ತಿದ್ದೇವೆ. ಪೋಷಕಾಂಶಗಳ ಅಗತ್ಯಕ್ಕೆ ಸಾಲುವಷ್ಟು ಉತ್ಪಾದಿಸುತ್ತಿಲ್ಲ. ಆದರೆ ಈ ದೇಶದ ಜನರ ಖರೀದಿಸಬಲ್ಲುದಕ್ಕಿಂತ ಹೆಚ್ಚು ಉತ್ಪಾದಿಸುತ್ತಿದ್ದೇವೆ.

ಅಂದರೆ ಆಹಾರ ಪೂರೈಕೆಯ ಕೊರತೆಯನ್ನು ನೀಗಿಸಲು ಸಾಧ್ಯ ಎಂಬ ಆಶಾಭಾವನೆಯಿದೆ.

ಆದರೆ ಹೆಚ್ಚುವರಿ ಬೆಳೆ ಬೆಳೆಯುವುದರ ದುರದೃಷ್ಟಕರ ಅಂಶವೆಂದರೆ ಉತ್ತಮ ಬೆಳೆ ಪಡೆದರೂ ರೈತರು ಬೆಲೆ ಕುಸಿತ ಎದುರಿಸಬೇಕಾಗುತ್ತದೆ. ಇದು ನಮ್ಮ ದೇಶದ ದುಃಖದ ಕಥೆ. ಇಂದು ಕೃಷಿ ವಿಸ್ತರಣೆ ಕಾರ್ಯಕ್ರಮಗಳು ರೈತರ ಅಗತ್ಯಗಳಿಗೆ ಅನುಗುಣವಾಗಿಲ್ಲ.

ಇಂದು ರಾಷ್ಟ್ರೀಯ ಕೃಷಿ ಸಂಶೋಧನೆಯ ಅಗ್ಯತಗಳೇನು?

ನಾವೇನೇ ಮಾಡಿದರೂ ಅದು ರೈತರ ಬದುಕಿನ ವ್ಯವಸ್ಥೆಯನ್ನು ಸುಧಾರಿಸುವಂತಿರಬೇಕು.

ನಮ್ಮ ಕೃಷಿ ಸಂಶೋಧನಾ ವ್ಯವಸ್ಥೆ ಈಗ ಮೂರನೇ ಜಗತ್ತಿನಲ್ಲೇ ಅತ್ಯುತ್ತಮ ವ್ಯವಸ್ಥೆ. ಸರಕಾರದಿಂದ ಸಾಕಷ್ಟು ಬೆಂಬಲವಿದೆ. ರಾಜ್ಯ ಕೃಷಿ, ಮೀನುಗಾರಿಕೆ, ಪಶುವೈದ್ಯ ವಿಶ್ವವಿದ್ಯಾಲಯಗಳು ಸಂಶೋಧನೆ ಶಿಕ್ಷಣ ಮತ್ತು ವಿಸ್ತರಣೆಯ ಒಂದು ಸಮಗ್ರ ಜವಾಬ್ದಾರಿ ಹೊಂದಿದೆ. ಆದರೆ ಮಹತ್ವದ ಸಂಗತಿಯೆಂದರೆ ಇವೆಲ್ಲ ಸಮಗ್ರವಾಗಿ ರಾಷ್ಟ್ರೀಯ ಕೃಷಿ ಕಾರ್ಯತಂತ್ರದೊಂದಿಗೆ ಬೆಸೆದಿರಬೇಕು. ಈ ಮೂಲಕ ಬಡ ರೈತರ ಬದುಕನ್ನು ಬದಲಿಸುವಂತಾಗಬೇಕು. ಇದು ಸಂಶೋಧನೆಗೆ ಅತ್ಯುತ್ತಮ ಪ್ರೇರಣೆ.

ಹೀಗೆ ಭೂಮಿಯ ಬಳಕೆ, ಕಟಾವಿನ ನಂತರದ ಸಂಸ್ಕರಣೆಯ ತಂತ್ರಜ್ಞಾನ, ಕೀಟನಾಶಕ, ನೀರಿನ ವ್ಯವಸ್ಥೆ ಇತ್ಯಾದಿಗಳನ್ನೆಲ್ಲಾ ಸರಕುಗಳ ದೃಷ್ಟಿಯಿಂದ ನೋಡದೆ ಬೇಸಾಯ ವ್ಯವಸ್ಥೆಯ ದೃಷ್ಟಿಯಿಂದ(ಬೆಳೆ, ಪಶು ಸಂಪತ್ತು, ಮೀನು, ಮಾಂಸ ಇತ್ಯಾದಿಗಳ ಆಧಾರದಲ್ಲಿ) ನೋಡಬೇಕು. ಪ್ರಾಕೃತಿಕ ಸಂಪನ್ಮೂಲಗಳ ಸಮಗ್ರ ನಿರ್ವಹಣೆಯ ಕಾರ್ಯತಂತ್ರ ಇದರ ಮೂಲ ಅಂಶವಾಗಬೇಕು.

30 ಕೋಟಿ ಜನಗಳ ಜೀವನ ನಿರ್ವಹಣೆಯ ಭದ್ರತೆ ಕೊಡಬೇಕಾದ್ದು ಕನಿಷ್ಠವಾಗಿ ಆಗಬೇಕಾದ ಕೆಲಸ. ಕೃಷಿ ಕುಟುಂಬಗಳಿಗೆ ಒಂದೇ ಮೂಲದಿಂದ ಕನಿಷ್ಠ ಆದಾಯ ಸಿಗಲಾರದು. ಅವರಿಗೆ ಜೀವನ ನಿರ್ವಹಣೆಯ ಒಂದಕ್ಕಿಂತ ಹೆಚ್ಚು ಅವಕಾಶಗಳನ್ನು ಒದಗಿಸಬೇಕು. ಆದ್ದರಿಂದ ವಿಶೇಷ ಪರಿಣತಿಯ ವಿಭಾಗಗಳಲ್ಲಿ ಆಳವಾದ ಸಂಶೋಧನೆಯೊಂದಿಗೆ ಕೃಷಿ, ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳ ಸಮಗ್ರೀಕರಣವೂ ಅಗತ್ಯ. ರೈತರ ದೃಷ್ಟಿಯಿಂದ ಇದು ಬಹಳ ಮಹತ್ವದ್ದು.

ಅಕ್ಕಿ, ಗೋಧಿ, ಜೋಳ, ಸಜ್ಜೆ, ಮೆಕ್ಕೆ ಜೋಳ ಈ ಐದು ಬೆಳೆಗಳ ಹಸಿರುಕ್ರಾಂತಿ ಸರಕು-ಕೇಂದ್ರಿತ ನಿಲುವಿನಿಂದ ಬಂದಿತ್ತು. ಅದು ಆರ್ಥಿಕ ಇಳುವರಿ ತಳಿಗಳ ಕಾರ್ಯಕ್ರಮವಾಗಿತ್ತು. 1960 ರ ದಶಕದಲ್ಲಿ ನಾವು 1 ಕೋಟಿ ಟನ್ ಗೋಧಿಯನ್ನು ಪಿ.ಎಲ್.480 ಕಾರ್ಯಕ್ರಮದಡಿ ಆಮದು ಮಾಡುತ್ತಿದ್ದೆವು. ಆದ್ದರಿಂದ ಆಗ ಅಂತಹ ನಿಲುವು ಬೇಕಿತ್ತು. ಆದರೆ ಈಗ ನಾವು ನಮ್ಮ ಕೃಷಿ ಕ್ರಾಂತಿಯ ಒಂದು ಹಂತ ತಲುಪಿದ್ದೇವೆ. ಈಗ ನಾವಿರುವ ಮುಂದಿನ ಹಂತದಲ್ಲಿ ರೈತರಿಗೆ ಪರಿಸರ, ಮಾರುಕಟ್ಟೆ ಇತ್ಯಾದಿಗಳ ಆಧಾರದಲ್ಲಿ ವಿವರವಾದ ಸಕ್ರಿಯವಾದ ಸಲಹೆ ಬೇಕು. ಈ ಹಿನ್ನೆಲೆಯಲ್ಲಿ ಕೃಷಿ ವಿಶ್ವವಿದ್ಯಾಲಯಗಳು ಪರಿಸರ-ತಂತ್ರಜ್ಞಾನ ಕ್ರಾಂತಿಯ ಮುಂಚೂಣಿಯಲ್ಲಿರಬೇಕು.

ಮೂರನೇಯದಾಗಿ, ವಿಸ್ತರಣಾ ಕಾರ್ಯಕ್ರಮಗಳನ್ನು ತೀವ್ರವಾಗಿ ಪುನರ್ರಚಿಸಬೇಕಾಗಿದೆ. ಇದೊಂದು ತುರ್ತು ಅಗತ್ಯ. ಮುಂದಿನ ಐದು ವರ್ಷಗಳಲ್ಲಿ ಪ್ರತಿಹಳ್ಳಿಯಲ್ಲಿ ಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ನಮಗೆ 7 ಲಕ್ಷ ಕೃಷಿ ಪದವೀಧರರು ಬೇಕು. ಈ ಕೇಂದ್ರಗಳು ಕಂಪ್ಯೂಟರ್ ಹಾಗೂ ಇಂಟರ್‌ನೆಟ್‌ಗಳಿಂದ ಸಜ್ಜಿತವಾಗಿರಬೇಕು. ಇವು ಇನ್ನೂ ಹತ್ತು ಲಕ್ಷ ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತವೆ. ಈಗ ವಿಸ್ತರಣಾ ಸೇವೆಗಳು ನಿರುಪಯುಕ್ತವಾಗಿವೆ. ಭಾರತೀಯ ಕೃಷಿ ಸಂಶೋಧನಾ ವ್ಯವಸ್ಥೆ? ಅಲ್ಪಾವಧಿಯ ಪದವಿಯೇತರ ಕಾರ್ಯಕ್ರಮಗಳ ಬಗ್ಗೆ ಯೋಚಿಸಬೇಕು ನಾವೊಂದು ಮಾಹಿತಿ ಸಂಪನ್ನ, ಆದರೆ ಕ್ರಿಯಾ ಹೀನ ದೇಶ ಭೌಗೋಳಿಕ ಮಾಹಿತಿ ವ್ಯವಸ್ಥೆ ನಮ್ಮಲ್ಲಿ ಬಹಳಷ್ಟಿದೆ. ಆದರೆ ಅದನ್ನು ಸಾಕಷ್ಟು ರೀತಿಯಲ್ಲಿ ಬಳಸುತ್ತಿಲ್ಲ.

ಕೃಷಿಯ ಮೇಲೆ ವಿಶ್ವ ವ್ಯಾಪಾರ ಸಂಘಟನೆ(WTO) ಒಪ್ಪಂದದ ಪರಿಣಾಮಗಳೇನು? 1994 ರ WTO ಮಾತುಕತೆಗಳಲ್ಲೇ ದೇಶಗಳ ನಡುವೆ ಅಸಮಾನತೆಯ ಅಂಶ ಅಡಕವಾಗಿದೆ ಮತ್ತು ಈ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ನೀವಂದಿದ್ದೀರಿ. ನಿಮ್ಮ ಆತಂಕಗಳೇನು? ಮರು ಮಾತುಕತೆಯ ಪ್ರಕ್ರಿಯೆಯಲ್ಲಿ ಭಾರತ ಯಾವ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಬೇಕು?

1994 ರ ಒಪ್ಪಂದ ಉರುಗ್ವೆ ಸುತ್ತಿನ ಮಾತುಕತೆಗಳೆಂಬ ದೀರ್ಘ ಮಾತುಕತೆಗಳ ನಂತರ ಬಂತು. ದೀರ್ಘ ಅವಧಿಯಲ್ಲಿ ನಮ್ಮಲ್ಲಿ ಸರಕಾರಗಳು ಬರಲಾದ್ದರಿಂದ ವಿವಿಧ ಅವಧಿಗಳಲ್ಲಿ ವಿಭಿನ್ನ ಮಂದಿ ನಮ್ಮನ್ನು ಮಾತುಕತೆಗಳಲ್ಲಿ ಪ್ರತಿನಿಧಿಸಿದ್ದರು. ಇದರಿಂದಾಗಿ ಈ ಪ್ರಕ್ರಿಯೆಯಲ್ಲಿ ಎಷ್ಟರಮಟ್ಟಿಗೆ ಏಕಸೂತ್ರತೆ ಇತ್ತು ಎಂಬುದು ಗೊತ್ತಿಲ್ಲ. ಆದರೆ WTO ಒಪ್ಪಂದದ ದಸ್ತಾವೇಜಿನಲ್ಲಿ ಪಾಶ್ಚಿಮಾತ್ಯದ ಪ್ರಾಬಲ್ಯದ ಪಕ್ಷಪಾತ ಎದ್ದು ಕಂಡಿದೆ. ಅದನ್ನು ಹಾಗೆ ಬೆಳೆಸಲಾಗಿದೆ. ಈ ಒಪ್ಪಂದದಲ್ಲಿರುವ ನೀಲಿ ಪೆಟ್ಟಿಗೆ (ಬ್ಲೂಬಾಕ್ಸ್), ಹಸಿರು ಪೆಟ್ಟಿಗೆ(ಗ್ರೀನ್ ಬಾಕ್ಸ್) ಇತ್ಯಾದಿಗಳನ್ನು ಮಾತುಕತೆಗಳಲ್ಲಿ ಭಾಗವಹಿಸಿದ್ದವರಲ್ಲಿ ಎಷ್ಟು ಮಂದಿ ಅರ್ಥ ಮಾಡಿಕೊಂಡಿದ್ದರೋ ಗೊತ್ತಿಲ್ಲ. ಆದರೆ ಪಾಶ್ಚಿಮಾತ್ಯ ದೇಶಗಳಿಗೆ ಇದರಿಂದ ನಾವು ಏನು ಗಳಿಸಬೇಕು ಎಂಬುದರ ಸ್ಪಷ್ಟ ಅರಿವಿತ್ತು.



ಏನಾಗಿದೆಯೆಂದರೆ ಪಾಶ್ಚಿಮಾತ್ಯ ದೇಶಗಳು ಸಬ್ಸಿಡಿಗಳನ್ನು ಇಳಿಸುತ್ತವೆ. ಇದರಿಂದ ನಮ್ಮ ಕೃಷಿ ಉತ್ಪನ್ನಗಳು ವಿದೇಶಿ ಮಾರುಕಟ್ಟೆಯಲ್ಲಿ ಸ್ಪರ್ಧಿಸಬಲ್ಲವು ಎಂಬ ಆಧಾರವಿಲ್ಲದ ನಿರೀಕ್ಷೆಗಳಿದ್ದವು. ಆದರೆ ಅವು ನೆರವೇರಲಿಲ್ಲ, ಏಕೆಂದರೆ ಪಾಶ್ಚಿಮಾತ್ಯರು ತಮ್ಮ ಸಬ್ಸಿಡಿಗಳನ್ನು ವಿಭಿನ್ನ ರೀತಿಗಳಲ್ಲಿ ಅಡಗಿಸಿಟ್ಟರು. ಯುರೋಪಿನಲ್ಲಿ ಬೇಸಾಯವನ್ನು ಅವಲಂಬಿಸಿದವರು 2-3 ಶೇಕಡಾ ಮಾತ್ರವಾದರೂ ಅದು ಆಯಾ ದೇಶಗಳ ಅಸ್ತಿತ್ವಕ್ಕೆ ಬಹಳ ಮಹತ್ವದ್ದು. ಏಕೆಂದರೆ ಜೀವ ಪರಿಸರವನ್ನು ಒಂದು ಆಹಾರ ಉತ್ಪಾದನಾ ಯಂತ್ರವಾಗಿ ಮಾತ್ರ ನೋಡುತ್ತಿಲ್ಲ. ಅದು ಪರಿಸರದ ಒಳಿತಿನ ಒಂದು ಮಹತ್ವದ ಚಟುವಟಿಕೆ ಎಂದು ನೋಡಲಾಗುತ್ತಿದೆ.

ಹೀಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಕೃಷಿಯನ್ನು ಬಹುಮುಖೀ ಕೆಲಸಗಳ ಅಂದರೆ ಗಾಳಿಯನ್ನು ಶುದ್ಧಗೊಳಿಸುವುದು, ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿಕೊಳ್ಳುವುದು ಇತ್ಯಾದಿಗಳ ಸಾಧನವಾಗಿ ನೋಡಲಾಗುತ್ತಿದೆ. ಭಾರತದಲ್ಲಿ ಈ ರೀತಿ ಬಹುಮುಖಿ ಕೆಲಸಗಳ ಪ್ರಶ್ನೆ ಇನ್ನೂ ಹೆಚ್ಚಾಗಿದೆ. ಏಕೆಂದರೆ ಇದು ನಗರದ ಜನಗಳಿಗೆ ಆಹಾರ ಉತ್ಪಾದಿಸುವ ಒಂದು ಸಾಧನ ಮಾತ್ರವೇ ಅಲ್ಲ, ಕೋಟ್ಯಾಂತರ ಜನಗಳ ಜೀವನ ನಿರ್ವಹಣೆಯ ಸಾಧನವೂ ಕೂಡಾ.

ಅಸಮಾನ ಒಪ್ಪಂದಕ್ಕೆ ಬಂದುದಕ್ಕೆ ಯಾರನ್ನಾದರೂ ದೂಷಿಸಲಿಕ್ಕಾಗಿ ನಾನು ಶ್ವೇತ ಪತ್ರ ಕೇಳಿರಲಿಲ್ಲ. ಈ ಹಲವು ಒಪ್ಪಂದಗಳಲ್ಲೇ ವಿವಿಧ ದೇಶಗಳಿಗೆ ಅಸಮಾನ ಚೌಕಾಸಿ ಅವಕಾಶ ಅಡಕವಾಗಿದೆ. ಜಗತ್ತು ಇರುವುದೇ ಹಾಗೆ. ಆದ್ದರಿಂದ ಈ ಒಪ್ಪಂದಗಳ ಬಗ್ಗೆ ರಾಜಕೀಯ ಮಾಡಿ ಪ್ರಯೋಜನವಿಲ್ಲ. ನಾವೀಗ ಕಳೆದ ಆರು ವರ್ಷಗಳಲ್ಲಿ WTO ನಿಂದ ಯಾವ ಪಾಠ ಕಲಿತಿದ್ದೇವೆ. ಎಂದು ಪ್ರಾಮಾಣಿಕವಾಗಿ ನಮ್ಮನ್ನೇ ಕೇಳಿಕೊಳ್ಳಬೇಕು. ಹಿಂದಿನ ಪಾಠಗಳ ಆಧಾರದಲ್ಲಿ ಮಾತ್ರವೇ ಭವಿಷ್ಯದ ಕಾರ್ಯತಂತ್ರವನ್ನು ನಾವು ರೂಪಿಸಿಕೊಳ್ಳಲು ಸಾಧ್ಯ.

ಹೀಗೆ ಈ ಚೌಕಾಸಿಗೆ ಇಳಿದಾಗ ನಮ್ಮ ನಿರೀಕ್ಷೆಗಳೇನಿತ್ತು, ಅವನ್ನು ಎಷ್ಟರಮಟ್ಟಿಗೆ ನೆರವೇರಿವೆ ಎಂಬುದರ ವಿಶ್ಲೇಷಣೆಯನ್ನು ಸರಕಾರ ಮಾಡಬೇಕು ಎಂದು ನಾನು ಆಶಿಸಿದ್ದೆ. ಕೈಗಾರೀಕರಣ ಹೊಂದಿದ ದೇಶಗಳು ಈ ಒಪ್ಪಂದದಲ್ಲಿ ತಂದ ವಿವಿಧ 'ಪೆಟ್ಟಿಗೆ'ಗಳಲ್ಲಿ ವಚನ ನೀಡಿದ್ದ ಸಬ್ಸಿಡಿ ಕಡಿತಗಳನ್ನು ನಿಜವಾಗಿಯೂ ಮಾಡಿದ್ದಾರೆಯೇ ಅಥವಾ ಅವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆಯೇ ಎಂದೂ ನೋಡಬೇಕಾಗಿದೆ. ಅದೇ ರೀತಿ ಅವರು ಸಾಮಾಜಿಕ, ಪರಿಸರ ಇತ್ಯಾದಿ ವ್ಯಾಪಾರೇತರ ಅಂಶಗಳನ್ನು ಎಳೆದು ತರುವಾಗ ನಾವೇನು ಮಾಡಬೇಕು?

ಸರಕಾರ ಈ ಕೆಲವು ಪ್ರಶ್ನೆಗಳ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಶ್ವೇತ ಪತ್ರ ಹೊರಡಿಸಿ ಎಂದು ಹೇಳಲು ಕಾರಣ ಇದು. *ಒಂದು ಧೋರಣೆ 70 ಶೇಕಡಾಕ್ಕೂ ಹೆಚ್ಚು ಜನಗಳನ್ನು ತಟ್ಟುವಾಗ ಒಂದು ಪ್ರಜಾಪ್ರಭುತ್ವ ಸಮಾಜದಲ್ಲಿ ಜನ ನಿಜವಾಗಿ ಏನು ನಡೆಯುತ್ತಿದೆ* ಎಂದು ತಿಳಿಯಬಯಸುತ್ತಾರೆ. ಯಾವುದನ್ನು ಮರೆಮಾಚದೆ ಇದುವರೆಗಿನ ತಳೆದ ನಿಲುವಿನ ಬಗ್ಗೆ ಒಂದು ಪ್ರಾಮಾಣಿಕ ವಿವರಣೆ ಅಗತ್ಯ. ಇದು ಭವಿಷ್ಯದ ಚೌಕಾಸಿಗೂ ನೆರವಾಗುತ್ತದೆ. ಹಲವು ವ್ಯಾಪಾರೇತರ ಅಂಶಗಳನ್ನು WTO ದಲ್ಲಿ ಸೇರಿಸಲಾಗುತ್ತಿದೆ. ಪರಿಸರ ಕುರಿತಂತೆ ವಿಶ್ವ ಸಂಸ್ಥೆ ಪರಿಸರ ಕಾರ್ಯಕ್ರಮ(UNEP) ಶ್ರಮಶಕ್ತಿಯನ್ನು ಕುರಿತಂತೆ ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ(ಐ.ಎಲ್.ಓ) ಇತ್ಯಾದಿ ಇರುವಾಗ ವ್ಯಾಪಾರ ಒಪ್ಪಂದವೊಂದರಲ್ಲಿ ಇವನ್ನೆಲ್ಲಾ ಹೊರಿಸುವ ಅಗತ್ಯವೇನಿದೆ? ಇತ್ತೀಚೆಗೆ ಅಧ್ಯಕ್ಷ ಕ್ಲಿಂಟನ್ ಮಾನವೀಯ ಮುಖದ ವ್ಯಾಪಾರ ಎಂಬ ಮಾತು ಹೇಳಿದ್ದಾರೆ. ಇದು ಮಹತ್ವದ್ದು. ಏಕೆಂದರೆ ಈ ಕೈಗಾರಿಕೀಕೃತ ದೇಶಗಳು ಬಡತನ ನಿವಾರಣೆಗೆ 'ಸಹಾಯ'ವಲ್ಲ, 'ವ್ಯಾಪಾರ' ಬೇಕು ಎನ್ನುತ್ತಿದ್ದಾರೆ. ಹೀಗಿರುವಾಗ ವ್ಯಾಪಾರ ಎಂಬುದು ನ್ಯಾಯದ ಆಂದೋಲನದ ಮಿತ್ರನಾಗಿರಬೇಕೇ ಹೊರತು ಅಸಮತೆಯ ಮೂಲವಾಗಬಾರದು. ವ್ಯಾಪಾರ ಎಂಬುದು ಸಮನ್ವಯದ ಆಂದೋಲನದ ಮಿತ್ರನಾಗಬೇಕಾದರೆ ಆಮದುಗಳು ನಮ್ಮ ಬಡವರ ಬದುಕನ್ನು ನಾಶ ಮಾಡುವಂತಿರಬಾರದು.

WTO ಒಪ್ಪಂದ ಕುರಿತಂತೆ ಕಳೆದ ಆರು ವರ್ಷಗಳ ಅನುಭವವೇನು?

ಕೈಗಾರಿಕೀಕೃತ ದೇಶಗಳು ಸಬ್ಸಿಡಿಗಳನ್ನು ಇಳಿಸುವ

ಪುಟ 9 ರಿಂದ

ಗುಜರಾತ್‌ನಲ್ಲಿ ಭೀಕರ ಭೂ

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಭೀಕರ ಭೂಕಂಪ ಗುಜರಾತ್‌ನ ಕಚ್ ಪ್ರದೇಶದಲ್ಲಿ ಬಡಿದಿದೆ. 30 ಸಾವಿರಕ್ಕಿಂತಲೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ ಭೂಕಂಪ 25 ಸಾವಿರ ಕೋಟಿಯಷ್ಟು ನಷ್ಟಕ್ಕೆ ಕಾರಣವಾಗಿದೆ. ದಕ್ಷಿಣದ ಬೆಂಗಳೂರಿನವರೆಗೆ ಜನರನ್ನು ತಟ್ಟಿದ ಈ ಭೂಂಕಪದ ಬಗ್ಗೆ ಒಂದು ನೋಟ.

ಶರತ್ ಚಂದ್ರ


ಅತ್ಯಂತ ಭೀಕರ ಭೂಕಂಪ ಗುಜರಾತ್‌ನ ಕಚ್ ಪ್ರದೇಶದಲ್ಲಿ ಬಡಿದಿದೆ. ಎಂದಿನಂತೆ ಯಾವುದೇ ಪ್ರಾಕೃತಿಕ ಪ್ರಕೋಪ ಸಂಭವಿಸಿದಾಗ ಎಲ್ಲವೂ ಅನಿಶ್ಚಿತವಾಗಿರುವಂತೆ ಇಲ್ಲೂ ಆಗಿದೆ. ಈಗಲೂ ಈ ಭೀಕರ ಭೂಕಂಪದಿಂದ ಆದ ಪ್ರಾಣ, ಆಸ್ತಿಗೆ ಹಾನಿಯ ನಿಖರವಾದ ಅಂದಾಜು ಯಾರಿಗೂ ಇಲ್ಲ. ಅಧಿಕೃತ 25 ಸಾವಿರವೆಂದ ರಕ್ಷಣಾಮಂತ್ರಿ ಜಾರ್ಜ್‌ರವರ ಅಂದಾಜು ಲಕ್ಷದವರೆಗೆ ಪ್ರಾಣ ಹಾನಿಯಾಗಿರುವ ಅಂದಾಜು ಏರುತ್ತಿದೆ. 25 ಸಾವಿರ ಕೋಟಿಗೂ ಹೆಚ್ಚು ಆಸ್ತಿಪಾಸ್ತಿ ಹಾನಿ ಆಗಿದೆ. ಗುಜರಾತಿನ ಉತ್ತರ ಭಾಗದ (ಪಾಕಿಸ್ತಾನದ ಜತೆ ಗಡಿ ಪ್ರದೇಶದಲ್ಲಿರುವ) ಕಚ್ ಪ್ರದೇಶದಲ್ಲಿ ಭೂಕಂಪದ ಕೇಂದ್ರವಿದ್ದು, ಗುಜರಾತ್‌ನ ವಿಸ್ತೃತ ಪ್ರದೇಶಗಳಿಗೆ ಅದರ ಪರಿಣಾಮ ತಟ್ಟಿದೆ.

ಭೂಕಂಪದ ಅತ್ಯಂತ ಭೀಕರ ಪರಿಣಾಮ ತಟ್ಟಿದ್ದು ಈ ಪ್ರದೇಶದ ಭುಜ್ ಎಂಬ ಪಟ್ಟಣದಲ್ಲಿ. ಈ ಪಟ್ಟಣದ ಹೆಚ್ಚು ಕಡಿಮೆ ಎಲ್ಲಾ ಬಹು ಮಹಡಿ ಕಟ್ಟಡಗಳು ನೆಲಸಮವಾಗಿದ್ದು - ಹೆಚ್ಚು ಕಡಿಮೆ ಈ ಪಟ್ಟಣದ ಜನಸಂಖ್ಯೆಯ ಅರ್ಧದಷ್ಟು ಜನಕ್ಕೆ ಭೂಕಂಪ ತಟ್ಟಿದೆ. ಈ ಪಟ್ಟಣದ ಜನಸಂಖ್ಯೆ ಸುಮಾರು ಒಂದು ಲಕ್ಷ. ಈ ಪಟ್ಟಣ ಹೆಚ್ಚುಕಡಿಮೆ ನಿರ್ನಾಮವಾಗಿದೆ. ಭುಜ್‌ನ ಸುತ್ತಮುತ್ತ ಪ್ರದೇಶಗಳಿಗೆ ತೀವ್ರ ಪರಿಣಾಮ ತಗಲಿದೆ. ಭುಜ್‌ನಿಂದ ಅತ್ಯಂತ ದಾರುಣವಾದ ಸಾವಿರ ವರದಿಗಳು ಬಂದಿವೆ. ರಿಪಬ್ಲಿಕ್ ದಿನದ ಪರೇಡ್‌ನಲ್ಲಿ ಭಾಗವಹಿಸಿ ನಾಲ್ಕು ನೂರು ಶಾಲಾ ಮಕ್ಕಳು ಗಲ್ಲಿಯಲ್ಲಿ ಹೋಗುತ್ತಿದ್ದಂತೆ ಅಕ್ಕಪಕ್ಕದ ಕಟ್ಟಡಗಳು ಕುಸಿದು ಎಲ್ಲರೂ ಸಾವಿಗೀಡಾಗಿರುವುದು ಇಂತಹ ದಾರುಣ ಘಟನೆಗಳಲ್ಲೊಂದು. ಭುಜ್ ಮತ್ತು ಹತ್ತಿರದ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು, ನೀರು ಸರಬರಾಜು, ಟೆಲಿಫೋನ್ ಸಂಪರ್ಕ ಮುಂತಾದ ಎಲ್ಲಾ ಮೂಲಸೌಕರ್ಯಗಳು ಸಂಪೂರ್ಣವಾಗಿ ಕಳಚಿಬಿದ್ದಿವೆ. ಈ ಪ್ರದೇಶದ ಆಡಳಿತವೇ ಕೆಲವು ದಿನಗಳವರೆಗೆ ಕುಸಿದು ಬಿದ್ದಿತ್ತು. ಆಡಳಿತ, ಪೋಲೀಸ್, ಅಗತ್ಯ ಸೇವೆಗಳ ಉದ್ಯೋಗಿಗಳೇ ಭೂಕಂಪದಿಂದ ಸಾವಿಗೀಡಾಗಿರುವುದರಿಂದ ಹೊರಗಿನ ಸಹಾಯ ಬಂದ ನಂತರವೇ ಜನರನ್ನು ಬದುಕಿಸುವ, ಪರಿಹಾರ ಒದಗಿಸುವ ಕಾರ್ಯಕ್ರಮ ಆರಂಭವಾಗಿದೆ. ಇದರಲ್ಲಿ ಅತ್ಯಂತ ಗಂಭೀರವಾದ ಸಂಕೀರ್ಣವಾದ ಕೆಲಸ ಎಂದರೆ ಕುಸಿದಿರುವ ಬಹುಮಹಡಿ ಕಟ್ಟಡಗಳ ರಾಶಿಯಿಂದ ಬದುಕುಳಿದವರನ್ನು ಹೊರಗೆ ತೆಗೆಯುವಂತಹದು. ನಾಲ್ಕು ಐದು ದಿನಗಳ ಕಾಲ ಈ ಪ್ರಯತ್ನ ನಡೆದಿದ್ದು, ನಮ್ಮ ಸೈನ್ಯವಲ್ಲದೆ ವಿದೇಶಗಳ ಹಲವು ಪರಿಣತ ತಂಡಗಳು ಇದರಲ್ಲಿ ಭಾಗವಹಿಸಿದ್ದವು. ನಾಲ್ಕೈದು ದಿನಗಳ ಪ್ರಯತ್ನದ ನಂತರ ಇಂತಹ ಯಾರೂ ಇನ್ನೂ ಬದುಕುಳಿದಿಲ್ಲ ಎಂದು ತೀರ್ಮಾನಿಸಿ, ಈ ಕೆಲಸ ಕೈ ಬಿಡಲಾಗಿದೆ. ಆದರೂ ಬಹುಮಹಡಿ ಕಟ್ಟಡಗಳ ಪಳೆಯುಳಿಕೆಗಳನ್ನು ಎತ್ತಿ ಶುಚಿ ಮಾಡುವ ಕೆಲಸ ಸಾಗಿದ್ದಂತೆ ಹಲವು ಜೀವಂತ ಜನ ಪತ್ತೆಯಾಗಿದ್ದ ಸುದ್ದಿಗಳು ಬಂದಿವೆ.

ಭುಜ್ ಅಲ್ಲದೆ, ಅಹಮದಾಬಾದ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲೂ ಭೂಕಂಪದ ಪರಿಣಾಮ ಬೀರಿದ ಇತರ ಪ್ರದೇಶಗಳು. ಅಹಮದಾಬಾದ್‌ನ ಹಲವು ಪ್ರದೇಶಗಳ ಬಹುಮಹಡಿ ಕಟ್ಟಡಗಳು ನೆಲಸಮವಾಗಿವೆ. ಸಾವಿರಾರು ಜನ ಕುಸಿದ ಕಟ್ಟಡಗಳ ಅಡಿ ಸಿಕ್ಕಿ ಸತ್ತಿದ್ದಾರೆ. ಸಾಯದೆ ತೀವ್ರವಾಗಿ ಗಾಯಗೊಂಡವರ, ಬದುಕುಳಿದವರ ಪಾಡು ಸತ್ತವರಿಗಿಂತಲೂ ದಾರುಣ. ಆಹಾರ, ಮನೆ, ನೀರು, ಔಷಧಿ, ವೈದ್ಯಕೀಯ ಚಿಕಿತ್ಸೆ ಎಲ್ಲದರ ಭಾರೀ ಅಭಾವ ಭೂಕಂಪ ಪೀಡಿತ ಪ್ರದೇಶದಲ್ಲಿದೆ. ಮೊದಲ ದಿನದ ಭೂಕಪಂದ ನಂತರವೂ ಹಲವು ಕಂಪನಗಳು ಆಗುತ್ತಿದ್ದು, ಬಿದ್ದಿರದ ಮನೆಗಳೂ ಬಿರುಕುಬಿಟ್ಟು ಇರಲು ಅಯೋಗ್ಯವೆನಿಸಿವೆ. ಇನ್ನು ಭೂಕಂಪಗಳು ಬರುತ್ತಿದ್ದು, ಮನೆ ಇದ್ದವರೂ ಭಯದಿಂದ ಕೊರೆಯುವ ಚಳಿಯಲ್ಲಿ ಬಯಲುಗಳಲ್ಲಿ ವಾಸಿಸುವಂತಾಗಿದೆ.



ಗುಜರಾತಿನ ಭೂಕಂಪ ನಮ್ಮ ದೇಶದಲ್ಲಿ ದೊಡ್ಡ ಪ್ರಾಕೃತಿಕ ಪ್ರಕೋಪಗಳನ್ನು ಎದುರಿಸುವ ತಯಾರಿ, ವ್ಯವಸ್ಥೆಯ ನ್ಯೂನತೆಗಳನ್ನು ಇನ್ನೊಮ್ಮೆ ಎತ್ತಿ ತೋರಿಸಿದೆ. ಭೂಕಂಪವಾದ 48 ಗಂಟೆಗಳವರೆಗೆ ಯಾವುದೇ ಪ್ರಮುಖ ಕಾರ್ಯಾಚರಣೆ ಭುಜ್ ಮುಂತಾದ ಅತ್ಯಂತ ಪೀಡಿದ ಪ್ರದೇಶಗಳಲ್ಲಾಗಲೀ, ಅಹಮದಾಬಾದ್‌ನಂತಹ ಪ್ರದೇಶಗಳಲ್ಲಾಗಲಿ ಸಾಧ್ಯವಾಗಲಿಲ್ಲ. ಬಹುಮಹಡಿ ಕಟ್ಟಡಗಳ ಅಡಿಯಲ್ಲಿ ಸಿಕ್ಕಿ ಬಿದ್ದವರನ್ನು ರಕ್ಷಿಸಲು ಅತ್ಯಗತ್ಯ ಕ್ರೇನ್‌ಗಳು, ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರಲಿಲ್ಲ. ಇದ್ದವನ್ನು ಅತ್ಯಂತ ಹೆಚ್ಚಿನ ಅಗತ್ಯ ಇರುವ, ಆದ್ಯತೆಯ ಪ್ರದೇಶಗಳನ್ನು ಗುರುತಿಸಿ ಅಲ್ಲಿಗೆ ಕಳುಹಿಸುವ ವ್ಯವಸ್ಥೆ ಆಗಲಿಲ್ಲ. ರಾಜಧಾನಿ ಅಹಮದಾಬಾದಿನಲ್ಲಿ ಭೂಕಂಪಕ್ಕೆ ಸಂಬಂಧಪಟ್ಟ ಎಲ್ಲಾರಕ್ಷಣಾ, ಪರಿಹಾರ ಕಾರ್ಯ ಸಂಯೋಜಿಸುವ ಕೇಂದ್ರೀಯ ಕಂಟ್ರೋಲ್ ರೂಂ 48 ಗಂಟೆವರೆಗೆ ಸ್ಥಾಪನೆ ಆಗಿರಲಿಲ್ಲ. ರಕ್ಷಣಾ, ಪರಿಹಾರ ಕಾರ್ಯಗಳಲ್ಲಿ ಪ್ರವೃತ್ತರಾದ ಪ್ರಥಮ ಸೈನ್ಯದ ತುಕಡಿಗಳು, ಸ್ವಯಂ ಸೇವಾ ಸಂಘಟನೆಗಳನ್ನು ಬಿಟ್ಟರೆ ಆಡಳಿತ ಯಂತ್ರದ ಪ್ರತಿಕ್ರಿಯೆ ತೀರಾ ವಿಳಂಬವಾಗಿತ್ತು. ಎಷ್ಟೋ ಪ್ರದೇಶಗಳಲ್ಲಿ ವಿದೇಶಗಳಿಂದ ಬಂದ ರಕ್ಷಣಾ ತಂಡಗಳು, ಸ್ಥಳೀಯವಾಗಿ ಬೇರೆ ಕಡೆಯಿಂದ ಬಂದ ತಂಡಗಳು ಒಂದೇ ಸಮಯಕ್ಕೆ ತಲುಪಿದವು. ಅಂದರೆ ಇಂತಹ ಪ್ರಕೋಪಗಳಿಗೆ ತುರ್ತಿನ ಪ್ರತಿಕ್ರಿಯೆ ತೋರುವ ರಾಷ್ಟ್ರೀಯ ವ್ಯವಸ್ಥೆಯ ಅಭಾವವನ್ನು ಎತ್ತಿ ತೋರಿಸಿತು.



ಈಗ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಆರಂಭವಾಗಿ ಸೈನ್ಯ, ಸ್ಥಳೀಯ ಆಡಳಿತ, ಸ್ವಯಂ ಸೇವಾ ಪಡೆಗಳು ಸಾಕಷ್ಟುಸಂಖ್ಯೆಯಲ್ಲಿ ಸಂಪನ್ಮೂಲ ಹೊಂದಿ ನಡೆಯುತ್ತಿದ್ದರೂ, ಇಡೀ ಪರಿಹಾರ ಕಾರ್ಯದ ಸೂಕ್ತ ಸಂಯೋಜನೆಯ ಅಭಾವ ಇದ್ದೇ ಇದೆ. ಭುಜ್ ಅಹಮದಾಬಾದ್ ಮುಂತಾದ ಪ್ರಮುಖ ಪಟ್ಟಣಗಳನ್ನು ಬಿಟ್ಟರೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಗೆ ಪರಿಹಾರ ಸಾಮಗ್ರಿ ಪೂರೈಕೆ ತೀರಾ ಅತೃಪ್ತಿಕರವಾಗಿದೆ ಎಂಬ ತೀವ್ರ ದೂರುಗಳು ಇವೆ. ನಗರ ಪ್ರದೇಶಗಳಲ್ಲಿ ಬಡವರು ವಾಸಿಸುವ ಪ್ರದೇಶಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಸಾಲದು ಎಂಬ ದೂರುಗಳೂ ಇವೆ. ತುರ್ತು ಪ್ರತಿಕ್ರಿಯೆ ಅಭಾವ ಮಾತ್ರವಲ್ಲದೆ, ನಂತರವೂ ನಿಖರವಾದ ವೈಜ್ಞಾನಿಕ ಮಾಹಿತಿಯ ಅಭಾವ ಈ ಪ್ರಕೋಪದ ಪರಿಣಾಮವನ್ನು ಇನ್ನಷ್ಟು ಹೆಚ್ಚಿಸಿತು. ಇನ್ನಷ್ಟು, ಮತ್ತಷ್ಟು ಭೂಕಂಪಗಳ ಬಗ್ಗೆ ಜ್ಯೋತಿಷಿಗಳು, ವದಂತಿ ಹರಡುವವರು ಹೇಳುತ್ತಿದ್ದ ಭವಿಷ್ಯವಾಣಿಗಳೇ ಜನರಿಗೆ 'ಮಾಹಿತಿ'ಯ ಮೂಲಗಳಾಗಿದ್ದವು. ಇನ್ನೂ ಗಟ್ಟಿಯಾಗಿ ನಿಂತಿರುವ ಬಹು-ಮಹಡಿ ಕಟ್ಟಡಗಳಲ್ಲಿ ವಾಸಿಸಬಹುದೇ, ಇಲ್ಲವೇ ಎಂಬುದರ ಬಗೆಗೆ ಜನರು ನಿರ್ಧರಿಸಲು ಬೇಕಾದ ಮಾಹಿತಿಯನ್ನು ಆಡಳಿತ ಒದಗಿಸಲಾಗಲಿಲ್ಲ.

ನಾಶವಾದ ಪಟ್ಟಣ, ಹಳ್ಳಿಗಳ ಪುನರ್ ನಿರ್ಮಾಣ, ಆ ಪ್ರದೇಶಗಳಲ್ಲಿ ಜನಜೀವನ ಸಾಮಾನ್ಯಗೊಳಿಸುವ ಆರ್ಥಿಕ ಚಟುವಟಿಕೆಗಳ ಪುನರಾರಂಭ ಇಡೀ ದೇಶದ ಮುಂದಿರುವ ಪ್ರಮುಖ ಸಮಸ್ಯೆ. ಹಿಂದಿನ ಎಲ್ಲಾ ಪ್ರಾಕೃತಿಕ ಪ್ರಕೋಪಗಳನ್ನು ಗಮನಿಸಿದರೆ(ಒರಿಸ್ಸಾ ನೆರೆಯಾಗಲಿ, ಚಮೋಲಿ ಭೂಕಂಪವಾಗಲಿ) ಈ ಬಗೆಯ ಸರಿಯಾದ ರಾಷ್ಟ್ರೀಯ ಸಂಯೋಜಿತ ವ್ಯವಸ್ಥೆಯ ಅಭಾವ ಎದ್ದು ಕಾಣುತ್ತದೆ.

ಇವೆಲ್ಲ ನಕಾರಾತ್ಮಕ ಅಂಶಗಳ ನಡುವೆಯೂ 50 ವರ್ಷಗಳಲ್ಲಿ ಭೀಕರವಾದ ಭೂಕಂಪ ಹಲವು ಸಕಾರಾತ್ಮಕ ಅಂಶಗಳನ್ನು ತೋರಿತು. ಇಡೀ ದೇಶ ಗುಜರಾತಿನ ಭೂಕಂಪ ಪೀಡಿತರ ಬಗ್ಗೆ ಸ್ಪಂದಿಸಿತು. ಪರಿಹಾರ ಸಾಮಗ್ರಿಗಳು, ಸ್ವಯಂ ಸೇವಕರು ದೇಶದ ಎಲ್ಲಾ ಭಾಗಗಳಿಂದ ಧಾವಿಸಿ ಬಂದರು. ಅಹಮದ್ ದಾಬಾದ್ ಕೋಮುಗಲಭೆ ಪೀಡಿತ ಪ್ರದೇಶಗಳಲ್ಲೂ ಎರಡೂ ಕೋಮುಗಳವರು ಹೆಗಲಿಗೆ ಹೆಗಲು ಕೊಟ್ಟು ಪರಿಹಾರ, ರಕ್ಷಣೆ ಕಾರ್ಯದಲ್ಲಿ ತೊಡಗಿದರು. ಒಬ್ಬರಿಗೊಬ್ಬರು ಸಹಾಯ ಮಾಡಿದರು. ಭೂಕಂಪ ಪೀಡಿತ ಪ್ರದೇಶಗಳಿಂದ ವಲಸೆ ಹೋದ ಜನರಿಗೆ, ಇತರ ಪ್ರದೇಶಗಳಲ್ಲಿ ವಾಸಿಸುವ ಮಿತ್ರರು,



ಪ-ಮುಂದೇನು?

ಸಂಬಂಧಿಕರು ಆಶ್ರಯ ಕೊಟ್ಟರು. 23 ದೇಶಗಳಿಂದ ಸಹಾಯ ಹರಿದು ಬಂತು. ಪಾಕಿಸ್ತಾನ ಸಹ ಎರಡು ವಿಮಾನಗಳಲ್ಲಿ ಪರಿಹಾರ ಸಾಮಗ್ರಿ ಕಳಿಸಿತ್ತು. ಅಂತರ್‍ರಾಷ್ಟ್ರೀಯ ಪರಿಣತರು ರಕ್ಷಣಾ ಕಾರ್ಯಗಳಲ್ಲಿ ಅತ್ಯಂತ ಅಮೂಲ್ಯ ಸಹಾಯ ಒದಗಿಸಿದರು. ಗುಜರಾತಿನ ಭೀಕರ ಭೂಕಂಪ ಇನ್ನೊಮ್ಮೆ ಇಂತಹ ಪ್ರಾಕೃತಿಕ ಪ್ರಕೋಪದ ಸಂದರ್ಭದಲ್ಲಿ ತುರ್ತು ಪ್ರತಿಕ್ರಿಯೆ ನೀಡುವ, ರಕ್ಷಣೆ ಮತ್ತು ಪರಿಹಾರ ಕಾರ್ಯದಲ್ಲಿ ತೊಡಗಬಲ್ಲ ರಾಷ್ಟ್ರೀಯ ತಂಡದ ನಿರ್ಮಾಣದ ಅಗತ್ಯವನ್ನು ಎತ್ತಿ ತೋರಿಸಿದೆ.

ಐವತ್ತು ವರ್ಷಗಳಲ್ಲೇ ಭೀಕರ ಭೂಕಂಪ

ಗುಜರಾತಿನ ಭೂಕಂಪ ಭಾರತದ ಉಪಖಂಡದಲ್ಲಿ ಆದ ಭೂಕಂಪಗಳಲ್ಲಿ ಕಳೆದ ಐವತ್ತು ವರ್ಷಗಳಲ್ಲೇ ಅತ್ಯಂತ ಭೀಕರ ಭೂಕಂಪವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಲ್ಲಿ ಭೀಕರ ಭೂಕಂಪಗಳಾದ ಟರ್ಕಿ ಮತ್ತು ಮೆಕ್ಸಿಕೋಕ್ಕೆ ಭೀಕರತೆಯಲ್ಲಿ ಸಮೀಪವಾದದ್ದು. ಭಾರತದ ಉಪಖಂಡದಲ್ಲಿ ಆದ ಪ್ರಮುಖ ಭೂಕಂಪಗಳು

1905	ಕಾಂಗ್ರಾ	19 ಸಾವಿರ ಸಾವು
1934	ಬಿಹಾರ	11 ಸಾವಿರ ಸಾವು
1935	ಕ್ವೆಟ್ಟಾ	65 ಸಾವಿರ ಸಾವು
1993	ಲಾತೂರು	10 ಸಾವಿರ ಸಾವು
2001	ಗುಜರಾತಿ	30 ಸಾವಿರಕ್ಕೂ ಹೆಚ್ಚು

ಕರ್ನಾಟಕದ ಜನತೆ ಗುಜರಾತ್‌ನ ಸಂತ್ರಸ್ತರಿಗೆ ಅಪೂರ್ವವಾಗಿ ಸ್ಪಂದಿಸಿದೆ. ರಾಜ್ಯದ ವಿವಿಧ ಮೂಲೆಗಳಲ್ಲಿ ನೆರವಿನ ಮಹಾಪೂರ ಹರಿದಿದೆ. ಇನ್ನೂ ಹೆಚ್ಚಿನ ಸಹಾಯ ಮಾಡಬೇಕಿದೆ.

ಕರ್ನಾಟಕದಲ್ಲೂ ಗುಜರಾತ್ ಭೂಕಂಪದ ಕಂಪನ

ಗುಜರಾತಿನ ಭೂಕಂಪಕ್ಕೆ ಕರ್ನಾಟಕದ ನೆಲವೂ ಸ್ಪಂದಿಸಿತು. ಜನವರಿ 29 ರಂದು ಕರ್ನಾಟಕದ ಕೆಲವು ಭಾಗಗಳಲ್ಲಿ ಆದ ಲಘು ಭೂಕಂಪ ಯಾವುದೇ ಹಾನಿ ಮಾಡದಿದ್ದರೂ, ಪ್ರಾಕೃತಿಕ ಪ್ರಕೋಪಗಳನ್ನು ಎದುರಿಸುವುದರಲ್ಲಿ ಸಾರ್ವಜನಿಕ ತಯಾರಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಎಬ್ಬಿಸಿತು. ಆಡಳಿತದಿಂದ ವೈಜ್ಞಾನಿಕ ಮಾಹಿತಿಯ ಅಭಾವ, ಬೆಂಗಳೂರು ಸೇರಿದಂತೆ ಹಲವು ಪ್ರದೇಶಗಳಲ್ಲಿ ಜನ ಜೀವನವನ್ನು ಪೂರ್ಣವಾಗಿ ತಟ್ಟಿತು. ದೊಡ್ಡ ಭೂಕಂಪ ಆಗಲಿದೆ, 11 ರಿಂದ 2 ಗಂಟೆಯ ಒಳಗೆ ಆಗಲಿದೆ ಎಂಬ ವದಂತಿ ಹರುಡುತ್ತಿದ್ದಂತೆ ಬಹುಮಹಡಿ ಕಟ್ಟಡಗಳಲ್ಲಿ ವಾಸಿಸುವ, ಕೆಲಸ ಮಾಡುವ ಜನ ಹೊರಗೆ ಬಂದು ತೆರೆದ ಪ್ರದೇಶಗಳಲ್ಲಿ ಕೂತರು. ಹಲವು ಕಚೇರಿಗಳು, ಸಂಸ್ಥೆಗಳು ರಜಾ ಕೊಟ್ಟವು. ರಜಾ ಕೊಡದಲ್ಲೂ ಕೆಲಸಕ್ಕೆ ತೀವ್ರ ಪರಿಣಾಮವಾಯಿತು. ಆಡಳಿತ ಎಂದಿನಂತೆ ಬಹಳ ನಿಧಾನವಾಗಿ ಪ್ರತಿಕ್ರಿಯಿಸಿತು. ಕರ್ನಾಟಕದ ಯಾವ ಪ್ರದೇಶವೂ ತೀವ್ರ ಭೂಕಂಪ ಪ್ರದೇಶದಲ್ಲಿಲ್ಲ. ತೀವ್ರ ಭೂಕಂಪದ ಅಪಾಯ ಇಲ್ಲ ಎಂಬ ಅಧಿಕೃತ ಮಾಹಿತಿ ಬರುವಾಗ ದಿನ ಮುಗಿದು ಹೋಗಿತ್ತು. ಟಿ.ವಿ., ಕೇಬಲ್ ಮಾಧ್ಯಮಗಳು ತಮ್ಮ ಎಂದಿನ 'ಸುದ್ದಿ ಮಾಡುವ' ತರಾತುರಿಯಲ್ಲಿ ಪರಿಸ್ಥಿತಿ ಸುಧಾರಿಸುವ ಬದಲು ಬಿಗಡಾಯಿಸಿದರು.



ಭೀಭತ್ಸ ಭೂಕಂಪ ಸಿಪಿಐ(ಎಂ) ನಿಯೋಗದ ಭೇಟಿ

ಸ್ವತಂತ್ರ ಭಾರತ ಕಂಡರಿಯದ ಭೀಕರ ಭೂಕಂಪ ಗುಜರಾತಿನಲ್ಲಿ ಸಂಭವಿಸಿದೆ. ಈ ದುರಂತದ ಅಗಾಧತೆ ಗಂಟೆಯಿಂದ ಗಂಟೆಗೆ ಹೆಚ್ಚುತ್ತಿದೆ. ಇದರಲ್ಲಿ ಸಂಭವಿಸಿರುವ ಸಾವು, ಈ ಶತಮಾನದಲ್ಲಿ ಭಾರತ ಕಂಡ ಸಾವುಗಳಲ್ಲಿಯೆ ಅತಿ ಹೆಚ್ಚಾಗಿ ದಾಖಲಾಗಲಿವೆ.

ಭೂಕಂಪದ ಕೇಂದ್ರವಾದ ಭುಜ್‌ನ ವೈಮಾನಿಕ ಛಾಯಾಚಿತ್ರ, ಈ ಪಟ್ಟಣದಲ್ಲಿ ಕೆಲವೇ ಕೆಲವು ಕಟ್ಟಡಗಳು ಮಾತ್ರ ಉಳಿದಿರುವುದನ್ನು ತೋರುತ್ತದೆ. ಈ ದುರಂತದಲ್ಲಿ ಸಂಭವಿಸಿರುವ ಸಾವುಗಳ ಸಂಖ್ಯೆ ಕುರಿತು ವಿಭಿನ್ನ ವರದಿಗಳು ಪ್ರಕಟವಾಗುತ್ತಿದ್ದರೂ, ದೂರದ ಚೀನಾ ಹಾಗೂ ಡೆಕನ್ ಪೆನಿನ್‌ಸುಲಾವರೆಗೆ ಕಂಪನದ ಅಲೆಗಳನ್ನು ಎಬ್ಬಿಸಿರುವ ಈ ದುರಂತ ಅತ್ಯಂತ ವಿನಾಶಕಾರಿ ದುರಂತವಾಗಿದೆ.

ಭೂಕಂಪದ ನಂತರ 10 ದಿನಗಳು ಕಳೆದಿದ್ದರೂ, ಇನ್ನೂ ಸಹಾ ಕಟ್ಟಡಗಳ ಅವಶೇಷಗಳಡಿ ಹುದುಗಿರುವ ದೇಹಗಳನ್ನು ಹೊರತೆಗೆಯುವ ಕೆಲಸ ಪೂರ್ಣವಾಗಿಲ್ಲ. ದೇಹಗಳು ಕೊಳೆಯಲು ಪ್ರಾರಂಭಿಸಿ ಸಾಂಕ್ರಾಮಿಕ ರೋಗಗಳು ಬದುಕುಳಿದಿರುವವರನ್ನು ಬಲಿತೆಗೆದುಕೊಳ್ಳುವ ಆತಂಕ ಎಲ್ಲೆಡೆ ಆವರಿಸಿದೆ. ಶವಗಳನ್ನು ಅತಿ ಶೀಘ್ರದಲ್ಲಿ ಹೊರತೆಗೆಯುವುದರೊಂದಿಗೆ ಬದುಕುಳಿದವರಿಗೆ ಆಶ್ರಯ - ಪುನರ್‌ವಸತಿಯನ್ನು ಜೊತೆಜೊತೆಯಲ್ಲೆ ಕಲ್ಪಿಸುವ ವ್ಯವಸ್ಥೆಯಾಗಬೇಕಿದೆ.

ಅಲ್ಲಿ ಉರಿಯುವ ಮನೆಯಲ್ಲಿ ಗಳಹಿರಿಯುವ ಕಳ್ಳರು, ಮೈಕಾಯಿಸಿಕೊಳ್ಳುವ ನೀಚರು

ಕೇಂದ್ರ ಸರ್ಕಾರ ಹಾಗು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಧನಸಹಾಯದ ಕೊರತೆ ಬಾರದೆಂದು ಘೋಷಿಸಿರುವವಾಗಲೆ, ಅಂತರಾಷ್ಟ್ರೀಯ ಹಾಗೂ ದೇಶೀಯ ಸಹಾಯ ಪರಿಹಾರ ನಿಧಿ ಹರಿದುಬರುತ್ತಿರುವಾಗಲೇ, ಪ್ರಧಾನ ಮಂತ್ರಿಗಳೇ ಪ್ರಕಟಿಸಿರುವಂತೆ ಇದು ಬಹಳ ನಿಧಾನಗತಿಯಲ್ಲಿ ಜನತೆಗೆ ವಿತರಣೆಯಾಗುತ್ತಿದೆ. ಈ ನ್ಯೂನ್ಯತೆಗಳು ಇಂತಹ ಭೀಕರ ದುರಂತದ ಸಂದರ್ಭದಲ್ಲಿ ಅತ್ಯಂತ ಅಮಾನವೀಯ ಹಾಗೂ ಅಕ್ಷಮ್ಯ.

ಲೂಟಿಕಾರರ ತಂಡಗಳು

ವಸತಿ ಹೀನರಾಗಿ ಬೀದಿಗಳಲ್ಲೆ ಬದುಕು ಸಾಗಿಸುತ್ತಿರುವ ಜನತೆಗೆ ವಸತಿ ಒದಗಿಸುವುದೊಂದು ದೊಡ್ಡ ಸವಾಲಾಗಿದೆ. ದುರಂತದಲ್ಲಿ ಮುಳುಗಿ ಸಂಕಷ್ಟಕ್ಕೀಡಾಗಿರುವ ನಿರಾಶ್ರಿತರನ್ನು ಲೂಟಿ ಮಾಡಲೆಂದೆ ಆ ಪಟ್ಟಣಗಳಿಗೆ ಸಂಘಟಿತ ಲೂಟಿಕೋರರ ಗ್ಯಾಂಗುಗಳು ಬಂದಿಳಿದಿವೆ. ಎಂಬ ಸುದ್ದಿಗಳು ಅತ್ಯಂತ ಅಘಾತಕಾರಿಯಾಗಿದ್ದು ಬದುಕುಳಿದಿರುವವರ ಪ್ರಾಣ - ಆಸ್ತಿಯ ರಕ್ಷಣೆಗೆ ರಾಜ್ಯದಲ್ಲಿ ಕಾನೂನು ಜಾರಿಮಾಡುವ ವ್ಯವಸ್ಥೆ ಅಸಮರ್ಪಕವಾಗಿದ್ದಲ್ಲಿ ಹೊರಗಿನ ಸಹಾಯ ಪಡೆಯಬೇಕಿದೆ. ಇವು ಸಿಪಿಐ(ಎಂ)ನ ಕಂಡುಕೊಂಡ ಧಾರುಣ ಸತ್ಯಗಳು.

ರಾಜ್ಯಪಾಲರ ಭೇಟಿಯಾದ ನಿಯೋಗ:

ಇಂತಹ ದುರಂತದಲ್ಲಿ ಮುಳುಗಿರುವ ಜನತೆಯನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಸಿತಾರಾಂ ಯೆಚೂರಿಯವರ ನೇತೃತ್ವದಲ್ಲಿ ಪಶ್ಚಿಮ ಬಂಗಾಳದ ಸಚಿವರಾದ ಮಹಮ್ಮದ್ ಅಮೀನ್, ಸಂಸತ್ ಸದಸ್ಯರಾದ ಸರಳಾ ಮಹೇಶ್ವರಿ, ಬಸುದೇಬ್ ಆಚಾರ್ಯ, ಬ್ರತಿನ್ ಸೇನ್‌ಗುಪ್ತಾ, ಹಾಗೂ ಗುಜರಾತಿನ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅರುಣ್ ಮೆಹ್ತಾರನ್ನೊಳಗೊಂಡ ನಿಯೋಗ ಬೇಟಿಮಾಡಿತು. ಅಹಮದಾಬಾದ್‌ನ ಅನೇಕ ಪ್ರದೇಶಗಳನ್ನು ಎಲ್.ಜಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳನ್ನು ಹಾಗೂ ಭುಜ್ ಪ್ರದೇಶವನ್ನು ನಿಯೋಗ ಭೇಟಿಮಾಡಿತು. ನಿಯೋಗ ಒಂದೆಡೆ ಸೈನಿಕರು ಶವಗಳನ್ನು ಹೊರತೆಗೆಯಲು ಸೆಣಸಾಡುತ್ತಿರುವುದನ್ನು ಮಣಿನಗರದಲ್ಲಿ ಕಂಡರಿತರೆ ಇನ್ನೊಂದೆಡೆ ನೊಂದ ನಿರಾಶ್ರಿತರಿಂದ ಪರಿಹಾರದ ಕೊರತೆ, ಪರಿಹಾರ ಕಾರ್ಯದಲ್ಲಿ ಸಂಯೋಜಿತ ಪ್ರಯತ್ನವಿಲ್ಲದಿರುವುದನ್ನು ಕೇಳರಿಯಿತು. ಅನಂತರ ಗುಜರಾತಿನ ರಾಜ್ಯಪಾಲರಾದ ಶ್ರೀ. ಎಸ್.ಎಸ್. ಭಂಡಾರಿಯವರನ್ನು ಭೇಟಿ ಮಾಡಿದ ನಿಯೋಗ, ಕಂಡದ್ದು ಹಾಗೂ ಕೇಳಿದ್ದನ್ನು ಅವರಿಗೆ ವಿವರಿಸಿತು. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಮೊದಲ ಕಂತಿನ ಸಹಾಯವಾಗಿ 5 ಲಕ್ಷ ರೂಪಾಯಿಗಳನ್ನು ನೀಡಿತು.

ವೈದ್ಯರ ತಂಡಗಳು

ಸಿಪಿಐ(ಎಂ) ಪಕ್ಷದ ಪಶ್ಚಿಮ ಬಂಗಾಳ, ಕೇರಳ, ಆಂಧ್ರ, ತಮಿಳುನಾಡು ರಾಜ್ಯ ಸಮಿತಿಗಳು ಔಷಧಿ, ವೈದ್ಯರನ್ನು ಕಳುಹಿಸುತ್ತಿರುವಾಗಲೆ, ಮಹಾರಾಷ್ಟ್ರದಿಂದ 80 ವೈದ್ಯರ ತಂಡವನ್ನು ಅಹಮದಾಬಾದಿಗೆ ಕಳುಹಿಸಿದೆ.

ದುರಂತದಲ್ಲಿ ದುರ್ಲಾಭ ಗಿಟ್ಟಿಸುವ ಬಿಜೆಪಿ

ಜನರನ್ನು ರಕ್ಷಿಸಲು ರಾಜ್ಯ-ಕೇಂದ್ರಸರ್ಕಾರಗಳು ಅಸಮರ್ಥವೆಂದು ಒಪ್ಪಿಕೊಳ್ಳುವಿರೋ?

ರಾಷ್ಟ್ರದ ಎಲ್ಲಾ ಪಕ್ಷಗಳು ಹಾಗೂ ಜನತೆ ಒಂದಾಗಿ ಸಂಕಷ್ಟದಲ್ಲಿರುವ ಜನತೆಗೆ ಪರಿಹಾರ ಒದಗಿಸಲು ಮುಂದಾಗಿರುವಾಗ, ಬಿಜೆಪಿ ಪಕ್ಷದ ಮುಖಂಡರಾದ ಜೆ.ಪಿ. ಮಾತುರ್, ಕುಶುಭಾವು ಠಾಕ್ರೆಯವರು ಬಿಜೆಪಿ ಸ್ವತಂತ್ರವಾಗಿ ಪರಿಹಾರ ಕಾರ್ಯ ಪ್ರಾರಂಭಿಸಿ, ಗುಜರಾತಿನಲ್ಲಿ ಕಳೆದ ವರ್ಷದಲ್ಲಿ ನಡೆದ ಪುರಸಭಾ ಚುನಾವಣೆಗಳಲ್ಲಿ ಬಿಜೆಪಿಗಾದ ಹಿನ್ನಡೆಯನ್ನು ಸರಿಪಡಿಸಿಕೊಳ್ಳಲಿದೆ ಎಂಬ ಹೇಳಿಕೆಗಳು ಜನರನ್ನು ದಂಗುಬಡಿಸಿದೆ. ಕೇಂದ್ರ-ರಾಜ್ಯ ಸರ್ಕಾರಗಳೆರಡು ಬಿಜೆಪಿಯ ಕೈಯಲ್ಲಿರುವಾಗ, ಎಲ್ಲಾ ಪಕ್ಷಗಳು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಸಹಾಯ ನೀಡುತ್ತಿರುವಾಗ ಇಂತಹ ಹೇಳಿಕೆಗಳು ಬರುತ್ತಿವೆ. ಒಂದು ವೇಳೆ ಪ್ರಧಾನ ಮಂತ್ರಿಗಳು ಹಾಗೂ ಸರ್ಕಾರ ಪರಿಸ್ಥಿತಿ ನಿಭಾಯಿಸಲು ಅಸಮರ್ಥರಾದರೆ ಸರ್ವಪಕ್ಷಗಳ ಸಭೆಯನ್ನು ತುರ್ತಾಗಿ ಕರೆದು ಬೇರೆ ಕ್ರಮಗಳನ್ನು ಯೋಚಿಸಬೇಕೆಂದು ಸುರ್ಜಿತ್‌ರವರು ಒತ್ತಾಯಿಸಿದ್ದಾರೆ.

ಸಿಪಿಐ(ಎಂ) ತನ್ನ ಎಲ್ಲಾ ಘಟಕಗಳಿಗೆ ಪರಿಹಾರ ಧನ ಹಾಗೂ ಸಂಪನ್ಮೂಲಗಳನ್ನು ಸಂಗ್ರಹಿಸಲು ಕರೆ ನೀಡಿದೆ. ತುರ್ತಿನ ಸಹಾಯ ನೀಡಿದ ವಿವಿಧ ದೇಶಗಳ ಜನತೆಗೆ ಕೃತಜ್ಞತೆಗಳನ್ನು ಸಲ್ಲಿಸಿದೆ.

ಭೂಕಂಪಗಳು ಹೇಗಾಗುತ್ತವೆ? ಭೂಕಂಪ ಯಾವ ಪ್ರದೇಶದಲ್ಲಿ ಯಾವಾಗ ಆಗುತ್ತವೆ ಎಂದು ಅಂದಾಜೂ ಮಾಡಬಹುದೇ? ಭೂಕಂಪನಗಳನ್ನು ತಡೆಯಬಹುದೇ? ಭೂಕಂಪಗಳ ಭೀಕರತೆ ಅಂದಾಜು ಮಾಡುವುದು ಹೇಗೆ? ಇದು ಕಳೆದ ಒಂದು ವಾರದಲ್ಲಿ ಜನರನ್ನು ಕಾಡಿದ ಪ್ರಶ್ನೆ.

ಸಾಗರಗಳು, ಭೂಪ್ರದೇಶ ಈಗ ಇದ್ದ ಹಾಗೆ ಯಾವಾಗಲೂ ಇರಲಿಲ್ಲ. 25 ಕೋಟಿ ವರ್ಷಗಳಿಂದ ಅದರಲ್ಲಿ ತೀವ್ರ ಬದಲಾವಣೆಗಳು ಬಂದಿವೆ. 25 ಕೋಟಿ ವರ್ಷಗಳ ಹಿಂದೆ ಇಂದಿನ ಎಲ್ಲಾ ಭೂಖಂಡಗಳು ಒಂದೇ ಕಡೆ ಇದ್ದು ಅಖಂಡ ಭೂಪ್ರದೇಶ ಅಖಂಡ ಸಾಗರದಿಂದ ಆವೃತ್ತವಾಗಿತ್ತು. ಆಗಿನಿಂದ ಭೂಪ್ರದೇಶ ಏಳು ಖಂಡಗಳಾಗಿ ಒಡೆದು ಚಲಿಸುತ್ತಿದೆ. ಈಗಲೂ ಒಟ್ಟು ಎಂಟು ಭೂಪ್ರದೇಶಗಳು (ಪ್ಲೇಟ್‌ಗಳು) ಚಲಿಸುತ್ತಿವೆ. ಈ ಚಲನೆಯೇ ಪರ್ವತ, ಕಣಿವೆಗಳನ್ನು ನಿರ್ಮಿಸುವುದು. ಭಾರತದ 'ಪ್ಲೇಟ್' ಯುರೇಶ್ಯಾ, ಅರಬ್, ಆಫ್ರಿಕಾ ಪ್ಲೇಟ್‌ಗಳ ಜತೆ ಚಲನೆ, ಘರ್ಷಣೆಯಲ್ಲಿ ತೊಡಗಿರುತ್ತವೆ. ಭೂಕಂಪಗಳು ಸಾಮಾನ್ಯವಾಗಿ ಈ ಪ್ಲೇಟುಗಳು ಸ್ಪಂಧಿಸುವಲ್ಲಿ ಆಗುತ್ತವೆ. ಕಚ್ ಪ್ರದೇಶ ಇಂತಹ ಪ್ಲೇಟ್‌ಗಳು ಸಂಧಿಸುವ ಜಾಗದಲ್ಲಿದೆ. ಸುಮಾರಾಗಿ ಪಾಕಿಸ್ತಾನ ಗಡಿ ಪ್ರದೇಶ, ಹಿಮಾಲಯದ ದಕ್ಷಿಣ ಪ್ರದೇಶ, ಈಶಾನ್ಯ ಭಾರತ ಪ್ಲೇಟ್‌ಗಳು-ಸಂಧಿಸುವ ಪ್ರದೇಶಗಳಲ್ಲಿ ಭೂಕಂಪದ ಅಪಾಯ ಇರುವ ಪ್ರದೇಶಗಳಿವೆ. ಇತರ ಪ್ರದೇಶಗಳು ಭೂಕಂಪ ಆಗುವ ಸಾಧ್ಯತೆ ಇಲ್ಲವೆ ಇಲ್ಲವೆಂದಲ್ಲ. ಇದು ಹೆಚ್ಚಾಗಿ ಭೂಮಿಯ ಹಲವು ಪ್ರಕಾರಗಳಲ್ಲಿ ಆಗುವ ಬದಲಾವಣೆಗಳಿಂದ ಆಗುತ್ತದೆ. ಆದರೆ ಅವುಗಳ ತೀವ್ರತೆ ಕಡಿಮೆ.

ಭೂಕಂಪಗಳು ಭೂಮಿಯ ಪ್ರಾಕೃತಿಕ ವಿಕಾಸದ ಭಾಗವಾದ್ದರಿಂದ ಅದನ್ನು ತಡೆಯಲಾಗುವುದಿಲ್ಲ ಎಂಬುದು ಸ್ಪಷ್ಟ. ಆದರೆ ಭೂಕಂಪದ ಅಪಾಯ, ಭೀಕರತೆಯ ಸಾಧ್ಯತೆಯ ಆಧಾರದ ಮೇಲೆ ಐದು ವಿಭಾಗಗಳನ್ನು ಮಾಡಲಾಗಿದೆ. ಅತ್ಯಂತ ಭೀಕರ ಭೂಕಂಪ ಸಾಧ್ಯತೆ ಇರುವ ಪ್ರದೇಶಗಳನ್ನು ಪ್ರದೇಶ-ಐದು ಎಂದು ಕರೆಯಲಾಗುತ್ತದೆ. ಕಚ್ ಪ್ರದೇಶ ಭೂಕಂಪ ಪ್ರದೇಶ - ಐದು ಎಂದಾಗಿ ವಿಂಗಡಿಸಲಾಗಿದೆ. ಈಗ ಭೂಕಂಪ ಹೇಗಾಗುತ್ತದೆ, ಅದನ್ನು ಅಳೆಯುವುದು ಹೇಗೆ ಎಂದು ಸಾಕಷ್ಟು ಮಾಹಿತಿ ಇದ್ದರೂ ಈ ಪ್ರದೇಶದಲ್ಲಿ ಈದಿನ ಆಗುತ್ತದೆ ಎಂದು ನಿಖರವಾಗಿ ಹೇಳುವಷ್ಟು ವಿಜ್ಞಾನ ತಿಳಿದಿಲ್ಲ. ಮುಂದೊಂದು ದಿನ ಸಾಧ್ಯವಾಗಬಹುದು. ಭೂಮಿಯ ಒಳಗೆ ಆಗುವ ಚಟುವಟಿಕೆ ಸತತವಾಗಿ ಅಧ್ಯಯನ ಮಾಡುವ ಉಪಕರಣಗಳ ವ್ಯವಸ್ಥೆ ಇದಕ್ಕೆ ಅತಿ ಮುಖ್ಯ.

ಭೂಕಂಪಗಳ ಬಗ್ಗೆ ನಿರ್ದಿಷ್ಟ ಭವಿಷ್ಯವಾಗಿ, ತಡೆಯುವುದು ಸಾಧ್ಯವಾಗದು. ಆದರ ಪರಿಣಾಮಗಳನ್ನು ಕನಿಷ್ಟಗೊಳಿಸಬಲ್ಲ ಸಾಧ್ಯತೆ ಇದೆ. ಇದು ಪ್ರಮುಖವಾಗಿ ಮನೆ, ಮನೆಯ ಅಡಿಪಾಯದ ನಿರ್ಮಾಣ, ನಗರ ಯೋಜನೆಯಲ್ಲಿ ಅಳವಡಿಸಲು ಸಾಧ್ಯವಾದದ್ದು. ಭೂಕಂಪದ ತೀವ್ರತೆಗೆ ಅನುಸಾರವಾಗಿ ಆ ಪ್ರದೇಶಗಳಲ್ಲಿ ಮನೆಯ ವಿನ್ಯಾಸ, ನಗರ ಯೋಜನೆಯನ್ನು ಮಾಡಿದರೆ ಭೂಕಂಪದ ಪರಿಣಾಮ ಕನಿಷ್ಟ ಮಾಡುವುದು ಸಾಧ್ಯ.

ರೈತರ ಮೇಲೆ ಯಾಕಿಷ್ಟು ಪ್ರೀತಿ?

ಈಗ ಎಲ್ಲಲ್ಲೂ ರೈತರ ಚಳುವಳಿ. ಅದೂ ರೈತರಿಗೆ ಬವಣೆ ತಂದಿಟ್ಟಿರುವ ಕಾಂಗ್ರೆಸ್ - ಬಿಜೆಪಿ ಮುಂತಾದವರಿಂದಲೂ. ಇವರಿಗ್ಯಾಕೆ ಈಗ ಇಷ್ಟೊಂದು ರೈತರ ಮೇಲೆ ಪ್ರೀತಿ. ಬದಲಾಯಿಯೇ ಇವರ ನೀತಿ?

ಬಸು

ಕರ್ನಾಟಕದ ರೈತ ಮತ್ತೊಮ್ಮೆ ಎಲ್ಲರ ಗಮನ ಸೆಳೆದಿದ್ದಾನೆ. ದಿನನಿತ್ಯ ವೃತ್ತ ಪತ್ರಿಕೆಗಳ ಮುಖಪುಟಗಳಲ್ಲಿ ಕೃಷಿ ಸಮಸ್ಯೆ ಕುರಿತಾದ ವರದಿಯೊಂದು ಪ್ರಕಟಗೊಳ್ಳುತ್ತಲೇ ಇರುತ್ತದೆ. ಆಲೂಗಡ್ಡೆ ಬೆಲೆಯಲ್ಲಿ ಭಾರೀ ಕಡಿತ, ರೈತ ಕಂಗಾಲು, ಆಲೂಗಡ್ಡೆ ಖರೀದಿ ಕೇಂದ್ರದಲ್ಲಿ ಅವ್ಯವಸ್ಥೆ, ಈರುಳ್ಳಿ ಚರಂಡಿಗೆ ಚೆಲ್ಲಿದ ರೈತರು, ಗೋವಿನ ಜೋಳ ಖರೀದಿ ಕೇಂದ್ರ ಪ್ರಾರಂಭಿಸಲು ಆಗ್ರಹ, ತೊಗರಿ ಬೆಳೆ ಬೆಲೆ ಇಳಿಕೆ, ಗಂಗಾವತಿಯಲ್ಲಿ ರೈತರ ಮೇಲೆ ಗೋಲಿಬಾರ್ ಇವೆ ಮುಂತಾದ ಸುದ್ದಿಗಳು ಪತ್ರಿಕೆಗಳ ಪುಟಗಳನ್ನು ತುಂಬುತ್ತಿವೆ. ಆಗಾಗ ಹಾಲಿ ಮತ್ತು ಮಾಜಿ ರೈತ ಧುರೀಣರು ರೈತರ ಸಮಸ್ಯೆ ಕುರಿತು ಪತ್ರಿಕಾ ಹೇಳಿಕೆ ನೀಡಿ ಸಾರ್ವಜನಿಕ ಬದುಕಿನಲ್ಲಿ ತಮ್ಮ ಅಸ್ತಿತ್ವವನ್ನು ರುಜುವಾತು ಪಡಿಸಲು ಹೆಣಗುತ್ತಿದ್ದಾರೆ. ವಿಶೇಷವೆಂದರೆ ಬಂಡವಾಳಶಾಹಿ ಪಕ್ಷಗಳೂ ರೈತರ ಸಮಸ್ಯೆ ಕೈಗೆತ್ತಿಕೊಂಡು ಹೋರಾಟದ ಹಾದಿಯನ್ನು ತುಳಿಯುತ್ತಿರುವುದು ಗಮನಾರ್ಹ ಸಂಗತಿ. ಒಂದನ್ನು ನೋಡಿ ಇನ್ನೊಂದು. ಅದನ್ನು ನೋಡಿ ಮತ್ತೊಂದು ಎನ್ನುವ ಹಾಗೆ ಎಲ್ಲ ಬಂಡವಾಳಶಾಹಿ ಪಕ್ಷಗಳು ಒಂದು ರೀತಿಯಲ್ಲಿ ಹೋರಾಟದ ಸ್ಪರ್ಧೆ ನಡೆಸಿದಂತೆ ಭಾಸವಾಗುತ್ತದೆ.

ಅಕ್ಟೋಬರ್ 21 ರಂದು ಸಂಯುಕ್ತ ಜನತಾದಳ ಧಾರವಾಡದಲ್ಲಿ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯನ್ನು ಖಂಡಿಸಿದೆ. ಹಾಗೂ ಪೆಟ್ರೋಲೀಯಂ ಬೆಲೆ ಏರಿಕೆಯನ್ನು ಇಳಿಸಲು ಆಗ್ರಹಿಸಿದ ವರದಿಯಾಗಿತ್ತು. ಅಂದಿನ ಸಭೆಯಲ್ಲಿ ಆ ಪಕ್ಷದ ರಾಜ್ಯಮಟ್ಟದ ನಾಯಕರೂ ಪಾಲ್ಗೊಂಡು ಮಾತನಾಡಿದರು. ಸಂಯುಕ್ತ ಜನತಾದಳ ಕೇಂದ್ರದ ಎನ್‌ಡಿಎ ಸರ್ಕಾರದಲ್ಲಿ ಪಾಲುದಾರ ಪಕ್ಷ ಎಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಅದರಂತೆ ಅಕ್ಟೋಬರ್ 23 ರಂದು ಜನತಾದಳ (ಜಾತ್ಯಾತೀತ) ಹುಬ್ಬಳ್ಳಿ-ಧಾರವಾಡಗಳಲ್ಲಿ ಭಾರೀ ಟ್ರಾಕ್ಟರ್ ಮೆರವಣಿಗೆ ನಡೆಸಿ, ಗೋವಿನ ಜೋಳ ಖರೀದಿ ಕೇಂದ್ರ ತೆರೆಯಲು ಮತ್ತು ಆಲೂಗಡ್ಡೆ ಖರೀದಿ ಕೇಂದ್ರಗಳನ್ನುಹೆಚ್ಚಿಸಲು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿತು. ಆವರ್ತ ನಿಧಿ ಹೆಚ್ಚಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿತು. ಸಭೆಯಲ್ಲಿ WTO ಒಪ್ಪಂದಗಳನ್ನು, ರಾಜ್ಯ-ಕೇಂದ್ರ ಸರ್ಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿತು.

ರೈತರ ಪರ ಹೋರಾಟ: ಈಗ ಬಂಡವಾಳಶಾಹಿ ಪಕ್ಷಗಳ ಸರದಿ

ಭಾರತೀಯ ಜನತಾಪಕ್ಷವೂ ಕೂಡಾ ರೈತಪರ ಧ್ವನಿ ಎತ್ತುವಲ್ಲಿ ಹಿಂದೆ ಬಿದ್ದಿಲ್ಲ. ಅಲ್ಲಲ್ಲಿ ಧರಣಿ ನಡೆಸಿ ರಾಜ್ಯ ಸರಕಾರದ ರೈತರ ವಿರೋಧಿ ನೀತಿಯನ್ನು ಬಯಲಿಗೆಳೆಯಲು ಪ್ರಯತ್ನಿಸಿತು. ಕಾಂಗ್ರೆಸ್ ನಾಯಕರು ರೈತರ, ಸಮಸ್ಯೆಗೆ ಕೇಂದ್ರ ಸರಕಾರದ ತಪ್ಪು ನೀತಿಯೇ ಕಾರಣ ಎಂದು ಆರೋಪಿಸುತ್ತಾರೆ.

ರೈತರ ಸಮಸ್ಯೆಗೆ ಪರಿಹಾರ ದೊರಕಿಸಲು ಹೋರಾಟಗಳ ಸರಣಿಯೇ ನಡೆಯುತ್ತಿದ್ದರೂ ರಾಜ್ಯ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಈ ಸಮಸ್ಯೆ ಕುರಿತು ತಮ್ಮ ಸ್ಥಿತಪ್ರಜ್ಞೆ ಅಥವಾ ದಿವ್ಯ ನಿರ್ಲಕ್ಷ್ಯ ವ್ಯಕ್ತಪಡಿಸಿವೆಯೆ ಹೊರತು ಅದೊಂದು ಗಂಭೀರ ಸಮಸ್ಯೆ ಎಂದು ಪರಿಗಣಿಸಿದಂತಿಲ್ಲ. ಕೆಲವೆಡೆ ನಡೆಯುತ್ತಿರುವ ಹೋರಾಟಗಳ ನೇತೃತ್ವವನ್ನು ಶ್ರೀಮಂತ ರೈತ ನಾಯಕರೇ ವಹಿಸಿದ್ದಾರೆ.

ರಾಜ್ಯದ ಉದ್ದಗಲಕ್ಕೂ ರಾಜಕೀಯ ಪಕ್ಷಗಳ ನೇತೃತ್ವದಲ್ಲಿ ನಡೆಯುತ್ತಿರುವ ರೈತರಪರ ಹೋರಾಟಗಳಲ್ಲಿ ಕೆಲವು ಗಮನಾರ್ಹ ಸಂಗತಿಗಳಿವೆ.

ಮೊದಲನೆಯದಾಗಿ: ಬಂಡವಾಳಶಾಹಿ ಪಕ್ಷಗಳಂತಹವೂ ರೈತರ ಸಮಸ್ಯೆಗೆ ಸ್ಪಂದಿಸಿ ಹೋರಾಟ ಮಾಡುತ್ತಿರುವುದು ಶ್ಲಾಘನೀಯ, ಸ್ವಾಗತಾರ್ಹ.

ಎರಡನೆಯದಾಗಿ: ಈ ಹೋರಾಟಗಳಲ್ಲಿ ಕಂಡು ಬರುವ ಅಂಶವೆಂದರೆ ಪರಸ್ಪರ ದೋಷಾರೋಪಣೆ. ಬಿಜೆಪಿಯು ರಾಜ್ಯ ಸರ್ಕಾರದ ಮೇಲೆ ಗೂಬೆಕೂಡಿಸಲು ಮಾತ್ರ ಪ್ರಯತ್ನಿಸುತ್ತಿದೆ. ಕೇಂದ್ರ ಸರ್ಕಾರದ, ಆಮದು-ರಫ್ತು ನೀತಿ ಕುರಿತು 'ಜಾಣಕುರುಡು'ನ್ನು ಪ್ರಕಟಿಸುತ್ತಿದೆ. ಕಾಂಗ್ರೆಸ್ ಪ್ರತಿಯಾಗಿ ಬಿಜೆಪಿಯ ಕೇಂದ್ರ, ಸರ್ಕಾರನ್ನು ದೂಷಿಸುತ್ತದೆ. ಜನತಾ ದಳ(ಜಾ) ಕಾಂಗ್ರೆಸ್-ಬಿಜೆಪಿ ಸಮಾನ ತಪ್ಪಿತಸ್ಥರ ಸ್ಥಾನದಲ್ಲಿರಿಸಲು ಪ್ರಯತ್ನಿಸುತ್ತದೆ. ಒಂದು ಅಂಶ ಸ್ಪಷ್ಟ ಎಲ್ಲಾ ಪಕ್ಷಗಳು ಒಂದೇ ವೃಕ್ಷದ ಬೇರೆ ಬೇರೆ ಕೊಂಬೆಗಳು/ ಕವಲುಗಳು ಮಾತ್ರ. ಅಂದರೆ ಅವುಗಳ ಮೂಲಭೂತ ಆರ್ಥಿಕ ಧೋರಣೆಯಲ್ಲಿ ತೀವ್ರ ಭಿನ್ನ ಏನೂ ಇರಲಾರದು.

ಮೂರನೇಯದಾಗಿ: ಇಲ್ಲಿ ಒತ್ತು ಕೊಡುತ್ತಿರುವ ಅಂಶ ಸರಕಾರ ಖರೀದಿ ಕೇಂದ್ರಗಳನ್ನು ತೆರೆಯಲು - ಹೆಚ್ಚಿಸಲು ಎಂಬುದಾಗಿದೆ. ಸರಕಾರದ ಖರೀದಿ ಕೇಂದ್ರಗಳು ರೈತನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಅಲ್ಲ. ಇಲ್ಲಿ ಹೋರಾಟಗಾರರು ರೈತನ ಯಾವುದಾದರೂ ಒಂದು ಸಮಸ್ಯೆ ಎತ್ತಿಕೊಂಡು ಹೋರಾಡಲು ಉದ್ಯುಕ್ತವಾಗಿವೆಯೆ ವಿನಃ ಮೂಲ ಪ್ರಶ್ನೆ ಕೆದಕುವ ಗೋಜಿಗೆ ಹೋಗಲಾರವು.

ಇಲ್ಲಿ ರೈತರು ಪ್ರಶ್ನಿಸಬೇಕಾದ್ದು - **ಬಂಡವಾಳಶಾಹಿ ಪಕ್ಷಗಳು ಕೃಷಿಗೆ ಸಂಬಂಧಿಸಿದ ರಾಷ್ಟ್ರೀಯ ನೀತಿಯನ್ನು ಹೊಂದಿವೆಯೇ? ಅಂಥ ನೀತಿಯನ್ನು ಹೊಂದಿದ್ದಲ್ಲಿ ಜನತೆಯ ಮುಂದೆ ಪ್ರಕಟಿಸಲಿ.** ಒಂದೊಮ್ಮೆ ಒಂದು ರಾಷ್ಟ್ರೀಯ ಪಕ್ಷ ಕೃಷಿ ಧೋರಣೆ ಹೊಂದಿದೆ ಎಂದಾದಲ್ಲಿ ಭೂಮಿ ಹಂಚಿಕೆ, ಕೃಷಿ ಕೂಲಿಕಾರರ ಕೂಲಿ ನಿಗದಿ, ಹುಟ್ಟುವಳಿಗಳ ಬೆಲೆ ನಿಗದಿ, ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು, ಇಂಥ ಅನೇಕ ವಿಷಯಗಳಿಗೆ ಸ್ಪಷ್ಟತೆ ಇರಬೇಕಾಗುತ್ತದೆ. ಕೇವಲ ಪರಿಸ್ಥಿತಿಯ ದುರ್ಲಾಭ ಪಡೆಯಲು ಪ್ರಯತ್ನಿಸುವುದು ರಾಜಕೀಯ ವಂಚನೆಯಾದೀತು. ಆಡಳಿತದಲ್ಲಿರುವ ಪಕ್ಷಗಳು ರೈತರ ಸಮಸ್ಯೆ ಕುರಿತು ಗಂಭೀರ ಆಲೋಚನೆ ಮಾಡದೆ ಹೋರಾಟ ಮಾಡುತ್ತಿರುವುದು ಪರಿಸ್ಥಿತಿಯ ಅನಿವಾರ್ಯತೆಯೋ ಅಥವಾ ಪರಿಸ್ಥಿತಿಯ ವ್ಯಂಗ್ಯವೋ?

ಹೋರಾಟಗಾರರನ್ನು ಜೈಲಿಗೆ ತಳ್ಳಿದರು... ಸರಕುಗಳನ್ನು ಆಮದು ಮಾಡಿಕೊಂಡರು

ಕಳೆದ ಮೂರು ನಾಲ್ಕು ವರ್ಷಗಳಿಂದ ಕೃಷಿ ಪದಾರ್ಥಗಳ ಬೆಲೆ ಕುಸಿಯುತ್ತಿರುವುದು ಹೊಸದಲ್ಲ. ಅದಕ್ಕೆ ಕಾರಣವಾದರೂ ಏನು? ಮುಂದಿನ ವರ್ಷ ಕೃಷಿ ಪದಾರ್ಥಗಳು ಕುಸಿಯುವುದಿಲ್ಲ ಎಂಬ ಗ್ಯಾರಂಟಿ ಏನು? ಸಮಸ್ಯೆಯ ಮೂಲ ಇರುವುದು ಜಾಗತೀಕರಣ ಹಾಗೂ ಉದಾರ ಆಮದು ನೀತಿಗಳಲ್ಲಿ ಎಂಬುದು ಹಿಮಾಲಯದಷ್ಟೇ ಸತ್ಯ. ಭಾರತ 1994 ರಲ್ಲಿ ಗ್ಯಾಟ್ -ಡಂಕಲ್ ಪ್ರಸ್ತಾವನೆಗೆ ಸಹಿ ಹಾಕಿ ಒಪ್ಪಿಗೆ ಸೂಚಿಸಿತು. ಎಡ ಪಕ್ಷಗಳು ಮತ್ತು ಪ್ರಗತಿಪರ ಸಾಮೂಹಿಕ ಸಂಘಟನೆಗಳು ಈ ಘಟನೆಯನ್ನು ವಿರೋಧಿಸಿ ಹೋರಾಟ ಮಾಡಿದವು. ಗ್ಯಾಟ್ ಒಪ್ಪಂದದ ದೂರಗಾಮಿ ಪರಿಣಾಮಗಳ ಬಗ್ಗೆ ಜನತೆಯನ್ನು ಎಚ್ಚರಿಸಲು ತದನಂತರವೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈಗ ಆಡಳಿತದಲ್ಲಿರುವ ಪಕ್ಷಗಳಾಗಲೀ ಮತ್ತು ಇತರ ಬಂಡವಾಳಶಾಹಿ ಪಕ್ಷಗಳಾಗಲಿ ಗ್ಯಾಟ್ ಒಪ್ಪಂದ ಕುರಿತು ದಿವ್ಯ ಮೌನ ವಹಿಸಿದವು. ಅಷ್ಟೇ ಅಲ್ಲ ಉಡಾಫೆ ಮಾತುಗಳನ್ನಾಡಿದವು. ಹೋರಾಟಗಾರರನ್ನು ಜೈಲಿಗೂ ತಳ್ಳಿದವು. ಈಗ ಅದರ ಕರಾಳ ಛಾಯೆ ಪ್ರತಿಯೊಂದು ಕ್ಷೇತ್ರದ ಮೇಲೂ ಬಿದ್ದಿದೆ. ಕ್ರಮೇಣ ಜನತೆಗೆ ಇದು ಮನವರಿಕೆಯಾಗ ಹತ್ತಿದೆ. ಯಾವುದೇ ಸರಕು ದೇಶದೊಳಗೆ ಮುಕ್ತವಾಗಿ ವಿದೇಶದಿಂದ ಬರಬಹುದು. ಭಾರತದಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದ್ದರೂ ಚೀನಾದಿಂದ ರೇಷ್ಮೆ ಆಮದಿಗೆ ಅನುಮತಿಸಲಾಗಿದೆ. ಪಾಮೋಲಿನ್ ಎಣ್ಣೆ ಆಮದು ಮಾಡಿಕೊಳ್ಳುವ ಮೂಲಕ ನಮ್ಮ ನಾಡಿನ ನೆಲಗಡಲೆ(ಶೇಂಗಾ) ಬೆಳೆಗಾರರ ಹೊಟ್ಟೆ ಮೇಲೆ ಹೊಡೆಯಲಾಯಿತು. ಹೀಗೆ ನಮ್ಮ ನೆಲದಲ್ಲಿ ಉತ್ಪತ್ತಿಯಾಗುವ ಪ್ರತಿಯೊಂದು ಹುಟ್ಟುವಳಿಗೆ ವಿದೇಶಿ ಕೃಷಿ ಉತ್ಪನ್ನಗಳು ಪ್ರತಿಸ್ಪರ್ಧೆ ಒಡ್ಡತೊಡಗಿದವು. ಭಾರತೀಯ ಕೃಷಿ ಉತ್ಪನ್ನಗಳ ಬೆಲೆ ಕುಸಿಯಿತು.

ವಿದೇಶ ಕೃಷಿ ಉತ್ಪನ್ನಗಳೊಂದಿಗೆ ಭಾರತೀಯ ಕೃಷಿ ಉತ್ಪನ್ನಗಳು ಸ್ಪರ್ದೆ ಮಾಡಬಾರದು ಏಕೆ? ಭಾರತದ ಕೃಷಿಯ ಮೇಲೆ ಸರಕಾರ ಶೇ 2 ಮಾತ್ರ ರಿಯಾಯಿತಿ ನೀಡುತ್ತದೆ. ಅಂದರೆ ಶೇ 100 ಕ್ಕೆ 98 ರಷ್ಟು ರೈತನೇ ಬೆಳೆಗೆ ಖರ್ಚು ಮಾಡಬೇಕಾಗುತ್ತದೆ. ಹೀಗೆ ಖರ್ಚು ಮಾಡಿದಾಗ ಸಹಜವಾಗಿ ರೈತ ಲಾಭ ಮಾಡಿಕೊಳ್ಳಲು ಹೆಚ್ಚಿನ ಬೆಲೆ ಕೇಳುವುದು ಸಹಜ. ಅದೇ ಸಂದರ್ಭದಲ್ಲಿ ವಿದೇಶಗಳಲ್ಲಿ ಕೃಷಿ ಮೇಲೆ

→



ವೊನ್ನೆ ತನಕ ನಾನು ದೇಶದ ಬೆನ್ನೆಲುಬಾಗಿದೆದ... ಇಂದು ನನ್ನ ಬೆಲೆ ಕುಸಿದಿದೆ!

ಕೈಗೆ ಬಂದ ತುತ್ತು ಬಾಯಿಗೆ.....

ಸರಕಾರ ಗೋವಿನ ಜೋಳ ಖರೀದಿಗೆ ವ್ಯವಸ್ಥೆ ಮಾಡುತ್ತಿದೆ. ಮತ್ತು ಕ್ವಿಂಟಾಲಿಗೆ ರೂ. 450/- ಬೆಂಬಲ ಬೆಲೆ ನಿಗದಿಪಡಿಸಿದೆ. ಇದೊಂದು ರೈತರಿಗೆ ನೆಮ್ಮದಿ ತರುವ ಸಂಗತಿ. ಇಲ್ಲಿ ಗಮನಿಸಬೇಕಾದ ಅಂಶವೊಂದು ಇದೆ. ಮಧ್ಯಮ, ಕೆಳಮಧ್ಯಮ ಚಿಕ್ಕ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸಾವಕಾರಿ ಸಾಲದ ಸುಳಿಗೆ ಸಿಲುಕಿದ್ದಾರೆ. ಗೋವಿನಜೋಳ, ಗೋಧಿ, ಜೋಳ ಬೆಳೆಗಳಿಗೆ ಅಗತ್ಯವಾದ ಬೀಜ, ಗೊಬ್ಬರ ಹಾಗೂ ಅಷ್ಟಿಷ್ಟು ಖರ್ಚಿಗಾಗಿ ಸಾವಕಾರರ ಬಳಿ ಸಾಲ ಪಡೆದಿದ್ದಾರೆ. ಹೀಗೆ ಪಡೆದ ಸಾಲದ ಮೇಲೆ ಶೇ 3, 4, 5 ಬಡ್ಡಿ ಆಚರಣೆಯಾಗುವುದು ನಿಶ್ಚಿತ. ಅದರೊಂದಿಗೆ ಬೀಜ, ಗೊಬ್ಬರಗಳ ಬೆಲೆಯ ಮಾರುಕಟ್ಟೆ ದರಕ್ಕಿಂತ ಹೆಚ್ಚು. ರೈತ ಬೆಳೆ ಕೊಯ್ಲು ಮಾಡಿದ ತಕ್ಷಣ ಸಾವಕಾರರು ಫಸಲನ್ನು ತಮಗೆ ಮಾರಲು ಒತ್ತಾಯಿಸುತ್ತಾರೆ. ಹೀಗೆ ಖರೀದಿಸುವಾಗ ರೂ. 350/- ದರವನ್ನು ನಿಗದಿ ಪಡಿಸುತ್ತಾರೆ. ಬೆಂಬಲ ಬೆಲೆ ಮೇಲಿನ ರೈತರಿಗೆ ಮರೀಚಿಕೆಯೇ ಸರಿ. ರೈತರಿಂದ ಕಡಿಮೆ ಬೆಲೆಗೆ ಕೊಂಡು ಸಾವಕಾರರು ತಮ್ಮ ಸಾಲ ತೀರಿಸಿಕೊಂಡು, ಅದೇ ವಸ್ತುವನ್ನು ಸರಕಾರಿ ಖರೀದಿ ಕೇಂದ್ರಕ್ಕೆ ಬೆಂಬಲ ಬೆಲೆಯಲ್ಲಿ ಮಾರಾಟಮಾಡುತ್ತಾರೆ. ಹೀಗೆ ರೈತ ಬೆಂಬಲ ಬೆಲೆಯ ಅವಕಾಶದಿಂದ ವಂಚಿತ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.



ಬೆಂಬಲ ಬೆಲೆಯ ಗೋವಿನ ಜೋಳ ಖರೀದಿ ಕೇಂದ್ರದ ಅವ್ಯವಸ್ಥೆ - ಒಂದು ಸ್ಯಾಂಪಲ್

ಒಂದು ತಾಲೂಕಿಗೆ ಒಂದು ಖರೀದಿ ಕೇಂದ್ರ ತೆರೆಯಲಾಗಿದೆ. ದಿನಕ್ಕೆ 200-300 ಕ್ವಿಂಟಾಲ್ ಖರೀದಿ ನಡೆಯುತ್ತದೆ. ರೈತರು ಯಾವ ದಿನಾಂಕದಂದು ಖರೀದಿ ಕೇಂದ್ರಕ್ಕೆ ತಮ್ಮ ಮಾಲು ತರಬೇಕೆಂಬುದನ್ನು ವ್ಯವಸ್ಥಾಪಕರು ದಿನಾಂಕವನ್ನು ನೀಡುತ್ತಾರೆ. ಕೆಲವು ರೈತರಿಗೆ ಜೂನ್ ತಿಂಗಳಲ್ಲಿ ದಿನಾಂಕ ನೀಡಲಾಗಿದೆ. ಅಂದರೆ 6 ತಿಂಗಳ ನಂತರ ಖಾಸಗಿ ವ್ಯಾಪಾರಸ್ಥನ ಬಳಿಗೆ ಹೋಗು ಎಂದು ಪರ್ಯಾಯವಾಗಿ ಹೇಳಿದಂತಲ್ಲವೇ?

ಶೇ 70 ರಿಂದ 72 ಸಬ್ಸಿಡಿ ಇದೆ. ಅಂದರೆ ಅಲ್ಲಿಯ ರೈತ ಕಡಿಮೆ ಖರ್ಚು ಮಾಡುತ್ತಾನೆ. ಅವನು ಕಡಿಮೆ ದರದಲ್ಲಿ ಮಾರಿದರೂ ಲಾಭವಾಗುತ್ತದೆ. ವಿದೇಶದಿಂದ ಮುಕ್ತ ಮಾರುಕಟ್ಟೆಯಲ್ಲಿ ಬಂದ ಕೃಷಿ ಪದಾರ್ಥಗಳ ಬೆಲೆ ಕಡಿಮೆ ಇದ್ದಾಗ ಭಾರತದ ಹುಟ್ಟುವಳಿಗಳನ್ನು ಕೊಳ್ಳುವವರಾರು? ಇದು ಸಮಸ್ಯೆಯ ಮೂಲ. ಉದಾರ ಆರ್ಥಿಕ ನೀತಿಯನ್ನು ತತ್ವಶಃ ಅನುಸರಿಸುತ್ತದೆ. ಅಂದರೆ ಅವೆರಡು ಸಮಾನ ಆರ್ಥಿಕ ಧೋರಣೆಯನ್ನು ಹೊಂದಿವೆ ಎಂಬುದು ಸ್ಪಷ್ಟ. ವಸ್ತುಸ್ಥಿತಿ ಹೀಗಿರುವಾಗ ಅವೆರಡು ಪರಸ್ಪರ ದೋಷಾರೋಪಣೆ ಮಾಡುವರು ಜನತೆಯನ್ನು ಹಾದಿ ತಪ್ಪಿಸುವ ಕ್ರಮವಾಗುವುದಿಲ್ಲವೇ? ಇಂತಹ ಪರಿಸ್ಥಿತಿ, ದೊಂಬರಾಟಗಳ ಎದುರು ಸಮಾನ ಮನೋಭಾವದ ಸಂಘಟನೆಗಳು ಐಕ್ಯತೆಯಿಂದ



ಕೋಸು ಬೆಳೆದು ಕೊನೆಯುಸಿರೆಳೆದ ಸುರದೇನಪುರದ ರೈತ ಅಶ್ವತ್ಥಾಚಾರಿ

ರೂಪಿಸಿ ಅನುಷ್ಠಾನಗೊಳಿಸಿದ್ದು ಕಾಂಗ್ರೆಸ್ ಸರಕಾರ ಅದೇ ನೀತಿಯನ್ನು ಇಂದಿನ ಎನ್‌ಡಿಎ ಸರಕಾರ ಹೋರಾಡಬೇಕು. ಅಂತಹ ಪ್ರಯತ್ನಗಳು ಬೆಳೆದು ಬರುತ್ತಿರುವುದು ಸ್ವಾಗತಾರ್ಹ.

ದೇಶದ ಕೃಷಿ ವಲಯವನ್ನು ರಕ್ಷಿಸಲು ಕೇಂದ್ರ ರಾಜ್ಯ ಸರ್ಕಾರಗಳು ದೃಢ ಸಂಕಲ್ಪ ಮಾಡಬೇಕು. ಕೆಳಗಿನ ಕೆಲವು ಕ್ರಮಗಳನ್ನು ತಕ್ಷಣ ಸರಕಾರ ಕೈಗೊಳ್ಳುವುದು ಅಗತ್ಯ.

1. ದೇಶದ ಆಮದು ನೀತಿ ಬದಲಾಗಬೇಕು. ಮುಕ್ತ ಆಮದು ನೀತಿಗೆ ಕಡಿವಾಣ ಹಾಕಬೇಕು.
2. ಅಗತ್ಯ ಹಾಗೂ ದೇಶದಲ್ಲಿ ಉತ್ಪಾದನೆಯಾಗದೆ ಅಥವಾ ಅಭಾವವಿರುವ ಕೃಷಿ ಪದಾರ್ಥಗಳನ್ನು ಮಾತ್ರ ಆಮದು ಮಾಡಿಕೊಳ್ಳಬೇಕು.
3 ಕೃಷಿ ಮೇಲೆ ಇನ್ನಷ್ಟು ಸಬ್ಸಿಡಿ ನೀಡಬೇಕು.
4. ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು, ಆಂತರಿಕ ಮಾರುಕಟ್ಟೆ ವಿಸ್ತರಿಸಬೇಕು.
5. ನಮ್ಮ ದೇಶದ ಕೃಷಿ ಉತ್ಪಾದನೆಗಳನ್ನು ಹೆಚ್ಚಿಗೆ ರಫ್ತು ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ○

ಒಂದು ಕಹಿ ಅನುಭವ

ಕಳೆದ ವರ್ಷ ಉಳ್ಳಾಗಡ್ಡಿ ಬೆಲೆ ತೀವ್ರ ಕುಸಿಯಿತು. ಕೆಲವು ರಾಜಕೀಯ ಧುರೀಣರು ದಿಢೀರಾಗಿ ರೈತ ನಾಯಕರಾಗಿ ವೇಷ ಧರಿಸಿಕೊಂಡು ಹುಬ್ಬಳ್ಳಿ ಎಪಿಎಂಸಿಯಲ್ಲಿ ಮಾಡಿದ ಹುಸಿ ಹೋರಾಟದ ಫಲವಾಗಿ ಉಳ್ಳಾಗಡ್ಡಿ ಬೆಳೆದ ರೈತರು ತೀರಾ ತೊಂದರೆ ಅನುಭವಿಸಿದರು. ತಂದ ಮಾಲನ್ನು ಹಿಂದಕ್ಕೆ ಒಯ್ಯುವುದಾದರೂ ಹೇಗೆ? ಕೈಗೆ ಸಿಕ್ಕ ಬೆಲೆಗೆ ಮಾರಿದರು. ಆದರೆ ಹೋರಾಟದ ಮುಂಚೂಣಿಯಲ್ಲಿದ್ದ ಕೆಲವು ಶ್ರೀಮಂತ ರೈತರು ಪ್ರಯೋಜನ ಪಡೆದರು. ಮಾತನ್ನು ಅಕ್ಷರಶಃ ಕೃತಿಗಳಿಸಿದ್ದನ್ನು ರೈತರು ವ್ಯಂಗ್ಯ ಮಾಡುತ್ತಾರೆ.

ವಿದ್ಯಾರ್ಥಿ ಯುವಜನರೇ, ರೈತರ ಹೆಗಲಿಗೆ ಹೆಗಲು ಕೊಡೋಣ

ರೈತ ಹೋರಾಟದ ರಣರಂಗಕ್ಕೆ ಧುಮುಕಿದ್ದಾನೆ. ಇದನ್ನು ಬಿಟ್ಟು ಅವನಿಗೆ ಬೇರೆ ಗತಿಯೇ ಇಲ್ಲ. ಕ್ರಿಮಿನಾಶಕ ಕುಡಿದು ಸಾಯುವುದು, ನೇಣಿಗೆ ಕೊರಳೊಡ್ಡುವುದು ದೇಶಕ್ಕೆ ಅನ್ನ ನೀಡುವ ರೈತನ ಘನತೆಗೆ ತಕ್ಕ ಕೆಲಸವಲ್ಲ. ಬದು ಅಗೆದು, ಒಡ್ಡು ಕಟ್ಟಿ ಬೇಕೆಂದ ದಿಕ್ಕಿಗೆ ನೀರು ತಿರುಗಿಸುವವನು ಅವನು. ಬಾರೆ-ಗುಡ್ಡ ಅಗೆದು ಹೊಲ-ಗದ್ದೆ ಮಾಡಿದವನು, ಜೋಡಿ ಎತ್ತು, ನೇಗಿಲು ಹೊತ್ತು ಉತ್ತು-ಬಿತ್ತುವವನು. ಶ್ರಮಿಕ. ಮೈ ಮುರಿದು ದುಡಿಯುವವನು. ಜೀವವನ್ನೇ ಒತ್ತೆ ಇಟ್ಟು ಬೀಜ ನೆಟ್ಟು ಬೆಳೆ ಬೆಳೆದಾಗ ಕೈಗೆ ಬಂದ ತುತ್ತು ಬಾಯಿಗಿಲ್ಲದಂತೆ ಯಾರೋ ಕಿತ್ತುಕೊಂಡರೆ-ತಿನ್ನುವ ಅನ್ನಕ್ಕೆ ಮಣ್ಣು ಹಾಕಿದರೆ, ಸಾಲ ಸೋಲ ಮಾಡಿದ ರೈತರು ಕೆಲವರು ವಿಷ ಕುಡಿದಿರಬಹುದು. ನೇಣು ಹಾಕಿಕೊಂಡಿರಬಹುದು. ಬಗ್ಗು ಎಂದರೆ ಎಷ್ಟು ಬಗ್ಗುವುದು. ನೆಲ ಮಟ್ಟುವವರೆಗೆ. ನೆಲ ತೋಡಿ ಹೆಚ್ಚು, ರೈತನ ಅಂತರಂಗದ ಕಿಚ್ಚು ಹೆಚ್ಚಾದರೆ ಸುತ್ತೆಲ್ಲಾ ಹಬ್ಬುತ್ತದೆ ಕಾಡ್ಗಿಚ್ಚಿನಂತೆ.

ನಮ್ಮ ದೇಶದಲ್ಲಿ ರೈತರು-ಕೃಷಿ ನಾಶವಾಗುವುದು ಎಂದರೆ ಇಡೀ ದೇಶವೇ ಸರ್ವನಾಶವಾಗುವುದು ಎಂದು. ರೈತರು ಕೂಲಿಕಾರರು ಕಟ್ಟುವ ತೆರಿಗೆಯ ಹಣದಲ್ಲಿ ಬದುಕುತ್ತಿರುವ, ರೈತ-ಕಾರ್ಮಿಕರ ಬೆವರಿನ ಋಣದಲ್ಲಿ ಬದುಕುತ್ತಿರುವ ಈ ಸಮಾಜ, ರೈತ ಇಂತಹ ಸ್ಥಿತಿಯಲ್ಲಿರುವಾಗ ಏನು ಮಾಡುತ್ತದೆ ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ. ಈ ದೇಶದ ವಿದ್ಯಾರ್ಥಿ-ಯುವಜನ ಇಂತಹ ಸ್ಥಿತಿಯಲ್ಲಿ ಕೈಕಟ್ಟಿ ಕೂರುವುದಿಲ್ಲ. ಈಗಾಗಲೇ ಶಿಕ್ಷಣದ ಹಕ್ಕಿನ ರಕ್ಷಣೆಗಾಗಿ.... ಉದ್ಯೋಗಕ್ಕಾಗಿ..... ವಿದ್ಯಾರ್ಥಿಗಳು-ನಿರುದ್ಯೋಗಿ ಯುವಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಆದರೆ.... ರೈತರಿಗೆ ಬದುಕಿಲ್ಲ ಎಂದಾದರೆ ವಿದ್ಯಾರ್ಥಿ ಯುವಜನರಿಗೆಲ್ಲಿಯ ಭವಿಷ್ಯ. ಇಡೀ ಜಗತ್ತಿನ ಕೃಷಿಯ ಮೇಲೆ ಅಕ್ಟೋಪಸ್ ಹಿಡಿತ ಚಾಚುತ್ತಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳನ್ನೆದುರಿಸುವ ಸವಾಲು

ಜೈಲು ತುಂಬಲು ಸಿದ್ಧ - ವಿದ್ಯಾರ್ಥಿ ಯುವಜನರ ಘೋಷಣೆ

ಬಗ್ಗಲಾದೀತೆ? ರೈತ ಈಗ ಮೈ ಕೊಡವಿ ಮೇಲೇಳುತ್ತಿದ್ದಾನೆ. ಕರ್ನಾಟಕದ ಇತಿಹಾಸದಲ್ಲಿ ನವಲಗುಂದ-ನರಗುಂದ ರೈತ ಬಂಡಾಯ ಎಬ್ಬಿಸಿದ ಅಲೆ, ತಂದ ಪ್ರಚಂಡ ಬದಲಾವಣೆ, ಮತ್ತೊಮ್ಮೆ ಇಂತ ಹೋರಾಟದ ಅಲೆ ರಾಜ್ಯಮಟ್ಟಕ್ಕೆ ಅಲ್ಲ ಇಡೀ ದೇಶದಲ್ಲೇ ಎದ್ದೇಳಬಹುದು. ಹೋರಾಟದ ರಂಗಸಜ್ಜಿಕೆ ಸಿದ್ಧವಾಗುತ್ತಿದೆ.

ಜಾಗತೀಕರಣ-ಉದಾರೀಕರಣ-ಖಾಸಗೀಕರಣ ರೈತರ ಬದುಕಿನ ಹಕ್ಕನ್ನೇ ಕಸಿದುಕೊಳ್ಳುತ್ತಿದೆ. ಅಡಿಕೆಯಿಂದ ಆರಂಭಿಸಿ ಹಾಲಿನ ಪುಡಿಯವರೆಗೆ ಎಲ್ಲವೂ ವಿದೇಶದಿಂದ ಆಮದು. ಅಕ್ಕಿ, ಗೋಧಿ, ಎಣ್ಣೆ, ಸಕ್ಕರೆ, ಹಣ್ಣು ತರಕಾರಿ, ಸಗಣಿ ಆಮದು ಪ್ರವಾಹದ ಮೇಲೆ ಮಿತಿಯೇ ಇಲ್ಲ. ತಮ್ಮ ತಮ್ಮ ದೇಶಗಳಲ್ಲಿ ಅಜೀರ್ಣವಾಗುವಷ್ಟು ಸಬ್ಸಿಡಿ ಪಡೆದು ಕೊಬ್ಬಿರುವ ವಿದೇಶಿ ರಫ್ತುದಾರರು ಭಾರತದಲ್ಲಿ ಹೊಟ್ಟೆ ಬಟ್ಟೆ ಕಟ್ಟಿ ನಾಲ್ಕು ಕಾಳು ಬೆಳೆಯುವ ರೈತನ ಗೋಣು ಮುರಿಯಲು ಬರುತ್ತಿದ್ದಾರೆ, ಬಂದಿದ್ದಾರೆ. ನಮ್ಮ ರೈತರ ಬೆಳೆಗೆ ಬೆಲೆ ಕುಸಿದಿದೆ. ಸಾಗಾಣಿಕೆ ವೆಚ್ಚವೂ ದಕ್ಕಲಾರದೆ ಬೆಳೆದದನ್ನು ರಸ್ತೆಗೆ ಸುರಿಯುವ ಪರಿಸ್ಥಿತಿ. ಕಳಪೆ ರಸಗೊಬ್ಬರ, ಕಳಪೆ ಬೀಜ, ಕಳಪೆ ಕ್ರಿಮಿನಾಶಕ ಇದು ಕೊಡುವುದು ಸಾಲದೆಂದು, ನಮ್ಮ ರೈತ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಪ್ರಯೋಗಗಳಿಗೆ 'ಪ್ರಯೋಗ ಪಶು'ವು ಆಗಿದ್ದಾನೆ.

ಇತ್ತ ನಮ್ಮ ಘನ ಸರ್ಕಾರಗಳು ಕೊಡುವ ವಿದ್ಯುತ್ ದರ ಏರಿಕೆ, ಆಘಾತ, ಸಾಲದ ವಿದ್ಯುತ್, ನೀರಾವರಿ ಖಾಸಗೀಕರಣದ ಕಾಟ, ಮೂತ್ರ ಪಿಂಡ ಮಾರಿಕೊಂಡರೂ ಸಾಲಮುಕ್ತನಾಗದ ಅವಸ್ಥೆ. ಕವಿಗಳ ನೂರು ಕವನಗಳ ವಸ್ತುವಾದ ನಮ್ಮ ರೈತ, ಭಾಷಣಗಳ ಕ್ಲೀಷೆ ಮಾತುಗಳಿಗೆ ತುತ್ತಾಗಿರುವ ನಮ್ಮ ರೈತನಿಗೆ ನಮ್ಮ ಸರ್ಕಾರಗಳು ಮಾಡಿದ್ದರಲ್ಲಿ ಅಂತಹ ಮಹತ್ವದ್ದೇನು ಇಲ್ಲ. ರೈತನಿಂದ ಕಿತ್ತುಕೊಂಡದ್ದೇ

ಗ್ಯಾಟ್-ಡಂಕಲ್‌ಗಳಂತಹ ರೈತ ವಿರೋಧಿ ಒಪ್ಪಂದಗಳು, ವಿಶ್ವವಾಣಿಜ್ಯ ಸಂಸ್ಥೆ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಮುಂತಾದ ಸಾಲ ನೀಡುವ ದಣಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಕೇಂದ್ರ ರಾಜ್ಯ ಸರಕಾರಗಳನ್ನು ಎದುರಿಸಲು ಕೇವಲ ರೈತ ಮಾತ್ರವಲ್ಲ ದೇಶದ ಎಲ್ಲಾ ದೇಶ ಪ್ರೇಮಿ ಜನವಿಭಾಗಗಳು ಮುನ್ನುಗ್ಗಬೇಕಿದೆ.

ವಿದ್ಯಾರ್ಥಿ-ಯುವಜನರೂ ಈ ಸಮಾಜದ ಅವಿಭಾಜ್ಯ ಸಂವೇದನಾ ಶೀಲ ವಿಭಾಗ. ಇಡೀ ಸಮಾಜದ ಎಲ್ಲಾ ಆಗು-ಹೋಗುಗಳು ಪರಿಣಾಮಗಳು... ಈ ವಿಭಾಗಗಳನ್ನು ತಟ್ಟದೆ ಇರಲು ಸಾಧ್ಯವಿಲ್ಲ. ಇದೇ ಹಿನ್ನೆಲೆ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಎಐಎಸ್‌ಎಫ್-ವಿದ್ಯಾರ್ಥಿ ಜನತಾದಳ(ಎಸ್), ಯುವ ಜನತಾದಳ(ಎಸ್) ಸಂಘಟನೆಗಳು ಹೋರಾಟ ನಿರತ ರೈತರ ಹೆಗಲಿಗೆ ಹೆಗಲು ಕೊಡಲು ತೀರ್ಮಾನಿಸಿದ್ದಾರೆ. ಫೆಬ್ರವರಿ 5,6 ರಂದು ರಾಜ್ಯಾದ್ಯಂತ ನಡೆಯುವ ರಸ್ತೆ ತಡೆ, ರೈಲು ತಡೆ, ಪ್ರತಿಭಟನೆಗಳಲ್ಲಿ, ಫೆಬ್ರವರಿ 7 ರ ಜೈಲ್ ಭರೋ ಹೋರಾಟದಲ್ಲಿ ಸಹಸ್ರಾರು ವಿದ್ಯಾರ್ಥಿ-ಯುವಜನರನ್ನು ಅಣಿ ನೆರೆಸಲು ತೀರ್ಮಾನಿಸಲಾಗಿದೆ. ಸಿದ್ಧತೆಗಳು ಆರಂಭವಾಗಿವೆ. ಕೇವಲ ಫೆಬ್ರವರಿ ಹೋರಾಟಕ್ಕಲ್ಲ... ಅಂತಿಮ ಹೋರಾಟ-ವಿಜಯದವರೆಗೆ ಈ ಮೈತ್ರಿ ಅಗತ್ಯವಾಗಿ ಮುಂದುವರಿಯಬೇಕಾಗಿದೆ.

ಆರ್.ರಾಮಕೃಷ್ಣ

ಹಸಿವಿನ ಸವಾಲು ನಮ್ಮ ಮುಂದಿದೆ

ಪುಟ 5 ರಿಂದ

ತಮ್ಮ ವಚನವನ್ನು ಪಾಲಿಸಿಲ್ಲ. ಉದಾಹರಣೆಗೆ ಜಪಾನ್ ವಿದೇಶಿ ಅಕ್ಕಿಗೆ 2000 ಶೇಕಡಾ ಸುಂಕ ವಿಧಿಸುತ್ತದೆ. ಇನ್ನೊಂದು ಗೊಂದಲಕಾರಿ ಅಂಶವೆಂದರೆ ವಿಭಿನ್ನ ಬೆಳೆಗಳಿಗೆ ವಿಭಿನ್ನ ಸುಂಕದರಗಳು. ಮರು ಮಾತುಕತೆಗಳಲ್ಲಿ ಈ ಎಲ್ಲಾ ಪ್ರಶ್ನೆಗಳನ್ನು ಬಗೆಹರಿಸಬೇಕಾಗಿದೆ.

ಭಾರತಕ್ಕೆ ಈಗ ಮರು ಮಾತುಕತೆಗಳಲ್ಲಿ ಪ್ರಬಲ ಸ್ಥಾನಮಾನ ಇದೆಯೇ?

ಇದೆಯೆನಿಸುತ್ತದೆ. ನಾವು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಂದಿಗೆ ಒಂದು ಮೈತ್ರಿಕೂಟ ಏರ್ಪಡಿಸಿಕೊಳ್ಳಬೇಕು. ದೇಶದೊಳಗೆ, ನೆರೆ ದೇಶಗಳೊಂದಿಗೆ ಹಾಗೂ ಅಂತರ್‌ರಾಷ್ಟ್ರೀಯ ಮಾದ್ರಿ ಒಂದು ವ್ಯಾಪಾರ ನೀತಿಯು ಅಗತ್ಯವಿದೆ. ಸಮಗ್ರ ಅಗತ್ಯವಾಗಿ ಬೇಕಾಗಿರುವುದು ಮುಂದಿನ 10-15 ವರ್ಷಗಳಿಗೊಂದು ದೀರ್ಘಾವಧಿ ಧೋರಣೆ. ಜಾಗತಿಕವಾಗಿ ನಾವು ಸ್ಪರ್ಧಿಸಲು ಸಾಧ್ಯ, ಆ ಸಾಮರ್ಥ್ಯ ನಮಗಿದೆ. ಸಣ್ಣ ಗದ್ದೆ ತೀವ್ರ ಕೃಷಿಯಲ್ಲಿ ಒಂದು ಮುಖ್ಯ ಅಂಶ. ಸಣ್ಣ ರೈತ ಮತ್ತು ಸಣ್ಣ ಗದ್ದೆ ಒಂದೇ ಅಲ್ಲ. ಸಣ್ಣ ರೈತ ಎನ್ನುವಾಗ ಬದುಕಿಗಾಗಿ ಶ್ರಮಿಸುವ ಒಂದು ಬಡಕುಟುಂಬದ ಬಗ್ಗೆ ಹೇಳಿದಂತಾಗುತ್ತದೆ. ಸಣ್ಣ ರೈತರ ಸಮಸ್ಯೆಗಳನ್ನು ನೀಗಿಸಿ ಸಣ್ಣ ಗದ್ದೆಯ ಸಾಮರ್ಥ್ಯವನ್ನು ಗರಿಷ್ಟಗೊಳಿಸಬಹುದು. ಜಾಗತಿಕವಾಗಿ ಸ್ಪರ್ಧಿಸಲು ಸಾಧ್ಯವಾಗಬೇಕಾದರೆ ಮೂಲರಚನೆಯಲ್ಲಿ, ಕಟಾವಿನ ನಂತರದ ತಂತ್ರಜ್ಞಾನದಲ್ಲಿ ಇತ್ಯಾದಿಗಳಲ್ಲಿ ಹಣ ಹೂಡಿಕೆ ಆಗಬೇಕು. ಸ್ಥಳೀಯ ಬಳಕೆಯಲ್ಲೂ ಗುಣಮಟ್ಟಕ್ಕೆ ಒತ್ತು ನೀಡಬೇಕು. ಇದೊಂದು ಸ್ವಭಾವದ ಸಹಜ ಅಂಶವಾಗಬೇಕು.

ಇದಕ್ಕೆ ಸಮಯಬೇಕು. ಆದ್ದರಿಂದ ನಮಗೆ ಬೇರೆ ದೇಶಗಳಿಂದ ಉತ್ಪನ್ನಗಳನ್ನು ತಂದು ಇಲ್ಲಿ ರಾಶಿ ಹಾಕುವುದರ ಎದುರು ಮುಂದಿನ 10-15 ವರ್ಷಗಳ ಕಾಲ ರಕ್ಷಣೆ ಬೇಕು. ಬಡತನವನ್ನು ನಿವಾರಿಸಬೇಕೆಂಬುದು ನಿಜ. ಆದರೆ ನಾವೊಂದು ಬಡ ದೇಶ, ನಮಗೆ ರಕ್ಷಣೆ ಬೇಕು ಎಂದು ಹೇಳಲು ನಾಚಬೇಕಾಗಿಲ್ಲ. ಹೀಗೆ ಡಬ್ಲ್ಯುಟಿಓ ಒಪ್ಪಂದದಲ್ಲಿ ಒಂದು 'ಜೀವನಾಧಾರ ಪೆಟ್ಟಿಗೆ' (ಅಂದರೆ ಜನಗಳ ಬದುಕನ್ನು ತಟ್ಟುವಂತಹ ಆಮದುಗಳ ಮೇಲೆ ಮಿತಿ ಹಾಕುವ ಆಯ್ಕೆ ಒದಗಿಸುವ ವ್ಯವಸ್ಥೆ) ನಮಗೆ ಬೇಕಾಗಿದೆ. ನಮಗೆ ಆಹಾರ ಭದ್ರತೆಯಿರಬಹುದು. ಆದರೆ ಜೀವನಾಧಾರದ ಭದ್ರತೆ ಇದೆ ಎಂದು ಅರ್ಥವಲ್ಲ.

. ಡಬ್ಲ್ಯುಟಿಓ ನಿಯಮಗಳಲ್ಲಿ ವಿವಿಧ ಸಸ್ಯಗಳ ರಕ್ಷಣೆಗೆ ಅನನ್ಯ(suigeneris) ಶಾಸನವನ್ನು ಭಾರತ ತರಬೇಕಾಗುತ್ತದೆ. ಇದರಲ್ಲಿ ನಮ್ಮ ಕೃಷಿ ವಲಯದ ಒಳಿತಿಗೆ ಕೈಗೊಳ್ಳಬೇಕಾದ ಕನಿಷ್ಠ ರಕ್ಷಣೆಗಳೇನು?

ನಮ್ಮ ಸರಕಾರ ಬೆಳೆಸಿರುವ 'ಅನನ್ಯ' ವ್ಯವಸ್ಥೆ ಈಗ ಸಂಸತ್ತಿನ ಮುಂದಿದೆ. ಅದು ರೈತರ ಮೂರು ಪಾತ್ರಗಳಿಗೆ ಹಕ್ಕು ನೀಡಿದೆ - ಬೇಸಾಯಗಾರರಾಗಿ, ತಳಿ ಉತ್ಪಾದಕರಾಗಿ ಹಾಗೂ ತಳಿ ಸಾಮಗ್ರಿಗಳ ಸಂರಕ್ಷಕನಾಗಿ, ಬೇಸಾಯಗಾರನಾಗಿ ಆತ ಬೀಜಗಳನ್ನು ಮುಂದಿನ ಬೇಸಾಯಕ್ಕೆ ಉಳಿಸಿಕೊಳ್ಳಬಹುದು. ಬ್ರಾಂಡ್ ಹೆಸರು ಬಳಸದೆ ಒಂದು ಮಿತಿಯೊಳಗೆ ಮಾರಲೂ ಬಹುದು. ಹೊಸ ತಳಿ ಉತ್ಪಾದಿಸಿದಾಗ ಅದಕ್ಕೆ 'ಅನನ್ಯ' ರಕ್ಷಣೆಯಿದೆ. ಸಂರಕ್ಷಕನಾಗಿ ಅಂದರೆ ಔಷಧಿ ಇತ್ಯಾದಿಗಳಲ್ಲಿ ಫಸಲಿಗೆ ಮೌಲ್ಯ ಸೇರಿಸಿದರೆ ಅದಕ್ಕೆ ನ್ಯಾಷನಲ್ ಜೀನ್ ಫಂಡ್‌ನಿಂದ ಮಾನ್ಯತೆ ದೊರೆಯುತ್ತದೆ.

ಟ್ರಿಪ್ಸ್ (TIPS) ನ ಮರು ಮಾತುಕತೆಗಳಲ್ಲಿ 'ಜೈವಿಕ ವೈವಿಧ್ಯತೆಯ ಸಮಾವೇಶ' (CBD) ಅಂಗೀಕರಿಸಿದ ನ್ಯಾಯಸಮ್ಮತತೆ ಮತ್ತು ನೈತಿಕತೆಯನ್ನು ಒಳಗೊಳ್ಳಬೇಕು ಎಂದು ನಾವು ಒತ್ತಾಯಿಸಬೇಕು. CBD ಎಂಬುದು ಡಬ್ಲ್ಯುಟಿಓ ಗಿಂತ ಎರಡು ವರ್ಷ ಮೊದಲು ಬಂತು. ಡಬ್ಲ್ಯುಟಿಓ ಮಾತುಕತೆಗಳಿಗೆ ಹೋದ ವಾಣಿಜ್ಯ ಇಲಾಖೆಯ ಮಂದಿಗೆ ಈ ಬಗ್ಗೆ ತಿಳಿದಿರಲಿಲ್ಲ. ಏಕೆಂದರೆ ಈ ಸಮಾವೇಶಕ್ಕೆ ಹೋದವರು ಪರಿಸರ ಇಲಾಖೆಯವರು. CBD ಯ ನಿಯಮಗಳು ಕೂಡಾ ಕಾನೂನುಬದ್ಧವಾಗಿವೆ. ಆದರೆ ಇವು ಡಬ್ಲ್ಯುಟಿಓ ಒಪ್ಪಂದದಲ್ಲಿ ಪ್ರತಿಫಲನಗೊಳ್ಳಲಿಲ್ಲ. ಆದ್ದರಿಂದ ಟ್ರಿಪ್ಸ್ ಕುರಿತ ಮರು-ಮಾತುಕತೆಗಳಲ್ಲಿ ನಾವು ಕೈಗಾರೀಕೃತ ದೇಶಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳು CBD ಮತ್ತು WTO ಒಪ್ಪಂದಗಳಲ್ಲಿ ನೀಡಿರುವ ವಚನಗಳನ್ನು ಸಮನ್ವಯಗೊಳಿಸುವಂತೆ ನೋಡಿಕೊಳ್ಳಬೇಕು.

ಕೇಬಲ್ TV ಯ ದುಷ್ಟಜಾಲ

ಕೇಬಲ್ TV ಚಿನ್ನದ ಮೊಟ್ಟೆಗಳನ್ನು ಇಡುವ ಭಾರೀ ವ್ಯವಹಾರ. ಹೀಗಾಗಿ ದಂಧೆಕೋರರಿಗೆ ಕೋಟಿ ಕೋಟಿ ಹಣ ದೋಚುವ ಆತುರ. ದೇಶದ 3 ಕೋಟಿ ಮನೆಗಳನ್ನು ಕೇಬಲ್ ಜಾಲ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಈಗಾಗಲೇ ಒಂದು ಕೋಟಿ ಮನೆಗಳ ಮೇಲೆ ನಿಯಂತ್ರಣ ಸಾಧಿಸಿರುವ ಝಿ, ಸನ್, ಹಾಥ್‌ವೆ, ಸ್ಟಾರ್, ಆರ್ಡೆಲ್ ಮುಂತಾದ TV ಕಂಪನಿಗಳು ಉಳಿದ ಗ್ರಾಹಕರನ್ನು ಸೆಳೆಯಲು ಒಂದು ಕಡೆ, ಇನ್ನೊಂದು ಕಡೆ ತಮ್ಮ ಪ್ರತಿಸ್ಪರ್ಧಿಗಳನ್ನು 'ಮುಗಿಸಿ' ಏಕಸ್ವಾಮ್ಯ ಗಳಿಸುವ ಹಣಾಹಣಿ, ಈ ದುಡ್ಡು ಬಾಚುವ ಗುದ್ದಾಟದಲ್ಲಿ ನೋಡುಗ ಹಿತ, ಮನಸ್ಸನ್ನು ಕಾಪಾಡುವ ಮೌಲ್ಯದ ಕಾರ್ಯಕ್ರಮಗಳು ಚಿಂದಿಯಾಗಿವೆ. ಇದಕ್ಕಾಗಿ ಮಾಡದ ಕೆಲಸಗಳೇನು? ಈ ಭಾರಿ ಕುಳಗಳ ಹಣಾಹಣಿ, ರೌಡಿಸಂ.... ತೆರೆದಿಟ್ಟ ಲೇಖನಗಳು ಇಲ್ಲಿವೆ.



ತಂತ್ರಜ್ಞಾನ ಮುಂದುವರೆದ ಹಾಗೆ ಅದು ಉತ್ಪಾದನೆಯನ್ನು ಹೆಚ್ಚಿಸಬಲ್ಲದು. ಆದರೆ ಅದಕ್ಕೆ ಸರಿಹೊಂದುವ ಬೇಡಿಕೆಯನ್ನು ಉತ್ಪಾದಿಸಲಾಗದು. ಉತ್ಪನ್ನಗಳ ಬೇಡಿಕೆ ಹೆಚ್ಚಿಸುವ ಕಾರ್ಯವನ್ನು ಮಾಧ್ಯಮಗಳು ಮಾಡಬೇಕಾಗುತ್ತದೆ. ಈ ಲೆಕ್ಕಾಚಾರದಲ್ಲಿ ಇಂದು ಮಾಧ್ಯಮಗಳ ಪ್ರಥಮ ಆದ್ಯತೆ ಮತ್ತು ಉದ್ದೇಶ ಜಾಹೀರಾತು ಆಗಿದೆಯೆಂದರೆ ತಪ್ಪೇನಿಲ್ಲ.

ಜಾಗತೀಕರಣದ ಹಲವು ಅನಿಷ್ಟಗಳಲ್ಲಿ ವಿಸ್ತೃತ ದೂರದರ್ಶನ ಜಾಲ (T.V.Network) ಕೂಡ ಒಂದು. ಕೇವಲ ಭಾರತೀಯ ದೂರದರ್ಶನದೊಂದಿಗೆ ತೃಪ್ತಿಗೊಂಡಿದ್ದ ಭಾರತೀಯ ವೀಕ್ಷಕ ಈಗ ಲಭ್ಯವಿರುವ ನೂರಕ್ಕೂ ಹೆಚ್ಚಿನ ಚಾನಲ್‌ಗಳ ಗೊಂದಲದಲ್ಲಿ ಸಿಲುಕಿಕೊಂಡಿದ್ದಾನೆ. ಇಂತಹ ನೂರಾರು ಚಾನಲ್‌ಗಳು ವೀಕ್ಷಕರನ್ನು ಹೇಗೆ ತಲುಪುತ್ತವೆ ಎಂಬುದನ್ನು ತಿಳಿಯೋಣ.

ಭಾರೀ ವ್ಯವಹಾರದ ಜಾಲ

ಕೇಬಲ್ ಟಿ.ವಿ.ಯ ಉದ್ದಿಮೆಯೆಂಬುದು ರಚನೆಯಲ್ಲಿ ಪಿರಮಿಡ್‌ನಂತಿದೆ. ಎಲ್ಲಕ್ಕಿಂತ ಮೇಲೆ ಉಪಗ್ರಹ, ದೂರದರ್ಶನ ಕಂಪನಿಗಳಿವೆ. ಇವು ಪ್ರಸರಿಸುವ ಕಾರ್ಯಕ್ರಮಗಳನ್ನು 'ಮಲ್ಟಿ ಸಿಸ್ಟಮ್ ಆಪರೇಟರ್ಸ್' ಎಂದು ಕರೆಯಲ್ಪಡುವ ನಿಯಂತ್ರಣ ಕೊಠಡಿಗಳಲ್ಲಿ ಸೆರೆಹಿಡಿಯುತ್ತಾರೆ. ಹೀಗೆ ಸೆರೆಹಿಡಿಯಲ್ಪಟ್ಟ ಕಾರ್ಯಕ್ರಮಗಳನ್ನವರು ನೂರಾರು ಸಣ್ಣ ಕೇಬಲ್ ಆಪರೇಟರ್‌ಗಳಿಗೆ ರವಾನಿಸುತ್ತಾರೆ. ಇಂತಹ ಸಣ್ಣ ಕೇಬಲ್ ಆಪರೇಟರ್‌ಗಳ ಮೂಲಕ ಕಾರ್ಯಕ್ರಮಗಳು ಆ ಆಪರೇಟರ್‌ಗಳು ಸೇವೆ ಸಲ್ಲಿಸುತ್ತಿರುವ ಸುಮಾರು 300-400 ಮನೆಗಳನ್ನು ತಲುಪುತ್ತವೆ. ಹಿಂದೆ ಚಾನಲ್‌ಗಳ ಸಂಖ್ಯೆ ಕಡಿಮೆಯಿದ್ದಾಗ ನಿಯಂತ್ರಣ ಕೊಠಡಿಗಳು ಸ್ವತಂತ್ರವಾಗಿದ್ದವು. ಸ್ಥಳೀಯ ಕೇಬಲ್ ಆಪರೇಟರ್‌ಗಳೇ ಒಟ್ಟಾಗಿ ಇದನ್ನು ಹುಟ್ಟುಹಾಕುತ್ತಿದರು. ಆದರೆ ಚಾನಲ್‌ಗಳ ಸಂಖ್ಯೆ ಹೆಚ್ಚಿದಂತೆ ಉಪಕರಣಗಳ ಸಾಮರ್ಥ್ಯವನ್ನೂ ಹೆಚ್ಚಿಸುವುದು ಅನಿವಾರ್ಯ ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಭರಿಸುವುದು ಕಷ್ಟವೆನಿಸತೊಡಗಿತು. ಇದೇ ಸಂದರ್ಭದಲ್ಲಿ ದೇಶದ ಐದು ದೊಡ್ಡ ಕಂಪನಿಗಳು ಈ ಉದ್ದಿಮೆಯನ್ನು ಪ್ರವೇಶಿಸಿದವು. ಆ ಕಂಪನಿಗಳ ಪ್ರವೇಶ ನ್ಯಾಯಯುತವೇ ಆಗಿರಲಿಲ್ಲ. ಕೊಲೆ, ಒತ್ತಡ ಮತ್ತು ತಮಗೆ ಮಣಿಯದವರ ಮುಕ್ತಾಯ ಅವರ ತಂತ್ರಗಳಾಗಿತ್ತು. ಈ ರೀತಿ ಅವು ಈಗಾಗಲೇ ನಗರ ಪ್ರದೇಶದ ಶೇ 80 ರಷ್ಟು ನಿಯಂತ್ರಣ ಕೊಠಡಿಗಳ ಮೇಲೆ ಹಿಡಿತ ಸಾಧಿಸಿವೆ. ದೇಶದ ಕೇಬಲ್ ಜಾಲದ 30 ಮಿಲಿಯನ್ ಮನೆಗಳಲ್ಲಿ ಅವು ಈಗಾಗಲೇ 100 ಲಕ್ಷ (ಒಂದು ಕೋಟಿ) ಮನೆಗಳನ್ನು ತಮ್ಮ ತೆಕ್ಕೆಗೆ ಎಳೆದುಕೊಂಡಿವೆ. ಇನ್ನುಳಿದ 200 ಲಕ್ಷ (2 ಕೋಟಿ) ಮನೆಗಳು ಇಂದಿಗೂ ಸ್ವತಂತ್ರ ನಿಯಂತ್ರಣ ಕೊಠಡಿಯುವರ ಕೈಯಲ್ಲೇ ಉಳಿದಿವೆ. ಈ ಐವರೊಳಗೆ ಮೊದಲ ಸ್ಥಾನ ದಕ್ಕಿರುವುದು ಝೀ ಟಿ.ವಿ.ಯ ಸಿಟಿ ಕೇಬಲ್‌ನವರಿಗೆ. ಇವರ ಗ್ರಾಹಕರ ಸಂಖ್ಯೆ 50 ಲಕ್ಷಗಳು ಆಗಿದ್ದರೆ 40 ಲಕ್ಷ ಗ್ರಾಹಕರನ್ನು ಹೊಂದಿರುವ ಹಿಂದುಜಾ ಸಂಸ್ಥೆ ಇಂಡಸ್ ಮೀಡಿಯ ಎರಡನೇಯ ಸ್ಥಾನದಲ್ಲಿದೆ. 25 ಲಕ್ಷ ಗ್ರಾಹಕರನ್ನು ಹೊಂದಿರುವ ಹಾಥ್‌ವೇ ಕೇಬಲ್ಸ್ ಮತ್ತು 10 ಲಕ್ಷ ಗ್ರಾಹಕರನ್ನು ಹೊಂದಿರುವ ಸುಮಂಗಲಿ (ಸನ್ ಟಿ.ವಿ.) ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದರೆ 5ನೇ ಸ್ಥಾನದಲ್ಲಿರುವುದು 4 ಲಕ್ಷ ಗ್ರಾಹಕರನ್ನು ಹೊಂದಿರುವ ಆರ್ಡೆಲ್ ಸಂಸ್ಥೆ. ಇದಲ್ಲದೆ ಇತ್ತೀಚಿಗೆ ಬಂಡವಾಳದಲ್ಲಿ ಶೇ 3.3 ಪಾಲಿಗೆ ಅಂತರ್‍ರಾಷ್ಟ್ರೀಯ 'ಇಂಟೆಲ್' ಇಂಡಲ್ ಮೀಡಿಯಾದಲ್ಲಿ 59.23 ಮಿಲಿಯನ್ ಡಾಲರ್ ತೊಡಗಿಸಿದ್ದರೆ 'ಹಾಥ್‌ವೆ' ಕಂಪನಿಯ ಶೇ 26 ಬಂಡವಾಳಕ್ಕಾಗಿ ಸ್ಟಾರ್ ಟಿ.ವಿ. 75 ಮಿಲಿಯನ್ ಡಾಲರ್ ನೀಡಿದೆ. ಸಿಟಿ ಕೇಬಲ್‌ನ ಮೌಲ್ಯ 1.9 ಬಿಲಿಯನ್ ಡಾಲರುಗಳೆಂದು ಹೆಚ್‌ಎಸ್‌ಬಿಸಿ ಅಂದಾಜು ಮಾಡಿದೆ. ಇದನ್ನೇ ಆಧಾರವಾಗಿಟ್ಟುಕೊಂಡರೆ ಭಾರತದ ಉಪಗ್ರಹ ಮತ್ತು ಕೇಬಲ್ ಜಾಲದ ಮೌಲ್ಯ 10.5 ಬಿಲಿಯನ್ ಡಾಲರುಗಳು. ಇದು ನಿಜಕ್ಕೂ ಇಷ್ಟೊಂದು ಮೌಲ್ಯವುಳ್ಳದ್ದೆ ಎಂಬುದನ್ನರಿಯಲು ನಾವು ಕೇಬಲ್ ಜಾಲದ ಕಾರ್ಯವನ್ನು ತಿಳಿಯುವುದು ಅಗತ್ಯವಿದೆ.

ಎಸ್.ಕೆ.ಗೀತಾ, ಬೆಂಗಳೂರು

ಕನೆಕ್ಷನ್, ಕಲೆಕ್ಷನ್...

ಈಗಾಗಲೇ ಕೇಬಲ್‌ನ ಗ್ರಾಹಕರಾದ 30 ಮಿಲಿಯನ್ ಮನೆಗಳವರು ತಿಂಗಳಿಗೆ ಸರಾಸರಿ 100 ರೂ.ಗಳನ್ನು ಸ್ಥಳೀಯ ಕೇಬಲ್ ಆಪರೇಟರ್‌ಗಳಿಗೆ ನೀಡುತ್ತಾರೆ ಎಂದರೆ ವರ್ಷವೊಂದಕ್ಕೆ 3600 ಕೋಟಿಗಳ ಆದಾಯ ನಿರ್ಮಾಣವಾಗುತ್ತದೆ. ಇದು ಜಾಹೀರಾತುಗಳಿಂದ ಉತ್ಪನ್ನವಾಗುವ 2500 ಕೋಟಿ ರೂ.ಗಳ ಆದಾಯಕ್ಕಿಂತ 1600 ಕೋಟಿಯಷ್ಟು ಹೆಚ್ಚಿನದು.

2005ನೇಯ ಇಸವಿಯ ವೇಳೆಗೆ 4600 ಮಿಲಿಯ ಮನೆಗಳು ಕೇಬಲ್ ಜಾಲ ಹೊಂದಬಹುದೆಂದು ಒಂದು ಅಧ್ಯಯನ ಹೇಳುತ್ತದೆ. ಆಗ ಪ್ರತಿ ಮನೆಯವರು ಸರಾಸರಿ 180-225 ರೂ.ಗಳನ್ನು ಕೇಬಲ್‌ನವರಿಗೆ ಪಾವತಿ ಮಾಡುತ್ತಾರೆ. ಪ್ರತಿ ಮನೆಗೆ 150 ರೂಪಾಯಿ ಎಂದು ಅಂದಾಜಿಸಿದರೂ ಅಂದಿನ ಉತ್ಪತ್ತಿ 6900 ಕೋಟಿಗಳಾಗುತ್ತವೆ.



ಚಿನ್ನದ ಗಣಿಗೇ ಕೈ

ಇಂತಹ ಚಿನ್ನದ ಗಣಿಗೆ ಕೈಯಿಕ್ಕ ಹೊರಟಿರುವ ಉದ್ಯಮಪತಿಗಳ ಕನಸು ಇನ್ನೂ ಹಿರಿದು. ಇದೇ ಜಾಲದ ಮೂಲಕ ದೂರವಾಣಿ, ಇಂಟರ್‌ನೆಟ್‌ನ ಸಂಪರ್ಕ ಕಲ್ಪಿಸಿ ಇನ್ನೂ ಹೆಚ್ಚಿನ ಆದಾಯ ತಮ್ಮದಾಗಿಸಿಕೊಳ್ಳುವ ಆಶಯ ಅವರದು. ಇಂಟರ್‌ನೆಟ್‌ಗಾಗಿ ಹಾಥ್‌ವೆ ಮತ್ತು ಇಂಡಸ್ ಲ್ಯಾಂಡ್ ಕಂಪನಿಗಳು ಮುಂಬೈ ಮತ್ತು ಸುತ್ತಮುತ್ತ ಗ್ರಾಹಕರೊಬ್ಬರಿಗೆ 1000-1500 ರೂಗಳನ್ನು ವೆಚ್ಚಮಾಡಲು ಸಿದ್ಧವಿದ್ದರೆ ಬೆಂಗಳೂರಿನಲ್ಲಿ ಸಿಟಿಕೇಬಲ್ ರೂ. 100 ಭರಿಸಲು ಸಿದ್ಧವಿದೆ. ಕೇವಲ ಐದೇ ವರ್ಷಗಳಲ್ಲಿ ರೂ. 10000 ಕೋಟಿ ಆದಾಯದ ಮೇಲೆ ಅವರ ಕಣ್ಣಿದೆ.

ಸ್ಥಳೀಯ ಕೇಬಲ್ ಆಪರೇಟರ್ ಗ್ರಾಹಕರು ಮತ್ತು ನಿಯಂತ್ರಣ ಕೊಠಡಿಯ ನಡುವಿನ ಕೊಂಡಿಯಾಗಿದ್ದಾನೆ. ಗ್ರಾಹಕನೊಬ್ಬನಿಂದ ಕೇಬಲ್ ಆಪರೇಟರ್ 100 ರೂಗಳನ್ನು ಗಳಿಸಿದರೆ 40 ರೂ.ಗಳನ್ನು ನಿಯಂತ್ರಣ ಕೊಠಡಿಯವರಿಗೆ ನೀಡಲಾಗುತ್ತದೆ. ನಿಯಂತ್ರಣ ಕೊಠಡಿಯವರಿಗೆ ಯಾವುದೇ ಕೇಬಲ್ ಆಪರೇಟರ್ ಎಷ್ಟು ಗ್ರಾಹಕರನ್ನು ಹೊಂದಿದ್ದಾನೆ ಮತ್ತು ಅವರಿಂದ ಎಷ್ಟು ಹಣ ವಸೂಲಿ ಮಾಡುತ್ತಾನೆ ಎಂಬ ಬಗ್ಗೆ ಸ್ಪಷ್ಟ ಅರಿವಿಲ್ಲದಿರುವುದರಿಂದ ಅವರಿಗೆ ನಿಜವಾಗಿ ಸಲ್ಲಬೇಕಾದ ಪಾಲು ಸಿಗುವುದಿಲ್ಲ. ಉದಾಹರಣೆಗೆ ಸಿಟಿಕೇಬಲ್‌ಗೆ 50 ಲಕ್ಷ ಗ್ರಾಹಕರಿಂದ 50 ರೂ.ಗಳಂತೆ ಅದರ ಆದಾಯ 300 ಕೋಟಿಯಾಗಬೇಕಿತ್ತು. ಆದರೆ 1999-2000 ಕ್ಕೆ ಅವರ ಆದಾಯ ಕೇವಲ 32 ಕೋಟಿ ರೂಪಾಯಿಗಳು. ಅಂದರೆ ಒಬ್ಬ ಗ್ರಾಹಕನಿಂದ ಅವರಿಗೆ ಸಲ್ಲುವುದು ಕೇವಲ 5.30 ರೂ.ಗಳುಮಾತ್ರ. ನಿಜವಾಗಿ ಕಾರ್ಯಕ್ರಮ ನೀಡುವ ಉಪಗ್ರಹ ಚಾನಲ್‌ಗಳಿಗೆ ಇದಕ್ಕಿಂತಲೂ ಕಡಿಮೆ ಹಣ ದೊರೆಯುತ್ತದೆ.

ಗ್ರಾಹಕರ ಮೇಲಿನ ಹೆಚ್ಚಿನ ಹಿಡಿತ ಸಾಧಿಸುವುದರಿಂದ ಹೆಚ್ಚು ಲಾಭಗಳಿಸುವುದು ಸಾಧ್ಯ. ಹಾಗಾಗಿಯೇ ಈ ದೊಡ್ಡ ಉದ್ಯಮಪತಿಗಳು ನಿಯಂತ್ರಣ ಕೊಠಡಿಯನ್ನು ತಮ್ಮದಾಗಿಸಿಕೊಳ್ಳಲು ಸೆಣಸಾಡುತ್ತಿವೆ. ಇದು ಸುಲಭ ಸಾಧ್ಯ ಕೆಲಸವೇನಲ್ಲ. ಗ್ರಾಹಕನೊಬ್ಬನಿಗೆ ಅವರು ಸುಮಾರು 10000 ರೂ.ಗಳನ್ನು ವ್ಯಯಿಸಬೇಕಾದೀತು. ಅಲ್ಲದೆ ಇಷ್ಟು ದೊಡ್ಡ ಗ್ರಾಹಕ ಜಾಲವನ್ನು ದಿನನಿತ್ಯ ಸುಧಾರಿಸುವುದು ಒಂದು ದುಃಸ್ವಪ್ನವೇ ಆದೀತು. ಹಾಗಾಗಿ 10000 ಸಣ್ಣ ಕೇಬಲ್ ಆಪರೇಟರ್‌ಗಳನ್ನು ತಮ್ಮತ್ತ ಸೆಳೆದುಕೊಳ್ಳುವುದು ಸುಲಭವೆನಿಸಿದೆ. ಅವರ ಮೇಲೆ ಹಿಡಿತ ಸಾಧಿಸಿ ಅವರನ್ನು ಕೇವಲ ಸಂಗ್ರಾಹಕ ಪ್ರತಿನಿಧಿ(Collection agent)ಗಳಾಗಿ ಕಾರ್ಯನಿರ್ವಹಿಸುವಂತೆ ಮಾಡಬಹುದು.

ಸದ್ಯಕ್ಕೆ ನಿಯಂತ್ರಣ ಕೊಠಡಿಯವರ ಮತ್ತು ಸಣ್ಣ ಕೇಬಲ್ ಆಪರೇಟರ್‌ಗಳ ನಡುವಿನ ಸಂಬಂಧವೇನೂ ಸರಿಯಿಲ್ಲ. ಸಣ್ಣ ಆಪರೇಟರ್‌ಗಳು ನಿಯಂತ್ರಣ ಕೊಠಡಿಯವರಿಗೆ ಗ್ರಾಹಕ ಮಾಹಿತಿ ಸರಿಯಾಗಿ ನೀಡುವುದಿಲ್ಲ. ಆದರೆ ದಿನನಿತ್ಯ ಗ್ರಾಹಕರೊಂದಿಗೆ ವ್ಯವಹರಿಸುವುದು ನಿಯಂತ್ರಣ ಕೊಠಡಿಯವರಿಗೆ ಸಾಧ್ಯವಿಲ್ಲ.

10 ಸಾವಿರ ಕೋಟಿ ಆದಾಯದ ಮೇಲೆ ಕಣ್ಣು

ಹೆಚ್ಚಿನ ಕೇಬಲ್ ಆಪರೇಟರ್‌ಗಳು ಸಣ್ಣ ಬಂಡವಾಳದಾರರು ಅವರಿಗೆ ತಾಂತ್ರಿಕ ಹೆಚ್ಚಳಕ್ಕಾಗಿ ಯಾವುದೇ ಹೆಚ್ಚಿನ ಹಣ ತೊಡಗಿಸುವುದು ಸಾಧ್ಯವಿಲ್ಲ ಹಾಗಾಗಿ ಉದ್ದಿಮೆದಾರ ತಾಂತ್ರಿಕ ಹೆಚ್ಚಳ ಮಾಡಿದರೆ ಕೇಬಲ್ ಆಪರೇಟರ್‌ಗೆ ಯಾವುದೇ ಹೆಚ್ಚಿನ ಖರ್ಚಿನ ಅಗತ್ಯವಿಲ್ಲ. ಹಾಗಾಗಿ ಅವರಿದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವಂತಾಗಿದೆ. ಇದನ್ನೇ ಬಳಸಿಕೊಂಡು ಮುಂದಿನ 10000 ಕೋಟಿ ಆದಾಯದ ಮೇಲೆ ಕಣ್ಣಿಟ್ಟಿರುವ 5 ದೊಡ್ಡ ಉದ್ದಿಮೆದಾರರು ಲಾಭಗಳಿಸಲು ಸಜ್ಜಾಗಿದ್ದಾರೆ. ಅವರು ಇದರಲ್ಲಿ ಯಶಸ್ವಿಯಾಗುವರೆ ಇಲ್ಲವೇ ಎಂಬುದು ಗ್ರಾಹಕರ ಮೇಲೆಯೇ ಆಧಾರಿತವಾಗಿದೆ. ಗ್ರಾಹಕರು ಯಾವ ಚಾನೆಲ್‌ನ್ನು ಎಷ್ಟು ನೋಡುತ್ತಾರೆ ಮತ್ತು ಕೇಬಲ್ ಟಿ.ವಿ.ಯ ಎಷ್ಟು ಗ್ರಾಹಕರು ಇಂಟರ್ ನೆಟ್‌ನಂತಹ ಇತರ ಸೌಲಭ್ಯ ಬಳಸಲು ಇಚ್ಚಿಸುತ್ತಾರೆ ಎಂಬ ಬಗ್ಗೆ ಯಾವುದೇ ಸ್ಪಷ್ಟ ಚಿತ್ರಣವಿಲ್ಲ.

ಮುಂದುವರೆದ ಕೆಲವು ದೇಶಗಳಲ್ಲಿ ಯಾವುದೇ ಕಂಪನಿಗೆ ಕೇಬಲ್ ಜಾಲದಲ್ಲಿ ನಿರ್ದಿಷ್ಟ ದರಕ್ಕಿಂತ ಹೆಚ್ಚಿನ ಬಂಡವಾಳ ಹೂಡದಂತೆ ಪ್ರತಿಬಂಧವಿದೆ. ಏಕಸ್ವಾಮ್ಯವನ್ನು ಇಲ್ಲವಾಗಿಸುವುದು ಇದರ ಉದ್ದೇಶವಂತೆ. ನಮ್ಮಲ್ಲಿ ಇಂತಹ ಕಾಯ್ದೆಯನ್ನು ಬರದಂತೆ ತಡೆಯಲು ಈ ಉದ್ದಿಮೆಯುವರು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ.

ಕಾಯ್ದೆಯಿರಲಿ ಇಲ್ಲದಿರಲಿ ನಮ್ಮ ದೇಶದ ಕೇಬಲ್ ಜಾಲ ಅವ್ಯವಹಾರಗಳಿಂದ ತುಂಬಿಹೋಗಿದೆ. ಈ ಜಾಲದ ಮೇಲೆ ಹತೋಟಿ ಸಾಧಿಸಲು ಕೊಲೆ, ಸುಲಿಗೆ ಮತ್ತು ಭಯೋತ್ಪಾದನೆಯಂತಹ ದಾರಿ ಹಿಡಿಯಲಾಗಿದೆ. ಲಾಭ ಮತ್ತು ಹಣ ಗಳಿಕೆಯೇ ಮುಖ್ಯ ಉದ್ದೇಶವಾಗಿರುವ ಜಾಗತೀಕರಣದ ಇಂದಿನ ದಿನಗಳಲ್ಲಿ ಅಂತಿಮ ಗುರಿ ಸಾಧನೆ ಮುಖ್ಯ. ಅದಕ್ಕಾಗಿ ಅನುಸರಿಸುವ ಮಾರ್ಗವೆಲ್ಲ ಕೊನೆಗೂ ಸ್ಥಳೀಯ ಸಂಸತಿಯನ್ನು ನಾಶಮಾಡಿ ಬದುಕಿನ ಮೂಲಭೂತ ಮೌಲ್ಯ ಮತ್ತು ಅಗತ್ಯಗಳಿಂದ ಜನರನ್ನು ವಿಮುಖಗೊಳಿಸುವ ಹಾಗೂ ವಿಕೃತಗೊಳಿಸುವತ್ತ ಕಾರ್ಯಶೀಲವಾಗಿರುವ ಕೇಬಲ್ ಜಾಲದ ಕರಾಳ ಮುಖ ಇದಾಗಿದೆ.

ಟಿ.ವಿ. ಕೇಬಲ್ ಮಾಧ್ಯಮದಲ್ಲಿ ಹಿಡಿತ ಸಾಧಿಸಲು ಹಣಾಹಣಿ

ಮಹಾನಗರ ಬೆಂಗಳೂರಿನಲ್ಲಿ ಟಿ.ವಿ. ಇಲ್ಲದ ಮನೆ ಇದ್ದರೆ ಹೇಗೆ? ಹಾಗೆಯೇ ಟಿ.ವಿ. ನೋಡುವವರ ಸಂಖ್ಯೆಯೂ ಅಪಾರ. ಅದೇ ರೀತಿ ಕೇಬಲ್ ಟಿ.ವಿ. ಕೇಂದ್ರಗಳು ದೊಡ್ಡ ಸಂಖ್ಯೆಯಲ್ಲಿ ಬೆಳೆಯುತ್ತಿವೆ. ಇದೊಂದು ಲಾಭದಾಯಕ ಭಾರಿ ಉದ್ದಿಮೆಯಾಗುತ್ತಿದೆ. ಸುಮಾರು 6.5 ಲಕ್ಷ ಜನರು ಕೇಬಲ್ ಟಿ.ವಿ.ಯನ್ನು ಅಳವಡಿಸಿಕೊಂಡಿದ್ದಾರೆ. 100 ಟಿ.ವಿ.ಕೇಬಲ್ ಆಪರೇಟರ್‌ಗಳು ಪೈಪೋಟಿ ನಡೆಸಿ ಹಣ ಗಳಿಸಲು ಮುಂದಾಗಿದ್ದಾರೆ. ಪ್ರತಿ ಮನೆಯಿಂದ ಪ್ರತಿತಿಂಗಳು 125 ರಿಂದ 200 ರೂ.ಗಳನ್ನು ವಸೂಲಿ ಮಾಡುತ್ತಾರೆ. 2 ಲಕ್ಷ ರೂ.ಗಳ ಬಂಡವಾಳ ಹಾಕಿದರೆ ಸಾಕು. ವರ್ಷಗಟ್ಟಲೆ ಹಣ ಸಾಗರದಂತೆ ಹರಿದು ಬರುತ್ತದೆ.



ಕೋಟ್ಯಾಂತರ ರೂಗಳ ಲಾಭ ಯಾರಿಗೆ ಬೇಡ!

ಏಕಸ್ವಾಮ್ಯ ಸಾಧಿಸಲು ಭಾರಿ ಕುಳಗಳ ಹಣಾಹಣಿ

ಇಂತಹ-ಲಾಭದಾಯಕ ಉದ್ಯಮದಲ್ಲಿ ಭಾರಿಕುಳಗಳು ತಮ್ಮ ಹಸ್ತ ಚಾಚಿ ಟಿ.ವಿ. ಚಾನೆಲ್‌ಗಳಲ್ಲಿ ಏಕಸ್ವಾಮ್ಯ ಸಾಧಿಸಲು ಮಸಲತ್ತು ನಡೆಸಿವೆ. ಬೆಂಗಳೂರಿನಲ್ಲಿ 5 ಬೃಹತ್ ಕೇಬಲ್ ಕೇಂದ್ರಗಳಿವೆ. ಜೀ ನೆಟ್‌ವರ್ಕ್‌ನ ಸಿಟಿ ಚಾನೆಲ್, ಹಿಂದುಜಾನ ಇನ್ ಕೇಬಲ್, ರಹೇಜಾನ ಹಾಥ್‌ವೆ, ಚಿನ್ನ ಸ್ವಾಮಿರಾಜುರವರ ಏಟ್ರಿಯಾ ಹಾಗೂ ಕೇಬಲ್ ಆಪರೇಟರ್‌ಗಳು ಕೂಡಿ ನಡೆಸುತ್ತಿರುವ ICE.

ಈ ಸಂಸ್ಥೆಯ ಭಾರಿ ಕುಳಗಳು ಬೆಂಗಳೂರಿನಲ್ಲಿರುವ ಕೇಬಲ್ ಆಪರೇಟರ್‌ಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಎಲ್ಲಾ ಕಸರತ್ತು, ಹೀನಕೃತ್ಯಗಳನ್ನು ನಡೆಸಲು ಮುಂದಾಗಿದ್ದಾರೆ. ಸಣ್ಣ ಸಣ್ಣ ಕೇಬಲ್ ಆಪರೇಟರ್‌ಗಳ ಮೇಲೆ 'ಚೂ' ಬಿಟ್ಟು ರೌಡಿಗಳ ಮೂಲಕ ದಂಧೆ ನಡೆಸುವ ಕಾರ್ಯದಲ್ಲಿ ತೊಡಗಿದ್ದಾರೆ.

ರೋಲ್‌ಕಾಲ್, ಚಾಕು....

ಎಲ್ಲಾ ಕಸರತ್ತುಗಳು ಇಲ್ಲಿವೆ

ಬೆಂಗಳೂರಿನಲ್ಲಿ ನಡೆದ ಇತ್ತೀಚಿನ ಘಟನೆಗಳು ಜನರನ್ನು ದಂಗು ಬಡಿಸುತ್ತವೆ. ವರ್ಷದ ಹಿಂದೆ ಪ್ರಶಾಂತ ನಗರ ಸಂತಾನಂ ಕೇಬಲ್ ಆಪರೇಟರ್ ವಿರುದ್ಧ ಸಿಟಿ ಕೇಬಲ್‌ನವರು ಅವೀಸ್ ಕೇಬಲ್‌ನವರನ್ನು ಛೂ ಬಿಟ್ಟು ಹೊಡೆಸಿ ಚಾಕು ಹಾಕಿಸಿ ತಮ್ಮ ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದರು. ಈ ಸಂತಾನಂಗೆ ವಿಜಯನಗರ ಕೇಬಲ್ ನೆಟ್‌ವರ್ಕ್‌ನ (VCN) ದ್ವಾರಕನವರ ಬೆಂಬಲವಿದ್ದರಿಂದ ಸಿಟಿಕೇಬಲ್‌ನವರು ತಣ್ಣಗಾದರು. ಬೆಂಗಳೂರಿನ ಪ್ರಖ್ಯಾತ ರೌಡಿಗಳು ಈ ಕೇಬಲ್ ಆಪರೇಟರ್‌ಗಳಿಂದ ಪ್ರತಿದಿನ [illegible] ಈ ಕಾರಣಕ್ಕಾಗಿ

ರೌಡಿಗಳ ಮಧ್ಯೆ ಹೊಡೆದಾಟಗಳು ನಡೆಯುತ್ತಿವೆ. ಪ್ರತಿಷ್ಠಿತ ದೊಡ್ಡ ಉದ್ದಿಮೆದಾರ ಝೀ ಟಿ.ವಿ. ಸುಭಾಶ್ ಚಂದ್ರನ ಕರಾಳ ಹಸ್ತ ಈ ರೌಡಿಗಳ ಸಹಾಯಕ್ಕೆ ನಿಂತಿದೆ.

ಮತ್ತೊಂದೆಡೆ ಏಟ್ರಿಯಾ ಕೇಬಲ್ ಮುಖ್ಯಸ್ಥ ಚಿನ್ನಸ್ವಾಮಿರಾಜುರವರು ಶೇ 51 ರಷ್ಟು ಹಣವನ್ನು

ಭಾರಿ ಕುಳಗಳ ದಂಧೆ-ರೌಡಿಸಂ

15 ತಿಂಗಳ ಆದಾಯ ಲೆಕ್ಕ ಮಾಡಿ ಹಣದ ಆಸೆ ತೋರಿಸಿ, ಮುಂಚಿತವಾಗಿಯೇ ಹಣ ಪಾವತಿಸಿ ಸ್ಥಳೀಯ ಕೇಬಲ್ ಆಪರೇಟರ್‌ಗಳನ್ನು ತಮ್ಮೆಡೆಗೆ



ಸೆಳೆದುಕೊಳ್ಳಲು ಹಣದ ಹೊಳೆ ಹರಿಸುತ್ತಿದ್ದಾರೆಂದು ಸುದ್ದಿ. ಈ ರೀತಿಯಾಗಿ ಹಣದ ಮೂಲಕ ಮಾಧ್ಯಮಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹವಣಿಸುತ್ತಿದ್ದಾರೆ.

ಮುಂಬೈನಲ್ಲಿ ಶಿವಸೇನೆ ದುಷ್ಕೃತ್ಯಗಳು

ಬೆಂಗಳೂರು ಮಹಾನಗರದಲ್ಲಿ ಟಿ.ವಿ.ಕೇಬಲ್ ಮಾಧ್ಯಮದಲ್ಲಿ ಯಾರೂ ಮೇಲುಗೈ ಸಾಧಿಸಲು ಸಾಧ್ಯವಾಗಿಲ್ಲ. ಆದರೆ ಮುಂಬೈನಲ್ಲಿ ಇಂತಹ ಎಲ್ಲಾ ಕೇಬಲ್ ಕೇಂದ್ರಗಳ ಹಿಡಿತ ಶಿವಸೇನೆಯ ಕೈಯಲ್ಲಿದೆ ಎಂಬುದು ಆತಂಕದ ವಿಷಯ. ಮಾಫಿಯಾಗಳ ಆಶ್ರಯದಲ್ಲಿ ಹತ್ತಾರು ಕೊಲೆಗಳು ಮುಂಬೈನಲ್ಲಿ ನಡೆದಿವೆ. ಶಿವಸೇನೆ ನಾಯಕ ಬಾಳಾಠಾಕ್ರೆಯ ಇಬ್ಬರು ಸೊಸೆಯರು ಇಂತಹ ದುಷ್ಕೃತ್ಯಗಳ ಹಿಂದೆ ಹಣ ಬಾಚುತ್ತಾ ಈ ಕೊಲೆಗಳನ್ನು ನಡೆಸಿರುವ ಅಧಿಕೃತ ವಕ್ತಾರರಾಗಿದ್ದಾರೆ. ಜನರನ್ನು ದೋಚುವವರಿಗೆ ಶಿವಸೇನೆ ಬೆನ್ನೆಲುಬಾಗಿ ನಿಂತಿದೆ.

ತಮಿಳುನಾಡಿನಲ್ಲಿ ಎರಡು ರಾಜಕೀಯ ವ್ಯಕ್ತಿಗಳ ಹಣಾಹಣಿ

ಗೋಪಾಲಕೃಷ್ಣ ಅರಳಹಳ್ಳಿ

ತಮಿಳುನಾಡಿನ ಚೆನ್ನೈ ನಗರದಲ್ಲಿ ಎರಡು ರಾಜಕೀಯ ಶಕ್ತಿಗಳ ಹಣಾಹಣಿ ಒಬ್ಬರನ್ನು ತುಳಿದು ಮತ್ತೊಬ್ಬರು ಮೇಲುಗೈ ಸಾಧಿಸುವುದಾಗಿದೆ. ಚೆನ್ನೈ ನಗರದಲ್ಲಿ ಕೇಬಲ್ ಟಿ.ವಿ. ಹಿಡಿತ ಸುಮಂಗಲಿ ನೆಟ್‌ವರ್ಕ್ ಕೈಯಲ್ಲಿದೆ. ಇದು ಸನ್‌ನೆಟ್ ವರ್ಕ್‌ಗೆ ಸೇರಿದ್ದು. ಜಯಲಲಿತಾ ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಸಾಕು ಮಗ ಸುಧಾಕರ್ ಮೂಲಕ ಸೂಪರ್ ಡೂಪರ್ ನೆಟ್‌ಸನ್ ಎಂಬ ಸಂಸ್ಥೆ ಸ್ಥಾಪಿಸಿ ಹಣ ಬಾಚುತ್ತಿದ್ದರು. ಕರುಣಾನಿಧಿ ಮುಖ್ಯಮಂತ್ರಿಯಾಗಿ ಮುರುಸೋಳಿ ಮಾರನ್ ಕೇಂದ್ರ ಮಂತ್ರಿಯಾದ ಮೇಲೆ ಸೂಪರ್ ಡೂಪರ್ ಅನ್ನು ಮಟ್ಟಹಾಕಿ ಅವರ ಸುಮಂಗಲಿ ನೆಟ್‌ವರ್ಕ್ ಇಡೀ ಚೆನ್ನೈ ನಗರದ 10 ಲಕ್ಷ ಮನೆಗಳ ಕೇಬಲ್ ಸಂಪರ್ಕ ಪಡೆಯಿತು. ಸುಮಾರು 10 ಕೋಟಿ ರೂಪಾಯಿ ಆದಾಯದಲ್ಲಿ ಮದ್ರಾಸ್‌ನ ರೌಡಿಗಳು, ಪೋಲೀಸರು ಹಾಗೂ ಸರ್ಕಾರಿ ಯಂತ್ರಗಾರರು ಈ ಹಣದಲ್ಲಿ ಪಾಲು ಪಡೆಯುತ್ತಿದ್ದಾರೆ.

ಬೆಂಗಳೂರಿಗೂ ಈ ಗತಿ ಬಂದೇ ಬರುತ್ತದೆ!

ಮುಂಬೈ-ಚೆನ್ನೈ ರೀತಿ ಬೆಂಗಳೂರಿಗೂ ಈ ಗತಿ ಬರುತ್ತದೆ ಎಂಬುದರಲ್ಲಿ ಸಂಶಯವಿಲ್ಲ, ನಗರದ ಇತ್ತೀಚಿನ ಬೆಳವಣಿಗೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ಟಿ.ವಿ.ಕೇಬಲ್ ಆಪರೇಟರ್‌ಗಳಿಂದ ರೋಲ್‌ಕಾಲ್ ಮಾಡುತ್ತಿರುವ ರೌಡಿಗಳ ಸಂಖ್ಯೆ, ಅವರ ದಂಧೆ ಹೆಚ್ಚಾಗುತ್ತಿದೆ. ಈ ದಂಧೆಗೆ ಭಾರೀ ಉದ್ಯಮಿಗಳಾದ ಹಿಂದೂಜಾ, ಝೀ ನೆಟ್ ವರ್ಕ್, ಏಟ್ರಿಯಾ, ಹಾಥ್‌ವೆ ಅಂತಹ ಕಂಪನಿಗಳು ಬೆಂಗಾವಲಾಗಿವೆ.

ಶ್ರೀರಾಂಪುರದಲ್ಲಿ ಮಣಿಭಾರತಿ ಹಾಗೂ ಕಾಲಾಪತ್ತರ್ ಮತ್ತು ಇತರ ರೌಡಿಗಳು ಇಂತಹದಂಧೆಯಲ್ಲಿ ತೊಡಗಿದ್ದು ಮಲ್ಲೇಶ್ವರಂನ ಮಹಮಡನ್ ಬ್ಲಾಕ್ ವೆಳ್ಳಿಪುರದಲ್ಲಿ ಇತ್ತೀಚೆಗೆ ಗಲಾಟೆಯಾಗಿ ರೌಡಿ ಮಣಿಭಾರತಿ ಮತ್ತಿತರರು ಜೈಲು ಸೇರಿದ್ದಾರೆ. ನಗರದ ರಾಮಚಂದ್ರಪುರ ವಿಭಾಗದ ನಗರಸಭಾ ಸದಸ್ಯರಾದ ಕ್ರಿಸ್ಟೋಫರ್ ಚಕ್ರವರ್ತಿ ಉರುಫ್ ಚಕ್ರಿ ಮಧ್ಯಸ್ಥಿಕೆ ವಹಿಸಲು ಹೋಗಿ ಮಚ್ಚಿನ ಏಟು ತಿಂದು ಪರಾರಿಯಾಗಿದ್ದಾನೆ. ಇಂತಹವರು ಇತ್ತೀಚೆಗೆ ಮಹಾನಗರ ಪಾಲಿಕೆಯ ಸ್ಥಾಯಿಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಮಣಿಭಾರತಿಯ ಬಲಗೈ ಭಂಟ ಕೃಷ್ಣ ಹೊಸ ಟಿ.ವಿ.ನೆಟ್‌ವರ್ಕ್ ಆರಂಭಿಸುತ್ತಿದ್ದು ಇದಕ್ಕಾಗಿ ಇದೆ ಪ್ರದೇಶದ ಸೋನಿ ಕೇಬಲ್‌ನ ಬಾಬು ಹಾಗೂ ಬಾಲಾಜಿಯನ್ನು ಏರಿಯಾದಿಂದ ಎತ್ತಂಗಡಿ ಮಾಡಿಸುವ ಪ್ರಯತ್ನದಲ್ಲಿದ್ದಾಗ ಈ ಗಲಾಟೆಯಾಯಿತು.

ಅಶೋಕ ಹೋಟೆಲಿನಲ್ಲಿ ಕೃಷ್ಣ ಈ ಹಿಂದೆ ಬಟ್ಲರ್ ಕೆಲಸದಲ್ಲಿದ್ದ, ಅಲ್ಲಿಂದ ಬಡ್ತಿ ಪಡೆದು ರಾಜ್ಯಪಾಲರ ಮನೆಯಲ್ಲಿ ಕೆಲಸದಲ್ಲಿದ್ದಾನೆ. ರಾಜ್ಯಪಾಲರ ಅಧಿಕಾರಿಗಳಿಂದ ಸಹಕಾರ ಹೊಂದಿದ್ದು ಈ ರೌಡಿಗಳ ಶ್ರೀರಕ್ಷೆಯಾಗಿದ್ದಾನೆ ಎಂಬ ವದಂತಿಗಳಿವೆ. ○

ಬಾಂಗ್ಲಾದೇಶದ ಡಾಕಾದಲ್ಲಿ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದ್ದ ಬಹಿರಂಗ ಸಭೆಯ ಮೇಲೆ ನಡೆದ ಬಾಂಬ್ ದಾಳಿ ನಂತರ ತೆಗೆದ ಚಿತ್ರ

ಜನವರಿ 20ರಂದು ಬಾಂಗ್ಲಾದೇಶದ ರಾಜಧಾನಿ ಡಾಕಾದಲ್ಲಿ ಕೋಮುವಾದ, ಭ್ರಷ್ಟಾಚಾರ ಮತ್ತು ಭಯೋತ್ಪಾದಕತೆ ವಿರುದ್ಧ ಬಾಂಗ್ಲಾದೇಶದ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದ್ದ ಭಾರೀ ರ್‍ಯಾಲಿ ಮೇಲೆ ಎರಡು ಬಾಂಬ್ ದಾಳಿ ಎಸಗಿ ಆರು ಜನ ದುಡಿಯುವ ಜನರನ್ನು ಕೊಲ್ಲಲಾಗಿದೆ. ಈ ದುಷ್ಕೃತ್ಯಕ್ಕೆ ನಗರವಾಸಿಗಳು ಹಾಗೂ ವ್ಯಾಪಾರಸ್ಥರಿಂದ ಹಣ ಸುಲಿಯುವ ಗೂಂಡಾಗಳು ಮತ್ತಿತರ ದುಷ್ಕರ್ಮಿಗಳು ಹಾಗೂ ಕೋಮುವಾದಿ ಶಕ್ತಿಗಳು ಈ ಕೃತ್ಯಕ್ಕೆ ಕಾರಣವೆಂದು ಬಾಂಗ್ಲಾದೇಶದ ಕಮ್ಯುನಿಸ್ಟ್ ಪಕ್ಷ ಗುರುತಿಸಿದೆ.


ಈ ಕೃತ್ಯದ ವಿರುದ್ಧ 11 ಎಡಪಕ್ಷಗಳ ಸಂಯುಕ್ತ ರಂಗ ಸಂಘಟಿಸಿದ ಆರು ಗಂಟೆಗಳ ಮುಷ್ಕರ ಯಶಸ್ವಿಯಾಯಿತು ಮತ್ತು ಆ ಪ್ರದೇಶದ ಉಚ್ಚ ಪೋಲೀಸ್ ಅಧಿಕಾರಿಯನ್ನು ನಿರ್ಲಕ್ಷ್ಯಕ್ಕಾಗಿ ಉಚ್ಚಾಟಿಸಲಾಯಿತು.



ಹತ್ತು ಸಹಸ್ರ ಗಣ್ಯರಿದ್ದ ಸಭೆಯಲ್ಲಿ 'ಕಾಮ್ರೇಡ್ಸ್' ಎಂದು ನುಡಿ ಆರಂಭಿಸಿದ ಚಾಪ್ಲಿನ್ 40 ನಿಮಿಷಗಳ ಕಾಲ ನಿರರ್ಗಳವಾಗಿ, ನಿಷ್ಠುರವಾಗಿ ಭಾವಪೂರಿತವಾಗಿ ಮಾತನಾಡಿದ. ಆತ ಹಿಂದೆ ಮಾತನಾಡಿದ್ದು ಹಿಂದಿನ ಮಿಡಿತ-ತುಡಿತಗಳೇನು?

ಹಿಟ್ಲರ್‌ನ ಸೈನ್ಯವನ್ನು ಪುಡಿಗಟ್ಟುವುದು ಸೋವಿಯತ್ ಕೆಂಪು ಸೈನ್ಯಕ್ಕೆ ಹಾಗೂ ಅಲ್ಲಿನ ಜನರಿಗೆ ಅಮೇರಿಕಾ ಒಳಗೊಂಡು ಇತರರು ಬೆಂಬಲಿಸಬೇಕೆಂದದ್ದು ಯಾಕೆ? ಅದರ ಪರಿಣಾಮ...?





ಚಾರ್ಲಿ ಚಾಪ್ಲಿನ್
ಮಾಡರ್ನ್ ಟೈಮ್ಸ್ ಮತ್ತು ಕಮ್ಯುನಿಸಂ

ಜರ್ಮನಿ, ರಷ್ಯಾದ ಮೇಲೆ ಆಕ್ರಮಣಿಸಿದಂದಿನಿಂದ ಅಮೇರಿಕಾಕ್ಕೆ ಪೇಚಿಗಿಟ್ಟುಕೊಂಡಿತು. ತಾನು ರಷ್ಯಾಕ್ಕೆ ಸಹಾಯ ಮಾಡಿದರೆ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಬೆಂಬಲ ಕೊಟ್ಟಂತಾಗುತ್ತದೆ ಎಂಬ ಸಂದಿಗ್ಧತೆಯಲ್ಲಿ ಅಮೇರಿಕಾ ನರಳತೊಡಗಿತು.

ಅದೇ ಸಂದರ್ಭದಲ್ಲಿ ಒಂದು ಸಮಾರಂಭದಲ್ಲಿ ಅಮೇರಿಕಾದ ಮಾಜಿ ರಾಯಭಾರಿ ಜೋಸೆಫ್ ಡೇವಿಸ್ ರಷ್ಯಾವನ್ನು ಬೆಂಬಲಿಸಿ ಮಾತನಾಡಬೇಕಿತ್ತು. ಆದರೆ ಅನಾರೋಗ್ಯ ನಿಮಿತ್ತ ಆತ ಸಮಾರಂಭದಲ್ಲಿ ಪಾಲ್ಗೊಳ್ಳಲಾಗಿಲ್ಲ. ಆತನ ಪರವಾಗಿ ಮಾತನಾಡುವಂತೆ ಸಂಘಟಕರು ಚಾಪ್ಲಿನನ್ನು ಕೇಳಿಕೊಂಡರು. ಸನ್‌ಫ್ರಾನ್ಸಿಸ್ಕೋದ ಸುಮಾರು ಹತ್ತು ಸಹಸ್ರ ಮಂದಿ ಗಣ್ಯ ನಾಗರೀಕರು ಉಪಸ್ಥಿತರಿದ್ದ ಪ್ರಮುಖ ಸಮಾರಂಭ ಅದಾಗಿತ್ತು. ಚಾಪ್ಲಿನ್ ಎಂದೂ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮೂರ್‍ನಾಲ್ಕು ನಿಮಿಷಕ್ಕಿಂತ ಹೆಚ್ಚು ಕಾಲ ಮಾತಾಡಿದವನಲ್ಲ... ಅಂಥವನನ್ನು ಒಂದು ಗಂಟೆಗಿಂತ ಹೆಚ್ಚುಕಾಲ ಮಾತನಾಡುವಂತೆ ಸಂಘಟಕರು ಕೇಳಿಕೊಂಡಿದ್ದೇ ವಿಚಿತ್ರ.

ಸಭಿಕರೆದುರು ನಿಂತೊಡನೆ ಚಾಪ್ಲಿನ್ ಗಂಟಲು ಒಣಗಿತು, ಇಡೀದೇಹ ಬೆವರಲಾರಂಭಿಸಿತು, ಕೈಕಾಲುಗಳು ಗಡಗಡ ನಡುಗಲಾರಂಭಿಸಿದವು... ಆದರೂ ಧೈರ್ಯ ತಂದುಕೊಂಡು ಮಾತು ಆರಂಭಿಸಿಯೇ ಬಿಟ್ಟ.

'ಕಾಮ್ರೇಡ್ಸ್....' ಎಂದು ಇದ್ದಕ್ಕಿದ್ದಂತೆ ಸಭಿಕರನ್ನುದ್ದೇಶಿಸಿ ಸಂಭೋದಿಸಿದ.

ಸಭಿಕರೆಲ್ಲ ಹೋ ಎಂದು ನಗಾಡಿದರು.

ಚಾಪ್ಲಿನ್ ಮುಂದುವರಿದು ತಾನು ಕಾಮ್ರೇಡ್ ಅಲ್ಲವೆಂದೂ, ಯಾವುದೇ ಎಡಪಂಥೀಯನಲ್ಲವೆಂದೂ ಮರುಗಳಿಗೆಯೇ ಸ್ಪಷ್ಟಪಡಿಸಿದ. "ಕಮ್ಯುನಿಸ್ಟರೆಲ್ಲರೂ ಮನುಷ್ಯರೆ, ಕಮ್ಯುನಿಸ್ಟರ ತಾಯಿ ಒಬ್ಬಳೆ... ಉಳಿದವರ ತಾಯಿ ಕೂಡ ಒಬ್ಬಳೇ... ಇದನ್ನು ಅರ್ಥಮಾಡಿಕೊಳ್ಳಲಿಕ್ಕೆ ಎಲ್ಲರೂ ಕಮ್ಯುನಿಸ್ಟರೇ ಆಗಬೇಕೆಂದೇನೂ ಇಲ್ಲ... ಮಾನವೀಯತೆ ಇರುವ ಮನುಷ್ಯರಾಗಿದ್ದರೆ ಮಾತ್ರ ಸಾಕು. ಇಂದು ನಾಝಿಗಳ ಆಕ್ರಮಣದಿಂದ ರಷ್ಯದಲ್ಲಿರುವ ಪ್ರತಿಯೋರ್ವನ ತಾಯಿ ದುಃಖಿಸುತ್ತಿದ್ದಾಳೆ.... ತನ್ನ ಮಕ್ಕಳ ಸಾವಿಗಾಗಿ ಆಕೆ ಅರಣ್ಯರೋದನ ಮಾಡುತ್ತಿದ್ದಾಳೆ. ಆದ್ದರಿಂದ ರಷ್ಯನ್ ತಾಯಿ ದುಃಖ ಪರಿಹರಿಸುವುದು ಪ್ರತಿಯೊಬ್ಬ ನಾಗರೀಕನ ನೈತಿಕ ಜವಾಬ್ದಾರಿ. ರಷ್ಯನ್ ಪ್ರಜೆಗಳೆಲ್ಲ ನಮ್ಮ ಮಿತ್ರರೇ. ಅವರಿಗೆ ಕೇವಲ ಧನ ಸಹಾಯ ಮಾಡಿದರಷ್ಟೇ ಸಾಲದು. ಅವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ಮಾತ್ರ ಯುದ್ಧ ಮಾಡುತ್ತಿಲ್ಲ. ನಮ್ಮೆಲ್ಲರ ಬದುಕನ್ನು ಮೃತ್ಯುವಿನ ಬಾಯಿಯಿಂದ ರಕ್ಷಿಸಲು ಅವರು ಜರ್ಮನ್ನರ ಆಕ್ರಮಣದ ವಿರುದ್ಧ ಹೋರಾಡುತ್ತಿದ್ದಾರೆ. ಆದ್ದರಿಂದ ಅಮೇರಿಕಾ ತಾತ್ವಿಕ ಭೇದ ಮರೆತು ರಷ್ಯಾಕ್ಕೆ ಸಹಾಯ ಹಸ್ತ ಚಾಚಬೇಕಿದೆ. ಆ ಕಾರಣದಿಂದ ದ್ವಿತೀಯ ರಂಗವನ್ನು ಕಟ್ಟುವ ಕೆಲಸ ಮಾಡಬೇಕು..."

ಹೀಗೆ ಸುಮಾರು ನಲ್ವತ್ತು ನಿಮಿಷಗಳ ಕಾಲ ಚಾಪ್ಲಿನ್ ಖಚಿತವಾಗಿ, ಅರ್ಥ ಪೂರ್ಣವಾಗಿ ಮಾತನಾಡಿದ.

ಅವನ ಮಾತುಗಳನ್ನು ಸಮಾಧಾನ ಚಿತ್ತದಿಂದ ಆಲಿಸಿದ ಸಭಿಕರು ಒಂದು ಕ್ಷಣ ಮೂಕ ವಿಸ್ಮಿತರಾದರು. ಏಳು ನಿಮಿಷ ಕಾಲ ಚಪ್ಪಾಳೆ ತಟ್ಟಿ ಅಭಿನಂದಿಸಿದರು. ತಂತಮ್ಮ ತಲೆಮೇಲಿನ ಟೋಪಿಗಳನ್ನು ತೆಗೆದು ಮೆಚ್ಚುಗೆ ಸೂಚಿಸಿದರು. ಚಾಪ್ಲಿನ್‌ನ ನಿರ್ಭೀತ ಮಾತುಗಳಿಗೆ ತಲೆದೂಗಿದರು.

ಅವರ ಧನಾತ್ಮಕ ಪ್ರತಿಕ್ರಿಯೆಯಿಂದ ಚಾಪ್ಲಿನ್ ಒಂದು ಕ್ಷಣ ದಿಗ್ಭ್ರಾಂತನಾದ. ಪರಿಸ್ಥಿತಿಯ ಒತ್ತಡದಲ್ಲಿ ಸಿಲುಕಿ ತಾನೆಲ್ಲಿ ರಾಜಕೀಯ ರಂಗದಲ್ಲಿಳಿದಿರುವೆನೋ ಎಂದು ತನ್ನನ್ನು ತಾನು ಪ್ರಶ್ನಿಸಿಕೊಂಡ.

ನಂತರ ಚಾಪ್ಲಿನ್ ಸಭಿಕರಿಂದ ಬೀಳ್ಕೊಂಡು ಡಡ್ಲಿ ಫಿಲ್ಡ್ ಮೆಲೋನ್, ಜಾನ್ ಗ್ಯಾರಿಫೀಲ್ಡ್‌ನೊಂದಿಗೆ ಬೇರೆ ಕಡೆ ರಾತ್ರಿ ಊಟಕ್ಕೆಂದು ಹೋದ. ಊಟದ ನಡುವೆ ಗ್ಯಾರಿಫೀಲ್ಡ್ ಚಾಪ್ಲಿನ್‌ನ ಭಾಷಣದ ತುಣುಕುಗಳನ್ನು ಮೆಲುಕುಹಾಕಿದ. ಅಮೇರಿಕದಂಥ ರಾಷ್ಟ್ರದಲ್ಲಿ ರಷ್ಯದಂಥ ಎಡಪಂಥೀಯ ದೇಶವನ್ನು ಸಮರ್ಥಿಸುವ ಧೈರ್ಯ ತೋರಿಸಿದ್ದಕ್ಕೆ ಆತ ಚಾಪ್ಲಿನ್‌ನನ್ನು ಅಭಿನಂದಿಸಿದ. ಎಡ ಪಂಥೀಯನೆಂದು ಹಣೆಪಟ್ಟಿಯನ್ನು ಗ್ಯಾರಿಫೀಲ್ಡ್‌ರಂಥವರು ಅಂಟಿಸಿದ್ದಕ್ಕೆ ಚಾಪ್ಲಿನ್‌ಗೆ ಬೇಸರವಾಯಿತು.

ಬೇವರ್ಲಿ ಹಿಲ್ಸ್‌ನ ತನ್ನ ನಿವಾಸದಲ್ಲಿ ತನ್ನ ಪಾಡಿಗೆ ತಾನು ಉಳಿಯಬೇಕೆಂದು ಚಾಪ್ಲಿನ್ ಎಷ್ಟೋ ಪ್ರಯತ್ನಿಸಿದ. ಆದರೆ ಸಂಘಟನೆಗಳು ಅವನನ್ನು ತನ್ನ ಪಾಡಿಗೆ ತಾನಿರಲು ಬಿಡಲಿಲ್ಲ. ಮುಖ್ಯವಾಗಿ ಅಮೆರಿಕಾದ ಕಾರ್ಮಿಕ ಸಂಘಟನೆಗಳು ರಷ್ಯಾದ ಪರ ಚಟುವಟಿಕೆಗಳನ್ನು ವಿಸ್ತೃತವಾಗಿ ಆರಂಭಿಸಿದ್ದವು.

ಕೆಲವು ದಿನಗಳ ನಂತರ ನ್ಯೂಯಾರ್ಕ್‌ನ ಮಾಡಿಸನ್ ಸ್ಕ್ವೇರ್‌ನಲ್ಲಿ ಸುಮಾರು ಅರವತ್ತು ಸಹಸ್ರ ಮಂದಿ ಶ್ರಮಜೀವಿಗಳು ಸಭೆ ಸೇರಿದರು. ಸುಮಾರು ಇನ್ನೂರಾ ಇಪ್ಪತ್ತು ಕಾರ್ಮಿಕ ಸಂಘಟನೆಗಳು ಆ ಸಭೆಯನ್ನು ಏರ್ಪಡಿಸಿದ್ದವು. ಯುದ್ಧದಲ್ಲಿ ರಷ್ಯಾ ಉಳಿವುದೋ! ಅಳಿವುದೋ ಎನ್ನುವ ವಿಷಯದ ಬಗ್ಗೆ ಕನಿಷ್ಟ ಟೆಲಿಫೋನ್ ಮೂಲಕವಾದರೂ ಮಾತಾಡಬೇಕೆಂದು ಅವರು ಕೇಳಿಕೊಂಡರು. ಅವರ ಮನವಿಯನ್ನು ತಿರಸ್ಕರಿಸಲು ಚಾಪ್ಲಿನ್‌ನ ಮನಸ್ಸಾಕ್ಷಿ ಒಪ್ಪಲಿಲ್ಲ. **ಸ್ವಭಾವತಃ ಶೋಷಿತರ, ಶ್ರಮಜೀವಿಗಳ, ಕಾರ್ಮಿಕರ ಪರವಾಗಿ ಆಲೋಚಿಸುತ್ತಿದ್ದ ಮತ್ತು ಮುಖ್ಯವಾಗಿ ಯುದ್ಧ ವಿರೋಧಿಯಾಗಿದ್ದ ಅವನು ಕ್ಯಾಲಿಫೋರ್ನಿಯಾದಿಂದಲೇ ದೂರವಾಣಿ ಮೂಲಕ ಹದಿನಾಲ್ಕು ನಿಮಿಷಗಳ ಕಾಲ ಮಾತಾಡಿದ,** ಅವ ಆ ಅಮೂಲ್ಯ ಭಾಷಣವನ್ನು ಸಿಐಓ(ಕಾಂಗ್ರೆಸ್ ಆಫ್ ಇಂಡಸ್ಟ್ರಿಯಲ್ ಆರ್ಗನೈಜೇಷನ್) ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸಿತು.

ಅವನ ಭಾಷಣದ ಸಾರ:

"ಮಿತ್ರದೇಶಗಳ ಭವಿಷ್ಯ ರಷ್ಯನ್ ಕಮ್ಯುನಿಸ್ಟರ ಕೈಯಲ್ಲಿದೆ. ಒಂದು ವೇಳೆ ರಷ್ಯ ಯುದ್ಧದಲ್ಲಿ ಅಪಜಯ ಹೊಂದಿದಲ್ಲಿ ಇಡೀ ಪ್ರಪಂಚದಲ್ಲಿ ಫಲವತ್ತಾದ ಭೂಪ್ರದೇಶವೆಂದು ಹೆಸರಾಗಿರುವ ಏಷ್ಯಾ ಖಂಡ ನಾಝಿಗಳ ಪಾಲಾಗುತ್ತದೆ. ಪೂರ್ವಕ್ಕಿರುವ ಭೂಭಾಗವನ್ನು ಜಪಾನ್ ಕಬಳಿಸದೇ ಬಿಡುವುದಿಲ್ಲ. ಪ್ರಪಂಚದಲ್ಲಿರುವ ಯುದ್ಧ ಸಂಪನ್ಮೂಲಗಳು ನಾಝಿಗಳ ವಶವಾಗುತ್ತವೆ. ಅವನ್ನೆಲ್ಲ ಬಳಸಿಕೊಂಡು ಹಿಟ್ಲರ್ ಮತ್ತಷ್ಟು ಬಲಶಾಲಿಯಾಗದೆ ಇರುವುದಿಲ್ಲ.....


ಸಾರಿಗೆ ಸಂಪರ್ಕಗಳು ಕಡಿದು ಹೋಗುವುದರಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಆರ್ಥಿಕ ವ್ಯವಸ್ಥೆ ಕುಸಿಯುತ್ತದೆ. ಆದ್ದರಿಂದ ಒಂದು ವೇಳೆ ಹಿಟ್ಲರ್ ರಷ್ಯದ ಮೇಲೆ ಜಯ ಸಾಧಿಸಿದರೆ ನಾವು (ಅಮೇರಿಕನ್ನರು) ಅನೇಕ ಕಷ್ಟಗಳಿಗೆ ಗುರಿಯಾಗಬಹುದು. ಆದ್ದರಿಂದ ಅಂತರ್‍ರಾಷ್ಟ್ರೀಯವಾಗಿ ಪ್ರಜಾಪ್ರಭುತ್ವ ಉಳಿಯಬೇಕೆಂದರೆ ನಾವು ರಷ್ಯಾವನ್ನು ಸೋಲಿನ ದವಡೆಯಿಂದ ಕಾಪಾಡಬೇಕು. ಇದು ಪ್ರತಿಯೊಂದು ಮಿತ್ರ ರಾಷ್ಟ್ರಗಳ ಕರ್ತವ್ಯ. ನಮ್ಮ ಪ್ರಪಂಚ, ನಮ್ಮ ನಾಗರೀಕತೆ ಹಾಳಾಗುತ್ತಿರುವುದನ್ನು ನೋಡುತ್ತ ಕೂಡುವುದು ಹೇಗೆ ಸಾಧ್ಯ! ನಾಝಿಯ ತೋಳಗಳು ಕುರಿಗಳ ಮಂದೆಯನ್ನೇ ಕಬಳಿಸುತ್ತಿರುವಾಗ ಮೂಕ ಪ್ರೇಕ್ಷಕರಂತೆ ನೋಡುತ್ತ ಕೂಡ್ರುವುದು ಸರಿಯಲ್ಲ.. ನಾಝಿಯ ಸಂಧಾನ ಸೂತ್ರಗಳನ್ನು ಒಪ್ಪಿಕೊಂಡರೆ ಫ್ಯಾಸಿಸಂ ಧೋರಣೆಯನ್ನು ಒಪ್ಪಿಕೊಂಡಂತಾಗುತ್ತದೆ. ಆದ್ದರಿಂದ ನಾವು ಗುಲಾಮರಾಗುತ್ತೇವೆ. ನಮ್ಮ ಸ್ವಾತಂತ್ರ್ಯ ಮಣ್ಣು ಪಾಲಾಗುತ್ತದೆ, ನಾವು ನಾಝಿಗಳ ಕೈಗೊಂಬೆಗಳಾಗುತ್ತೇವೆ. ಇಡೀ ಜಗತ್ತನ್ನು ಗೆಸ್ಟಪೋ ಆಳುತ್ತದೆ. ಅವರು ನಾಝಿಜಂ ವಿರೋಧಿಗಳನ್ನು ಸರ್ವನಾಶ ಮಾಡುತ್ತಾರೆ. ಮಾನವಕುಲ ಮೂಲಭೂತ ಹಕ್ಕುಗಳನ್ನು ಕಳೆದುಕೊಳ್ಳುತ್ತದೆ. ಮಾನವ ಕುಲದ ಪುರೋಭಿವೃದ್ಧಿ ಕುಂಠಿತವಾಗುತ್ತದೆ. ನಾವು ಎಚ್ಚರಗೊಂಡು ಶಾಂತಿವಾದಿಗಳ ಸಂಗಡ ಜೊತೆಗೂಡದಿದ್ದಲ್ಲಿ ಹಿಟ್ಲರ್ ಇಡೀ ಪ್ರಪಂಚವನ್ನು ತನ್ನ ದುರ್ಮಾರ್ಗಕ್ಕೆ ಬಲಿಕೊಡುತ್ತಾನೆ. ಆದ್ದರಿಂದ ರಷ್ಯಾದ ವಿಜಯಕ್ಕಾಗಿ ನೀವೆಲ್ಲ ಫ್ಯಾಕ್ಟರಿಗಳಲ್ಲಿ, ಹೊಲಗಳಲ್ಲಿ, ದುಡಿಯುತ್ತಿರುವ ಪ್ರಪಂಚದ ನಾಗರಿಕರೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು, ಅಮೇರಿಕಾ, ಬ್ರಿಟಿಷ್ ರಾಷ್ಟ್ರಗಳು ಈ ಉದ್ದೇಶಕ್ಕಾಗಿ ಸಹಕರಿಸಬೇಕು. ದುಡಿಯಬೇಕು, ಸಾಮೂಹಿಕ ಪ್ರಯತ್ನದಿಂದ ಅಸಾಧ್ಯವಾದುದು ಸಾಧ್ಯವಾಗುತ್ತದೆ.

ಚಾಪ್ಲಿನ್‌ನ ಈ ಭಾಷಣ ಅಮೇರಿಕಾದ ಪ್ರಜೆಗಳ ಮೇಲೆ ಅಪಾರ ಪ್ರಭಾವ ಬೀರಿತು.

ಚಾರ್ಲ್ಸ್ ಸ್ಪೆನ್ಸರ್ ಚಾಪ್ಲಿನ್ ನಾಝಿಜಂ ವಿರುದ್ಧ ಭಾಷಣ ಮಾಡತೊಡಗಿದಂದಿನಿಂದ ಅವನು ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಎಷ್ಟೋ ಗೆಳೆಯರು ಅವನ ಕಣ್ತಪ್ಪಿಸಿ ತಿರುಗಾಡತೊಡಗಿದರು. ವಿನಾಕಾರಣ ಅವನನ್ನು ದೂರ ಇಡಲಾರಂಭಿಸಿದರು. ಇದರಿಂದಾದ ಬೇಸರದಿಂದ ಅವನು ನಂತರ ಚೇತರಿಸಿಕೊಂಡ.

ತಾನು 'ದಿ ಗ್ರೇಟ್ ಡಿಕ್ಟೇಟರ್' ಚಿತ್ರ ತಯಾರಿಸಿದಂದನಿಂದ ಇಷ್ಟೆಲ್ಲ ತೊಂದರೆಗೊಳಗಾಗುತ್ತಿರುವುದು; ಒಬ್ಬ ಕಲಾವಿದನಾಗಿ ತಾನು ಜನಸಾಮಾನ್ಯರಿಂದ ದೂರ ಉಳಿಯುವುದು ಹೇಗೆ ಸಾಧ್ಯ! ಒಂಟಿತನದ ಬೇಸರ ನಿವಾರಿಸಿಕೊಳ್ಳಲು ಅವನು ಇಂಥ ಜನಪರ ಚಟುವಟಿಕೆಗಳಲ್ಲಿ ಕ್ರಿಯಾಶೀಲನಾಗತೊಡಗಿದ್ದ, ತನ್ನನ್ನು ಅರ್ಥಮಾಡಿಕೊಂಡು ಸಹಕರಿಸುವಂಥವರು ಯಾರು ಇರಲಿಲ್ಲ. ಕೈ ಹಿಡಿದ ಹೆಂಡತಿ ಪೌಲೆಟ್ ಚಾಪ್ಲಿನ್‌ನಿಂದ ದೂರ ಉಳಿದುಬಿಟ್ಟಳು.

(ಮುಂದುವರಿಯುವುದು)



ಕಠಿಣ ಸಾಧನೆಗಳ ಮೂಲಕ
ಉನ್ನತ ಪ್ರಶಸ್ತಿ
ಭಾರತ ರತ್ನ
ಪಡೆದ
ಪ್ರಖ್ಯಾತ ಶಹನಾಯ್ ವಾದಕ
ಬಿಸ್ಮಿಲ್ಲಾ ಖಾನ್
ಮತ್ತು
ಖ್ಯಾತ ಗಾಯಕಿ
ಲತಾ ಮಂಗೇಶ್ಕರ್



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ